ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 28 ಜುಲೈ 7-13, 1997 ಬೆಲೆ ರೂ. 2.00

ಜನ ಸಾಮಾನ್ಯರಿಗೆ ಮತ್ತೆ ವಿದ್ಯುತ್‌ದರ ಏರಿಕೆಯ ಹೊರೆ

ಜುಲೈ 15 ರಂದು ರಾಜ್ಯವ್ಯಾಪಿ ಪ್ರತಿಭಟನೆಗೆ ಸಿಪಿಐ(ಎಂ) ಕರೆ

ಆರ್ಥಿಕ ಉದಾರೀಕರಣದ ನೀತಿಗಳನ್ನು ಅನುಸರಿಸುವ ಸರಕಾರ ಬೆಲೆಯೇರಿಕೆಗಳ ಸರಕಾರವಾಗುತ್ತದೆ ಎಂಬ ಎಡಪಕ್ಷಗಳ ಎಚ್ಚರಿಕೆ ನಿಜವಾಗುತ್ತಿದೆ. ಎನ್ರೋನ್, ಕೊಜೆಂಟ್ರಿಕ್ಸ್ ನಂತಹ ವಿದೇಶಿ, ಖಾಸಗಿ ವಿದ್ಯುತ್ ಕಂಪನಿಗಳಿಗೆ ಮಣೆ ಹಾಕುವ 'ಉದಾರ' ನೀತಿಗಳಿಂದಾಗಿ ರಾಜ್ಯದ, ದೇಶದ ಜನಸಾಮಾನ್ಯರು ಭಾರಿ ಬೆಲೆ ತೆರಬೇಕಾದೀತೆಂಬ ಬಗ್ಗೆ ಈಗ ಯಾರಿಗೂ ಸಂದೇಹವುಳಿದಿಲ್ಲ. ಸಮಸ್ಯೆಗಳನ್ನು ಎದುರಿಸಲು ಈ 'ಉದಾರೀಕರಣ'ದ ಸರಕಾರಗಳ ಬಳಿಯಿರುವ ಏಕೈಕ ಸುಲಭದ ಸಾಧನವೆಂದರೆ 'ಬೆಲೆಯೇರಿಕೆ'! ಅಂದರೆ ತಪ್ಪು ಯಾರದೇ ಆದರೂ ಶಿಕ್ಷೆ ಮಾತ್ರ ಜನಸಾಮಾನ್ಯರಿಗೆ ಇನ್ನಷ್ಟು ಮತ್ತಷ್ಟು ಬೆಲೆಯೇರಿಕೆಗಳ ಮೂಲಕ.

ಸರಿಯಾಗಿ ಒಂದು ವರ್ಷದ ಹಿಂದೆ ಅಂದರೆ ಜುಲೈ 1996 ರಿಂದ ಪಟೇಲ್ ಸರಕಾರ ವಿದ್ಯುತ್‌ದರಗಳನ್ನು ತೀವ್ರವಾಗಿ ಏರಿಸಿತು. ಜನಗಳು ಪ್ರತಿಭಟಿಸಿದಾಗ ಯಾರು ಏನೇ ಹೇಳಲಿ ಜನಾಭಿಪ್ರಾಯಕ್ಕೆ ತಾನು ಜಗ್ಗುವುದಿಲ್ಲ ಎಂಬ ಪ್ರಜಾಪ್ರಭುತ್ವ-ವಿರೋಧಿ ನಿಲುವು ತಳೆದ ಮುಖ್ಯ ಮಂತ್ರಿಗಳು ಕೊನೆಗೂ ಬಗ್ಗಬೇಕಾಯಿತು. ರೈತರ ಒಂದು ಅಶ್ವಶಕ್ತಿ ಸಾಮರ್ಥ್ಯದ ಪಂಪ್‌ಸೆಟ್‌ಗೆ ವರ್ಷಕ್ಕೆ 300 ರೂ. ವಿಧಿಸಿದ್ದನ್ನು 100 ರೂಪಾಯಿಗಿಳಿಸ ಬೇಕಾಯಿತು. ಬೇರೆ ದರಗಳ ಹೆಚ್ಚಳಗಳಲ್ಲಿಯೂ ಅದೇ ರೀತಿ ಕಡಿತ ಮಾಡ ಬೇಕಾಯಿತು.

ಆದರೆ ಈಗ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ದಿಢೀರನೇ ಜೂನ್ 30 ರಂದು ಒಂದು ಅಧಿಸೂಚನೆ ಹೊರಡಿಸಿ ಕೃಷಿ, ವಾಣಿಜ್ಯ ಮತ್ತು ಗೃಹ ಬಳಕೆಯ ವಿದ್ಯುತ್ ದರಗಳನ್ನು ದಿಢೀರನೆ ಜುಲೈ ಒಂದ ರಿಂದಲೇ ಶೇ 10 ರಿಂದ ಶೇ 15 ರವರೆಗೂ, ರೈತರ ಒಂದು ಅಶ್ವಶಕ್ತಿ ಸಾಮರ್ಥ್ಯದ ಪಂಪ್‌ಸೆಟ್‌ಗೆ ವರ್ಷಕ್ಕೆ 100 ರೂಪಾಯಿ ದರವನ್ನು 300 ರೂಪಾಯಿಗೂ ಹೆಚ್ಚಿಸಿದೆ. ಇದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಬಲವಾಗಿ ಖಂಡಿಸಿದೆ. ಅಸಮರ್ಪಕ ವಿದ್ಯುತ್ ಪೂರೈಕೆ ಯಿಂದಾಗಿ ರಾಜ್ಯದ ಕೈಗಾರಿಕೆಗಳೂ, ಕೃಷಿ ಕರೂ ಮತ್ತು ಸಾರ್ವಜನಿಕರೂ ತೊಂದರೆ ಯನ್ನನುಭವಿಸುತ್ತಿರುವಾಗ, ಸರಿಯಾಗಿ ವಿದ್ಯುತ್ ಪೂರೈಕೆ ಮಾಡಲು ಕ್ರಮ ಕೈಗೊಳ್ಳದೆ, ತಮ್ಮ ತಪ್ಪುಗಳಿಂದಾಗಿ ನಷ್ಟ ಅನುಭವಿಸಬೇಕಾಗಿ ಬಂದಿರುವುದನ್ನು ತುಂಬಿಸಲು ಈ ರೀತಿ ಅತಿಯಾಗಿ ದರ ಹೆಚ್ಚಿಸಿರುವುದು ಅನ್ಯಾಯವೆಂದು ಕಾರ್ಯ ದರ್ಶಿ ಮಂಡಳಿ ಅಭಿಪ್ರಾಯ ಪಟ್ಟಿದೆ. ಕೆ.ಇ.ಬಿ.ಯವರೇ ಹೇಳುವಂತೆ ಉದ್ಯಮಿ ಗಳಿಂದ, ಸರಕಾರದಿಂದ ಸಾವಿರಾರು ರೂಪಾಯಿ ಬಾಕಿ ಬರಬೇಕಾಗಿರುವಾಗ, ಭ್ರಷ್ಟಾಚಾರ, ವಿದ್ಯುತ್ ಸೋರುವಿಕೆಗಳಿಂದ ಹಾನಿ ತಟ್ಟುತ್ತಿರುವಾಗ, ಅವುಗಳನ್ನು ಸರಿ ಪಡಿಸಲು ಕ್ರಮ ಕೈಗೊಳ್ಳದೆ ಜನರ ಮೇಲೆ ಭಾರ ಹೇರುವ ನೀತಿ ಸಮರ್ಥನೀಯ ವಲ್ಲೆಂದು ಕಾರ್ಯದರ್ಶಿ ಮಂಡಳಿ ಹೇಳಿದೆ. ವಿದ್ಯುತ್ ಪೂರೈಕೆಯನ್ನು ಸಮರ್ಪಕವಾಗಿ ಒದಗಿಸುವ ತನಕ, ತನ್ನ ಆಡಳಿತೆಯಲ್ಲಿ ಕುಂದುಕೊರತೆಗಳನ್ನು ಸರಿಪಡಿಸಿ, ಬಾಕಿ ಹಣವನ್ನೆಲ್ಲ ವಸೂಲಿ ಮಾಡುವ ತನಕ ದರ ಹೆಚ್ಚಿಸಬಾರದೆಂದು ಕಾರ್ಯದರ್ಶಿಮಂಡಳಿ ಕೆ.ಇ.ಬಿ.ಯನ್ನು ಒತ್ತಾಯಿಸಿದೆ.

ಸರಕಾರಿ ಪಡಿತರ ಅಂಗಡಿಗಳಲ್ಲಿ ವಿತರಣೆ ಮಾಡುತ್ತಿರುವ ಆಹಾರ ಧಾನ್ಯ ಗಳನ್ನು ಕಡಿತಗೊಳಿಸಿ, ಅವುಗಳ ಬೆಲೆ ಹೆಚ್ಚಿಸಿ ರುವುದನ್ನೂ ಜುಲೈ 1 ರಂದು ಬೆಂಗಳೂರಿನಲ್ಲಿ ಸಭೆ ಸೇರಿದ ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿಮಂಡಳಿ ಖಂಡಿಸಿದೆ. ಇದರಿಂದ ಬಡವರಿಗೂ, ಮಧ್ಯಮವರ್ಗ ದವರಿಗೂ ಅಪಾರ ಅನ್ಯಾಯವಾಗುತ್ತಿದ್ದು, ಪಡಿತರ ವ್ಯವಸ್ಥೆಯ ಕುರಿತು ಜನರಲ್ಲಿ ಭ್ರಮ ನಿರಸನವಾಗುತ್ತಿರುವುದರಿಂದ ಕೇರಳ-ಪಶ್ಚಿಮಬಂಗಾಳ ಸರಕಾರಗಳಂತೆ ಪಟೇಲ ಸರಕಾರವೂ ಕೂಡ ಕೇಂದ್ರದಿಂದ ಹೆಚ್ಚು ಆಹಾರ ಧಾನ್ಯ ತರಿಸಬೇಕೆಂದೂ, ರಾಜ್ಯ ದಲ್ಲಿಯೂ ಲೆವಿ ಮೂಲಕ ಹೆಚ್ಚು ದವಸ ಧಾನ್ಯ ಸಂಗ್ರಹಿಸಿ ಹಿಂದಿನ ದರಗಳಲ್ಲಿಯೇ ಅವುಗಳನ್ನು ಮೊದಲಿನಂತೆಯೇ ವಿತರಣೆ ಮಾಡಬೇಕೆಂದು ಕಾರ್ಯದರ್ಶಿ ಮಂಡಳಿ ಸರಕಾರವನ್ನು ಒತ್ತಾಯಿಸಿದೆ. ಮತ್ತೆ ವಿದ್ಯುತ್ ದರ ಏರಿಕೆ ಪಡಿತರ ವ್ಯವಸ್ಥೆಯಲ್ಲಿ **ಕಡಿತಗಳ ಈ ಜನ-ವಿರೋಧಿ ಕ್ರಮಗಳ ವಿರುದ್ಧ ಜೂನ್ 15 ರಂದು ರಾಜ್ಯದಾದ್ಯಂತ ಧರಣಿ, ಪ್ರತಿಭಟನೆಗಳನ್ನು ನಡೆಸಬೇಕೆಂದೂ ಕರೆ ನೀಡಿದೆ.** ○

ಪ್ರಾದೇಶಿಕ ಖಾಸಗಿ ಬ್ಯಾಂಕುಗಳ ಸ್ಥಾಪನೆ ವಿರುದ್ಧ ಬ್ಯಾಂಕ್ ನೌಕರರ ಮುಷ್ಕರ

ಜುಲೈ 4, 1997, ಬ್ಯಾಂಕ್‌ನೌಕರರ ಐಕ್ಯ ಚಳುವಳಿಯಲ್ಲಿ ಹೊಸದೊಂದು ಮೈಲಿಗಲ್ಲು. 10 ಲಕ್ಷಕ್ಕೂ ಹೆಚ್ಚು ಬ್ಯಾಂಕು ನೌಕರರು, ಅಧಿಕಾರಿ ವರ್ಗದವರು ಸೇರಿ ಕೇಂದ್ರದ ಸಂಯುಕ್ತ ರಂಗ ಸರಕಾರವು ಅನುಸರಿಸುತ್ತಿರುವ ಬ್ಯಾಂಕುಗಳ ಖಾಸಗೀಕರಣ ಧೋರಣೆಯ ವಿರುದ್ಧ ಅತ್ಯಂತ ಯಶಸ್ವಿ ಮುಷ್ಕರ ನಡೆಸಿದರು.

ಹಣಕಾಸು ಸಚಿವ ಚಿದಂಬರಂ ರವರು ಬಜೆಟ್ಟಿನಲ್ಲಿ ನಮೂದಿಸಿದಂತೆ ಒಂದು ಅಥವಾ ಎರಡು ಜಿಲ್ಲೆಗಳಿಗೆ ಸೇರಿದಂತೆ ಖಾಸಗಿ ಬ್ಯಾಂಕುಗಳನ್ನು ತೆರೆಯಲು ಅನುಮತಿ ನೀಡುವುದನ್ನು ಬ್ಯಾಂಕ್ ನೌಕರರು ವಿರೋಧಿಸುತ್ತಿದ್ದಾರೆ.

'ಬ್ಯಾಂಕ್ ಸಂಘಟನೆಗಳ ಐಕ್ಯ ವೇದಿಕೆ' ಯ ಹೆಸರಿನಲ್ಲಿ ನೌಕರ ವರ್ಗದ ಐದು ಸಂಘಟನೆಗಳು ಮತ್ತು ಅಧಿಕಾರಿಗಳ ನಾಲ್ಕು ಸಂಘಟನೆಗಳು ಮುಷ್ಕರಕ್ಕೆ ಕರೆ ಕೊಟ್ಟಿದ್ದವು. ಅಖಿಲ ಭಾರತದಾದ್ಯಂತ ಎಲ್ಲಾ ನಗರ, ಪಟ್ಟಣಗಳಲ್ಲಿ, ಹಳ್ಳಿ ಪ್ರದೇಶಗಳಲ್ಲೂ ಮುಷ್ಕರವು ಯಶಸ್ವಿಯಾಗಿದೆ.

ಈ ಮುಷ್ಕರದಲ್ಲಿ 196 ಗ್ರಾಮೀಣ ಬ್ಯಾಂಕುಗಳಿಗೆ ಸೇರಿದ ನೌಕರರೂ ಭಾಗವಹಿಸಿದ್ದರು. ಸಮಾನ ಕೆಲಸಕ್ಕೆ ಸಮಾನ ವೇತನದ ತತ್ವದಂತೆ ವಾಣಿಜ್ಯ ಬ್ಯಾಂಕು ಗಳಲ್ಲಿರುವ ವೇತನ ಮತ್ತು ಸೌಲಭ್ಯಗಳನ್ನು ಗ್ರಾಮೀಣ ಬ್ಯಾಂಕುಗಳ ನೌಕರರಿಗೆ ನೀಡ ಬೇಕೆಂದು ನ್ಯಾಯಾಲಯ ಆದೇಶ ನೀಡಿದ್ದರೂ 6ನೇ ದ್ವಿಪಕ್ಷೀಯ ಒಪ್ಪಂದ ಮತ್ತು ಪೆನ್ಶನ್ ಸೌಲಭ್ಯ ವನ್ನು ಗ್ರಾಮೀಣ ಬ್ಯಾಂಕುಗಳ ನೌಕರ ರಿಗೆ ವಿಸ್ತರಿಸಿಲ್ಲ, ಇದನ್ನು ಗ್ರಾಮೀಣ ಬ್ಯಾಂಕು ಗಳ ನೌಕರರು ವಿರೋಧಿಸಿದ್ದು, ಮಾತ್ರವಲ್ಲದೆ

ಪುಟ 6 ನೋಡಿ

ಸಿಬಿಐ ನಿರ್ದೇಶಕರ ಬದಲಾವಣೆ ಏನು ಸಂಕೇತ ನೀಡಲಿಕ್ಕೆ-ಎಡ ಪಕ್ಷಗಳ ಪ್ರಶ್ನೆ

ಬೋಫೋರ್ಸ್, ಹವಾಲಾ, ಮೇವು ಹಗರಣ ಇತ್ಯಾದಿಗಳಲ್ಲಿ ಹಲವು ಉನ್ನತ ರಾಜಕಾರಣಿಗಳು ಹಾಗೂ ಅಧಿಕಾರಿಗಳ ವಿಚಾರಣೆ ನಡೆಯುತ್ತಿರುವಾಗ ಸಿಬಿಐ ನಿರ್ದೇಶಕ ಜೋಗಿಂದರ್ ಸಿಂಗ್‌ರನ್ನು ಆ ಹುದ್ದೆಯಿಂದ ತೆಗೆದಿರುವುದು ತಪ್ಪಿತಸ್ಥರನ್ನು ಪತ್ತೆಹಚ್ಚುವ ಪ್ರಕ್ರಿಯೆಗೆ ಅಡ್ಡಿಯುಂಟು ಮಾಡುವ ಪ್ರಯತ್ನವಾಗಿ ಕಾಣುತ್ತದೆ ಎಂದು ಎಡಪಕ್ಷಗಳು ಖೇದ ವ್ಯಕ್ತಪಡಿಸಿವೆ. ಇದು ಶ್ರೀಯುತ ಜೋಗಿಂದರ್ ಸಿಂಗ್‌ರವರ ಸಾಮರ್ಥ್ಯ, ಅಸಾಮರ್ಥ್ಯದ ಪ್ರಶ್ನೆಯೂ ಅಲ್ಲ, ಇಂತಹ ಒಂದು ಕ್ರಮ ಕೈಗೊಳ್ಳುವ ಪ್ರಧಾನ ಮಂತ್ರಿಗಳ ಅಧಿಕಾರದ ಪ್ರಶ್ನೆಯೂ ಅಲ್ಲ. ಪ್ರಶ್ನೆ ಮುಖ್ಯವಾಗಿ ಯಾವ ಸಮಯ ದಲ್ಲಿ ಇಂತಹ ಪ್ರಯತ್ನ ನಡೆದಿದೆ, ಅದು ನೀಡುವ ಸಂಕೇತ ಏನು ಎಂದು. ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ನಿವಾರಿಸಲು ಸಂಯುಕ್ತ ರಂಗ ಕಟಿಬದ್ಧ ವಾಗಿರಬೇಕು. ಈ ವಿಷಯದಲ್ಲಿ ಯಾವುದೇ ರಾಜಿಗೆ ಅವಕಾಶವಿಲ್ಲ ಎಂದಿರುವ ನಾಲ್ಕು ಎಡ ಪಕ್ಷಗಳಾದ ಸಿಪಿಐ(ಎಂ), ಸಿಪಿಐ, ಆರ್.ಎಸ್.ಪಿ. ಹಾಗೂ ಫಾರ್ವರ್ಡ್‌ಬ್ಲಾಕ್‌ನ ಪ್ರತಿನಿಧಿಗಳು ಭ್ರಷ್ಟಾಚಾರದ ಅಪರಾಧ ವೆಸಗಿದವರನ್ನು ಗುರುತಿಸಿ ಶಿಕ್ಷಿಸುವ ಪ್ರಯತ್ನ ದಲ್ಲಿ ಯಾವುದೇ ಹಸ್ತಕ್ಷೇಪ ಅಥವಾ ಆತಂಕ ಇರಬಾರದು ಎಂದು ಒತ್ತಾಯಿಸಿದ್ದಾರೆ.

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಇದಕ್ಕೆ ಮೊದಲು ಒಂದು ಪ್ರತ್ಯೇಕ ಹೇಳಿಕೆ ಯಲ್ಲಿ ಸಿಬಿಐ ನಿರ್ದೇಶಕರ ವರ್ಗಾವಣೆಯ ಬಗ್ಗೆ ಪ್ರತಿಕ್ರಿಯಿಸುತ್ತಾ ವಿವಿಧ ಕೇಸುಗಳು ನಡೆಯುತ್ತಿರುವಾಗ ಇದು ನಡೆದಿರುವುದು ದುರದೃಷ್ಟಕರ ಎಂದಿತ್ತು. ಇದು ಭ್ರಷ್ಟಾ ಚಾರದ ಕೇಸುಗಳ ವಿಚಾರಣೆಗಳಲ್ಲಿ ಹಾಗೂ ತಪ್ಪಿತಸ್ಥರನ್ನು ಗುರುತಿಸುವಲ್ಲಿ ಯಾವುದೇ ಪ್ರಭಾವ ಬೀರುವಂತಿದ್ದರೆ ಅದನ್ನು ಸಿಪಿಐ (ಎಂ) ದೃಢವಾಗಿ ವಿರೋಧಿಸುತ್ತದೆ ಎಂದೂ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಎಚ್ಚರಿಸಿತ್ತು.

ರಾಷ್ಟ್ರೀಯ ಸೂತ್ರಗಳ ಬದಲು ಪ್ರಾಧಿಕಾರದ ನೇಮಕ ಕಾವೇರಿ ನದಿ ನೀರಿನ ವಿವಾದವನ್ನು ಬಗೆಹರಿಸದು

ಕಾವೇರಿ ನೀರಿನ ವಿವಾದವು ಕೇಂದ್ರದಲ್ಲಿ ಸಂಯುಕ್ತ ರಂಗದ ಸರಕಾರದ ಸ್ಥಾಪನೆಯ ಹಿನ್ನೆಲೆಯಲ್ಲಿ (ಕರ್ನಾಟಕದಲ್ಲಿ ಜನತಾದಳ ಸರಕಾರ, ತಮಿಳುನಾಡಿನಲ್ಲಿ ಡಿ.ಎಂ.ಕೆ. ಸರಕಾರ, ಕೇಂದ್ರದಲ್ಲಿ ದೇವೇಗೌಡರು ಪ್ರಧಾನಿಯಾಗಿದ್ದ ಸರಕಾರ ಇರುವ ಹಿನ್ನೆಲೆಯಲ್ಲಿ) ಬೇಗನೇ ಇತ್ಯರ್ಥವಾಗಿ ಎರಡೂ ರಾಜ್ಯಗಳ ಸಾಮಾನ್ಯ ಜನ ವಿಶೇಷವಾಗಿ ರೈತರು ನಿಟ್ಟುಸಿರು ಬಿಡುವಂತಾಗುವುದು ಎಂದು ನಾವೆಲ್ಲಾ ಇಟ್ಟುಕೊಂಡು ಬಂದ ಆಸೆ ನಿರಾಶೆಯತ್ತ ಮರಳುತ್ತಿರುವುದು ತೀರಾ ವಿಷಾದನೀಯ ಸಂಗತಿ.

ಜೆ.ಎಚ್.ಪಟೇಲರು ಮತ್ತು ಕರುಣಾನಿಧಿಯವರು ಮೂರು-ನಾಲ್ಕು ಬಾರಿ ಸೇರಿ ಪರಸ್ಪರ ಮಾತುಕತೆ ಮಾಡುತ್ತಿದ್ದಾಗ ಎಲ್ಲರೂ ಈ ಸಮಸ್ಯೆ ಇತ್ಯರ್ಥವಾಗುವ ಕನಸು ಕಂಡಿದ್ದರು. ಅದಕ್ಕೆ ಪ್ರತಿ ಸಲವೂ ಮಾತುಕತೆಗಳ ನಂತರ ಈ ಇಬ್ಬರೂ ಮುಖ್ಯಮಂತ್ರಿಗಳು ಹೊರಡಿಸುತ್ತಾ ಬಂದ ಹೇಳಿಕೆಗಳೂ ಸ್ವಲ್ಪ ಕಾರಣವಾಗಿದ್ದವು. ಆದರೆ ಇದೀಗ 'ವಿವಾದ' ಇನ್ನಷ್ಟು ಬಿಗಡಾಯಿಸುತ್ತಾ ಬರುತ್ತಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ಪರಿಹಾರವೇನು? - ಎಂಬುದು ಎಲ್ಲರ ಎದುರು ಎದ್ದು ಬರುತ್ತಿರುವ ಪ್ರಶ್ನೆಯಾಗಿದೆ.

ಇಂತಹ ಸಂದರ್ಭದಲ್ಲಿ ರಾಷ್ಟ್ರೀಯ ಪಕ್ಷಗಳು ಎಂದು ಹೇಳಿಕೊಳ್ಳುತ್ತಿರುವ ಕಾಂಗ್ರೆಸ್(ಐ) ಪಕ್ಷ ಮತ್ತು ಭಾರತೀಯ ಜನತಾ ಪಕ್ಷಗಳು ಅನುಸರಿಸುತ್ತಿರುವ ನೀತಿಗಳು ತೀರಾ 'ಸಂದರ್ಭವಾದಿ ರಾಜಕೀಯ ನೀತಿಗಳಾಗಿವೆ' ಎಂದು ಹೇಳದೆ ನಿರ್ವಾಹವಿಲ್ಲ.

ಇಲ್ಲಿ ನಾವು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ಘಟಕದ ನಿಲುಮೆಯನ್ನು ಸ್ಪಷ್ಟೀಕರಿಸಲು ಪ್ರಯತ್ನಿಸುತ್ತೇವೆ.

'ಈ ಕಾವೇರಿ ನದಿ ನೀರಿನ ವಿವಾದವು ಕರ್ನಾಟಕ ಮತ್ತು ತಮಿಳುನಾಡಿನ ಜನತೆಯ, ವಿಶೇಷವಾಗಿ ರೈತರ ಹಿತಗಳಿಗನುಗುಣವಾಗಿ ನ್ಯಾಯಯುತವಾಗಿ ಇತ್ಯರ್ಥ ಗೊಳ್ಳಬೇಕೆಂಬುದೇ ನಮ್ಮ ಪಕ್ಷದ ಕರ್ನಾಟಕ ಘಟಕ ಮಾತ್ರವಲ್ಲ ತಮಿಳುನಾಡಿನ ಘಟಕ ಹಾಗೂ ಪಕ್ಷದ ಕೇಂದ್ರ ಸಮಿತಿಯ ನಿಲುವು ಕೂಡಾ ಆಗಿದೆ" ಎಂಬುದನ್ನು ನಾವು ಮೊಟ್ಟಮೊದಲು ತಿಳಿಯಹೇಳಲು ಬಯಸುತ್ತೇವೆ. ಇಂತಹ ಒಂದು ಇತ್ಯರ್ಥ "ಪರಸ್ಪರ ಮಾತು ಕತೆಗಳ ಮೂಲಕ ಮಾತ್ರ ಆಗಬಲ್ಲದು' ಎಂಬುದನ್ನು ನಾವು ಆ ಕಾರಣದಿಂದಾಗಿ ಒತ್ತಿ ಹೇಳುತ್ತಾ ಬಂದಿ ರುತ್ತೇವೆ.

ಪಿ.ರಾಮಚಂದ್ರ ರಾವ್

ತಮಿಳುನಾಡಿನ ಸರಕಾರ ನೀರಿನ ಅಭಾವದ ಸಂದರ್ಭದಲ್ಲಿ "ನೀರು ಬಿಡಬೇಕೆಂದು" ಒತ್ತಾಯ ಮಾಡಿದಾಗಲೆಲ್ಲಾ, ಅಲ್ಪಸ್ವಲ್ಪವಾದರೂ ನೀರು ಬಿಡಬೇಕೆಂದೇ ವಾದ ಹೂಡಿ, ನೀರನ್ನು ಸರಕಾರ ಬಿಡುವಂತೆ ಮಾಡಿದವರಲ್ಲಿ ನಮ್ಮ ಪಕ್ಷವೂ ಒಂದು.

ಆದರೂ ಕಾವೇರಿ ನೀರಿನ ವಿವಾದದ ಕುರಿತು ಕೇಂದ್ರ ಸರಕಾರದಿಂದ ನೇಮಕವಾದ ಟ್ರಿಬ್ಯೂನಲ್ ಅವಸರವಸರವಾಗಿ ತನ್ನ ಮಧ್ಯಂತರ ಆಜ್ಞೆಯನ್ನು ಕೊಟ್ಟು ವಿವಾದದ ಇತ್ಯರ್ಥಕ್ಕೆ ಸಹಾಯ ಮಾಡುವ ಬದಲು ಅದನ್ನು ಕ್ಲಿಷ್ಟಗೊಳಿಸಿದೆ ಎಂಬುದು ಮೊದಲಿನಿಂದಲೂ ನಮ್ಮ ಅಭಿಪ್ರಾಯವಾಗಿತ್ತು.

ಆದ ಕಾರಣವೇ ನರಸಿಂಹರಾಯರು ಪ್ರಧಾನಿಯಾಗಿದ್ದಾಗ, ದೇವೇಗೌಡರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ, ತಮಿಳುನಾಡಿನ ಶ್ರೀಮತಿ ಜಯಲಲಿತಾ ಅವರ ಸರಕಾರವು ಮಧ್ಯಂತರ ಆಜ್ಞೆಯ ಜಾರಿಗೆ ಶ್ರೇಷ್ಠ ನ್ಯಾಯಾಲಯಕ್ಕೆ ಮೊರೆ ಹೋದಾಗ ನಮ್ಮ ಪಕ್ಷವೂ ಸೇರಿ ಎಲ್ಲರೂ ಕೇಂದ್ರ ಸರಕಾರ ಮಧ್ಯ ಪ್ರವೇಶ ಮಾಡಿ ಸಂಧಾನದಿಂದ ಇತ್ಯರ್ಥಗೊಳಿಸಬೇಕೆಂದು ಒತ್ತಾಯ ಹಾಕಿದ್ದವು. ವಾಟಾಳ್ ನಾಗರಾಜ್, ನಂಜುಂಡಸ್ವಾಮಿ ಮೊದಲಾದವರ ಪಕ್ಷಗಳು 'ಬೆಂಗಳೂರು ಬಂದ್' ಗೆ ಕರೆಕೊಟ್ಟು ಜನತೆಯ ಭಾವನೆಗಳನ್ನು ತಪ್ಪು ದಾರಿಗೆ - ತಮಿಳುನಾಡಿನ ಜನತೆಯ ವಿರುದ್ಧ ತಿರುಗಿಸಲು ಪ್ರಯತ್ನಿಸಿದಾಗ ಅದನ್ನು ನಮ್ಮ ಪಕ್ಷವು ವಿರೋಧಿಸಿತ್ತು.

ನರಸಿಂಹರಾಯರು 'ನಾವು ಕೇಂದ್ರ ಸರಕಾರದಿಂದ ನದೀ ನೀರಿನ ಇತ್ಯರ್ಥಕ್ಕೆ ರಾಷ್ಟ್ರೀಯ ಸೂತ್ರಗಳನ್ನು ಬೇಗನೇ ರಚಿಸಿ ಪ್ರಕಟಿಸುತ್ತೇವೆ' ಎಂದು ಸಾರಿದಾಗ ನಮಗೆಲ್ಲರಿಗೂ 'ಸಮಸ್ಯೆಯು ಬೇಗನೇ ಬಗೆಹರಿಯುವುದೆಂಬ ಆಸೆ ಪುನಃ ಮೂಡಿಬಂತು. ನರಸಿಂಹ ರಾಯರು 5 ಟಿ.ಎಂ.ಸಿ. ನೀರನ್ನು ಬಿಡಬೇಕೆಂದು ಕೇಳಿಕೊಂಡಾಗ ನಮ್ಮ ರಾಜ್ಯವು ತಮಿಳುನಾಡಿಗೆ ನೀರನ್ನು ಬಿಟ್ಟುಬಿಟ್ಟಿತು.

ಆದರೆ ಇದೀಗ ಗುಜ್ರಾಲ್ ನೇತೃತ್ವದ ಕೇಂದ್ರ ಸರಕಾರವು 'ಟ್ರಿಬ್ಯೂನಲ್'ನ ಮಧ್ಯಂತರ ತೀರ್ಪನ್ನು ಕಟ್ಟುನಿಟ್ಟಾಗಿ ಜಾರಿ ಮಾಡುವ ಸಲುವಾಗಿಯೇ ಒಂದು ಕೇಂದ್ರದ ಪ್ರಾಧಿಕಾರ(ಅಥಾರಿಟಿ)ವನ್ನು ಸ್ಥಾಪಿಸುವ ಸಲುವಾಗಿ ಅದರ ಮಾರ್ಗದರ್ಶಕ ಸೂತ್ರಗಳ ಕರಡನ್ನು ಕರ್ನಾಟಕ ಮತ್ತು ತಮಿಳುನಾಡಿನ ಸರಕಾರಗಳಿಗೆ ಕಳುಹಿಸಿದುದನ್ನು ನೋಡಿ ನಮಗೂ ಆಶ್ಚರ್ಯವಾಗಿದೆ.

ಇಲ್ಲಿರುವ ಪ್ರಶ್ನೆ ಈ ಪ್ರಾಧಿಕಾರ ಬೇಕೆ ಬೇಡವೇ ಎಂಬುದಲ್ಲ. ವಿವಾದ ಇತ್ಯರ್ಥಕ್ಕಾಗಿ ಒಮ್ಮತದ ಒಪ್ಪಂದದ ಪ್ರಕಾರ ನೀರನ್ನು ಕ್ರಮಬದ್ಧವಾಗಿ ಚಾಚೂ ತಪ್ಪದೆ ಬಿಡುವಂತಾಗಲು ಒಂದು ಶಾಶ್ವತ ವ್ಯವಸ್ಥೆ ಮಾಡಲೆಂದು ಕೇಂದ್ರ ಸರಕಾರವು ಒಂದು ಪ್ರಾಧಿಕಾರವನ್ನು ನೇಮಿಸಿದರೆ ಅದಕ್ಕೆ ನಮ್ಮ ಅಡ್ಡಿ ಇಲ್ಲ.

ಬದಲು, ಅಂತಹ ಒಂದು ಒಮ್ಮತವಾದ ಒಪ್ಪಂದ ಬರಲು ನಮ್ಮೆರಡು ರಾಜ್ಯಗಳ ನಡುವೆ ಅಡ್ಡಿಯಾಗಿ ಪರಿಣಮಿಸಿದ ಟ್ರಿಬ್ಯೂನಲ್‌ನ ಮಧ್ಯಂತರ ತೀರ್ಪಿನ ಜಾರಿಗಾಗಿಯೇ ಪ್ರಾಧಿಕಾರವನ್ನು ನೇಮಕ ಮಾಡುವುದು ಸರಿಯೆ ಎಂಬುದು ನಿಜವಾದ ಪ್ರಶ್ನೆ!

ಆದ್ದರಿಂದ ಕೇಂದ್ರ ಸರಕಾರ ಹಾಗೂ ನ್ಯಾಯಮಂಡಳಿ ಈ ವಿವಾದವನ್ನು ತ್ವರಿತದಿಂದ ಎರಡೂ ರಾಜ್ಯಗಳ ಜನತೆಗೆ ನ್ಯಾಯ ದೊರಕಿಸುವ ರೀತಿಯಲ್ಲಿ ಇತ್ಯರ್ಥ ಮಾಡಿಸಲು ಮುಂದಾಗಬೇಕು ಎಂಬುದೇ ನಮ್ಮ ಆಶಯ.

ರಾಷ್ಟ್ರೀಯ ಪ್ರಚಾರಾಂದೋಲನ- ಜುಲೈ 15-31, 1997

ಪುಟ 4-5

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಉಣ್ಣಲೂ ಸಾಲ ಕೈ ತೊಳೆಯಲೂ ಸಾಲ

ಹೀಗಿದೆ ಈಗಿನ ಭಾರತದ ಪರಿಸ್ಥಿತಿ. ವಿಶ್ವಬ್ಯಾಂಕು ಮತ್ತು ಐಎಂಎಫ್‌ಗಳ ಮುಂದೆ ಸಾಲದ ಭಿಕ್ಷಾಪಾತ್ರೆ ಹಿಡಿದಂದಿನಿಂದ ಎಲ್ಲಕ್ಕೂ ಸಾಲವೇ ಗತಿಯಾಗಿ ಹೋಗಿದೆ. ಆಂತರಿಕ ಸಂಪನ್ಮೂಲಗಳ ಸೆಲೆಗಳೆಲ್ಲ ಬತ್ತಿ ಹೋಗಿವೆ. ಆದ್ದರಿಂದ ಯಾವುದೇ ಯೋಜನೆ ಹಾಕಿಕೊಂಡರೂ ಅದಕ್ಕೆ ವಿಶ್ವಬ್ಯಾಂಕಿನಥಂಡಿನ ಸಾಲ ಬೇಕು.

ಈಗ ಎಂತಹ ಪರಿಸ್ಥಿತಿಯಿದೆಯೆಂದರೆ ದೇಶದಲ್ಲಿ ಹಣಹೂಡಿಕೆ ಹೆಚ್ಚಾಗಲು ಅಂತರ್ರಚನಾ ಸೌಲಭ್ಯಗಳಲ್ಲಿ ಹೆಚ್ಚಿನ ಹೂಡಿಕೆ ಆಗಬೇಕೆಂದು ಬಂಡವಾಳಿಗರೂ ಹೇಳುತ್ತಿದ್ದಾರೆ. ಸರಕಾರ ಈ ಅಂತರ್ರಚನಾ ವಲಯವನ್ನು ತೆರೆದು ಖಾಸಗಿಯವರಿಗೆ ಅವಕಾಶ ಮಾಡಿಕೊಟ್ಟರೂ ಯಾರೂ ಹೂಡಿಕೆ ಮಾಡುತ್ತಿಲ್ಲ. ಸರಕಾರದಲ್ಲಿ ಹಣವಿಲ್ಲ, ಖಾಸಗಿಯವರು ಹೂಡುವುದಿಲ್ಲ, ಪರಿಣಾಮ? ಪರಿಣಾಮ ಅಂತರ್ರಚನಾ ಸೌಲಭ್ಯಗಳ ತೀವ್ರ ಕೊರತೆ. ಉದಾಹರಣೆಗೆ ವಿದ್ಯುತ್ ಅಂತರ್ರಚನಾ ಸೌಲಭ್ಯಗಳ ಕೊರತೆ ಇರುವಾಗ ಔದ್ಯಮಿಕ ಬೆಳವಣಿಗೆ ಆಗುವುದಿಲ್ಲ. ಆದ್ದರಿಂದಲೇ ಈಗ ಭಾರತ ವಿಶ್ವ ಬ್ಯಾಂಕಿನ ಮುಂದೆ ಮತ್ತೆ ಸಾಲದ ಭಿಕ್ಷಾಪಾತ್ರೆ ಹಿಡಿದಿರುವುದು. ಅಂತರ್ರಚನಾ ಸೌಲಭ್ಯಗಳನ್ನು ಸೃಷ್ಟಿಸಲು ನಮಗೆ ಸಾಲ ನೀಡುವುದನ್ನು ಮುಂದುವರೆಸಿ ಎಂದು ವಿಶ್ವಬ್ಯಾಂಕನ್ನು ಕೇಳಲಾಗಿದೆ.

ಕೇಂದ್ರ ಹಣಕಾಸು ಇಲಾಖೆಯ ಕಾರ್ಯದರ್ಶಿ ಮೊಂಟೆಕ್‌ಸಿಂಗ್ ಅಹ್ಲೂವಾಲಿಯಾರ ಪ್ರಕಾರ "ಅಂತರ್ರಚನಾ ಸೌಲಭ್ಯಗಳು, ಸಾಮಾಜಿಕ ಸೇವೆಗಳು ಮತ್ತು ಬಡತನ ನಿರ್ಮೂಲನೆ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಬಹುಮುಖ್ಯ ಸವಾಲುಗಳು"

ಮುಂದಿನ ಹತ್ತು ವರ್ಷಗಳಲ್ಲಿ ಅಂತರ್ರಚನಾ ಸೌಲಭ್ಯಗಳಲ್ಲಿ 400000 ಕೋಟಿ ಡಾಲರುಗಳಷ್ಟು ಹಣ ಹೂಡಬೇಕಾಗುತ್ತದಂತೆ. ಇಲ್ಲಿಯವರೆಗೆ ಖಾಸಗಿಯವರಿಂದ ಹೂಡಿಕೆ ನಿರೀಕ್ಷಿಸುತ್ತಿದ್ದ ಇವರು ಈಗ 'ಇದರಲ್ಲಿ ಬಹುತೇಕ ಪಾಲನ್ನು ಸಾರ್ವಜನಿಕ ವಲಯದ ಮೂಲಕವೇ ಮಾಡಬೇಕಾಗುತ್ತದೆ' ಎಂಬ ತೀರ್ಮಾನಕ್ಕೆ ಬಂದಿದ್ದಾರೆ.

ಇದಕ್ಕಾಗಿ ವಿಶ್ವಬ್ಯಾಂಕಿನಿಂದ ಸಾಲ ಯಾಚಿಸುತ್ತಿದ್ದಾರೆ. ಮತ್ತೆ ಅವರ ಷರತ್ತುಗಳು. ಈ ಷರತ್ತುಗಳಿಂದಾಗಿಯೇ ನಮ್ಮ ಸ್ವಾವಲಂಬನೆ ನಾಶವಾಗಿ ಮತ್ತೆ ಮತ್ತೆ ಸಾಲಕ್ಕಾಗಿ ಪಾತ್ರೆ ಹಿಡಿಯಬೇಕು. ಇದು ವಿಶ್ವಬ್ಯಾಂಕ್ ಸಾಲದ ಜಾಗತೀಕರಣವೇ?

ಬಂಡವಾಳಿಗರಿಗೆ ಸುಲಭ ಬಡ್ಡಿದರ

ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ಅರ್ಧವಾರ್ಷಿಕ ಸಾಲ ನೀತಿಯನ್ನು ಘೋಷಿಸಿದ ನಂತರ ಈಗ ಕೆಲವು ಕ್ರಮಗಳನ್ನು ಕೈ ಗೊಂಡಿದೆ. ಬ್ಯಾಂಕ್ ದರ(ಅಂದರೆ ಭಾರತೀಯ ರಿಸರ್ವ್ ಬ್ಯಾಂಕ್ ವಾಣಿಜ್ಯ ಬ್ಯಾಂಕುಗಳಿಗೆ ಹಾಕುವ ಬಡ್ಡಿ ದರ)ವನ್ನು ಶೇ 1 ರಷ್ಟು ಕಡಿತಗೊಳಿಸಿದೆ. ಮುವತ್ತು ದಿನಗಳಿಂದ ಒಂದು ವರ್ಷದವರೆಗಿನ ಠೇವಣಿ ಮೇಲೆ ಬಡ್ಡಿ ದರವನ್ನು ಈಗಿನ ಶೇ 9 ರಿಂದ ಶೇ 8 ಕ್ಕೆ ಇಳಿಸಿದೆ. ತೊಂಬತ್ತು ದಿನಗಳವರೆಗಿನ ರಫ್ತು ಸಾಲದ ಮೇಲಿನ ಬಡ್ಡಿದರವನ್ನು ಶೇ 13 ರಿಂದ ಶೇ 12 ಕ್ಕೆ ಇಳಿಸಿದೆ. ಹಾಗೆಯೇ 91 ದಿನಗಳಿಗೆ ಮೀರಿದ ಮತ್ತು ಆರು ತಿಂಗಳುಗಳೊಳಗಿನ ರಫ್ತು ಸಾಲದ ಮೇಲಿನ ಬಡ್ಡಿ ದರವನ್ನು ಶೇ 15 ರಿಂದ ಶೇ 14 ಕ್ಕೆ ಇಳಿಸಿದೆ.

ಹೀಗೆ ರಿಸರ್ವ್ ಬ್ಯಾಂಕಿನ ಗುರಿ ಬಡ್ಡಿದರವನ್ನು ಇಳಿಸುವುದು. ಈ ಬಡ್ಡಿದರ ಇಳಿಯುವಂತೆ ಅದು ಬಡ್ಡಿದರದ ಮೇಲಿನ ನಿರ್ಬಂಧವನ್ನು ತೆಗೆದುಹಾಕಿತ್ತು. ಇಂದು ಎರಡು ಲಕ್ಷ ರೂಪಾಯಿವರೆಗಿನ ಸಾಲದ ಮೇಲಿನ ಬಡ್ಡಿದರ ನಿರ್ಧರಿಸಲು ಬ್ಯಾಂಕುಗಳು ಮುಕ್ತ ಆದರೆ ಮಾರುಕಟ್ಟೆ ಶಕ್ತಿಗಳಿಗೆ ಸ್ವಾತಂತ್ರ್ಯವಿದ್ದರೂ ಬಡ್ಡಿದರ ಇಳಿಯಲಿಲ್ಲ.

ಬಡ್ಡಿದರ ಇಳಿಯದೇ ತಾವು ಸಾಲ ಪಡೆಯುವುದಿಲ್ಲವೆಂಬ ಒತ್ತಡವನ್ನು ಉದ್ಯಮ ಪತಿಗಳು ಹೇರುತ್ತ ಬಂದರು. ಈ ಒತ್ತಡದ ಪರಿಣಾಮವೇ ಈ ನೇರ ಹಸ್ತಕ್ಷೇಪ. ಬಂಡವಾಳಿಗರಿಗೆ ಲಾಭ ಮಾಡಿಕೊಡಲು ಹಸ್ತಕ್ಷೇಪ ಮಾಡಿದರೆ ನಿಬಂಧನೆಗಳನ್ನು ಹೇರಿದರೆ ಅಡ್ಡಿಯಿಲ್ಲ, ದೇಶದ ಜನಸಾಮಾನ್ಯರಿಗೆ ಅನುಕೂಲವಾಗುವಂತಹದೇನಾದರೂ ಮಾಡಿದರೆ ಮಾತ್ರ ಅದು ಅನರ್ಥಶಾಸ್ತ್ರವಾಗಿಬಿಡುತ್ತದೆ.

ಭಾರತದ ಆರ್ಥಿಕದ ಇಂದಿನ ಕೆಲವು ಸಮಸ್ಯೆಗಳನ್ನು ನೋಡಿ. ಬ್ಯಾಂಕುಗಳಲ್ಲಿ ಈಗ ಅಪಾರ ಪ್ರಮಾಣದ ಹಣ ಕೊಳೆಯುತ್ತಾ ಬಿದ್ದಿದೆ. ಬ್ಯಾಂಕುಗಳು ಸಾಲ ನೀಡಲು ತಯಾರಿವೆ. ಆದರೆ ಸಾಲ ಕೇಳುವವರಿಲ್ಲ, ಉದ್ಯಮ ಪತಿಗಳು ಸಾಲ ಬೇಕು ಎನ್ನುತ್ತಾರೆ. ಆದರೆ ಭಾರತದ ಬ್ಯಾಂಕುಗಳ ಬಡ್ಡಿದರ ಬಹಳ ಹೆಚ್ಚು ಆದ್ದರಿಂದ ಅವುಗಳಿಂದ ಸಾಲ ಪಡೆಯುವುದಿಲ್ಲ ಎನ್ನುತ್ತಾರೆ. ವಿದೇಶಗಳಿಂದ ಸಾಲ ಪಡೆಯಲು ಅವರು ಹಾತೊರೆಯುತ್ತಿದ್ದಾರೆ.

ಬಡ್ಡಿದರವನ್ನು ಇನ್ನೂ ಇಳಿಸಿದರೆ ಬ್ಯಾಂಕುಗಳ ಲಾಭದಾಯಕತೆಗೆ ದೊಡ್ಡ ಹೊಡೆತ ಬೀಳುತ್ತದೆ. ಆದ್ದರಿಂದ ಅವು ಬಡ್ಡಿದರ ಇಳಿಸಲು ತಯಾರಿಲ್ಲ. ಹೀಗಿರುವಾಗ ಭಾರತೀಯ ರಿಸರ್ವ್ ಬ್ಯಾಂಕಿಗೆ ಏನೂ ಮಾಡಲು ತೋಚದೆ ಈ ಬಡ್ಡಿ ದರ ಕಡಿತದ ಕ್ರಮ ಕೈಗೊಂಡಿದೆ. ಈ ಬಡ್ಡಿದರ ಕಡಿತದ ನಂತರ ಮಾರುಕಟ್ಟೆಯ ಪರಿಸ್ಥಿತಿ ಸುಧಾರಿಸುತ್ತಿದೆ ಎಂದು ಹೇಳಲಾಗುತ್ತಿದೆ. ಆದರೆ ಈ ಬಿಕ್ಕಟ್ಟು ಇನ್ನೆಂತಹ ಬಿಕ್ಕಟ್ಟಿಗೆ ದಾರಿ ಮಾಡಿ ಕೊಡುತ್ತದೆ ಎಂಬುದನ್ನು ಕಾದು ನೋಡಬೇಕು.

ಬಿಕ್ಕಟ್ಟಿನಿಂದ ಬಿಕ್ಕಟ್ಟಿಗೆ ಹೋಗುವುದು ಬಂಡವಾಳಶಾಹಿ ಗುಣವಲ್ಲವೇ?

ಏಷಿಯಾದ ಅತಿ ಶ್ರೀಮಂತರಲ್ಲಿ ಬಿರ್ಲಾ, ಟಾಟಾ, ಅಂಬಾನಿಗಳು

ಖ್ಯಾತ ಟೈಮ್ಸ್ ಪತ್ರಿಕೆಯ ಒಂದು ಸಮೀಕ್ಷೆಯಿಂದ ಈ ವಿಷಯ ಹೊರಬಂದಿದೆ. ಏಷಿಯಾ ಖಂಡದ ನೂರು ಅತಿ ದೊಡ್ಡ ಶ್ರೀಮಂತರಲ್ಲಿ ಭಾರತದ ಬಂಡವಾಳಿಗರಾದ ಕುಮಾರ ಮಂಗಳಂ ಬಿರ್ಲಾ, ರತನ್ ಟಾಟಾ ಮತ್ತು ಧೀರೂಬಾಯ್ ಅಂಬಾನಿ ಸೇರಿದ್ದಾರೆ.

ಈ ಶ್ರೀಮಂತರ ಪಟ್ಟಿಯಲ್ಲಿ ಆದಿತ್ಯ ಬಿರ್ಲಾರ ಮಗ ಕುಮಾರ ಮಂಗಳಂ ಬಿರ್ಲಾ 48ನೇ ಸ್ಥಾನದಲ್ಲಿದ್ದಾರೆ. ಅವರ ಸಂಪತ್ತಿನ ಪ್ರಮಾಣ ಏನು ಗೊತ್ತೆ? ಒಂದು ನೂರ ಇಪ್ಪತ್ತುಕೋಟಿ ಅಮೇರಿಕನ್ ಡಾಲರುಗಳು. ಇನ್ನೊಬ್ಬ ಶ್ರೀಮಂತ ಧೀರೂಬಾಯ್ ಅಂಬಾನಿಯದು 75ನೇ ಸ್ಥಾನ. ಈತನ ಸಂಪತ್ತು 70 ಕೋಟಿ ಡಾಲರುಗಳಷ್ಟು. ರತನ್ ಟಾಟಾನದ್ದು 82ನೇ ಸ್ಥಾನ. ಈತನ ಸಂಪತ್ತಿನ ಪ್ರಮಾಣ 60 ಕೋಟಿ ಡಾಲರುಗಳಷ್ಟು. ಒಂದು ಕೋಟಿ ಅಮೇರಿಕನ್ ಡಾಲರ್ ಎಂದರೆ ಸುಮಾರು 36 ಕೋಟಿ ರೂಪಾಯಿಗಳಷ್ಟಾಗುತ್ತದೆ. ಅಂದರೆ ಈ ಶ್ರೀಮಂತರ ಸಂಪತ್ತಿನ ಪ್ರಮಾಣ ಏನೆಂಬುದನ್ನು ನೀವೇ ಲೆಕ್ಕ ಹಾಕಿಕೊಳ್ಳಿ.

(ಕತ್ತಲೆಯಲ್ಲಿ ಕಪ್ಪು ಕನ್ನಡಕ ಧರಿಸಿ ಇಲ್ಲದ ಬೆಕ್ಕು ತೋರಿದ ಕತೆ)

ವಿಶ್ವಬ್ಯಾಂಕಿನ ತುತ್ತೂರಿ

ಉದಾರೀಕರಣದಿಂದಾಗಿ ಬಡತನ ಹೆಚ್ಚಿದೆ. ಬಡವ ಶ್ರೀಮಂತರ ನಡುವಿನ ಕಂದರ ಹೆಚ್ಚಾಗಿದೆ ಎಂದೆಲ್ಲಾ ವರದಿಗಳು ಬರುತ್ತಿರುವಾಗ, ಈ ವರದಿಗಳು ಸ್ಪಷ್ಟವಾಗಿ ಅಂಕಿ ಅಂಶಗಳನ್ನೇ ನೀಡುತ್ತಿರುವಾಗ ವಿಶ್ವ ಬ್ಯಾಂಕ್ ತನ್ನ ಸುಳ್ಳಿನ ತುತ್ತೂರಿಯನ್ನು ಜೋರಾಗಿ ಊದುತ್ತಿದೆ.

ವಿಶ್ವಬ್ಯಾಂಕಿನ ಇತ್ತೀಚಿನ ವರದಿ "ಬಡತನ ನಿವಾರಣೆಯಲ್ಲಿ ಭಾರತದ ಸಾಧನೆಗಳು ಮತ್ತು ಸವಾಲುಗಳು" ಈ ವಿಷಯದ ಬಗ್ಗೆ ಮಾತನಾಡಿದೆ. ಅದರ ಪ್ರಕಾರ ಹಿಂದಿನ ಸರಕಾರಿ ಬಡತನ ನಿರ್ಮೂಲನಾ ಕಾರ್ಯಕ್ರಮಗಳಿಗಿಂತ ಉದಾರೀಕರಣವೇ ಹೆಚ್ಚು ಪರಿಣಾಮಕಾರಿಯಾಗಿರುವುದು. ಆದ್ದರಿಂದ ಭಾರತದಲ್ಲಿ ಉದಾರೀಕರಣದ ನಂತರ ಬಡತನ ಕಡಿಮೆಯಾಗಿದೆ ಎಂದಿದೆ ಅದು.

ಭಾರತದ ಆರ್ಥಿಕ ಬೆಳವಣಿಗೆ ಕೆಳಗಿನ ಮತ್ತು ಮೇಲ್ ಸ್ತರಗಳ ಜನರ ಜೀವನ ಮಟ್ಟವನ್ನು ಸುಧಾರಿಸಿದೆಯಂತೆ. ಗ್ರಾಮೀಣ ಭೂರಹಿತ ಕಾರ್ಮಿಕರ ಕೂಲಿಯೂ ಹೆಚ್ಚಿದೆ ಎಂದಿದೆ ಅದು.

ಕಳೆದೈದು ವರ್ಷಗಳಲ್ಲಿನ ಬೆಳವಣಿಗೆ ದರವನ್ನು ಪ್ರಶಂಸಿರುವ ಅದು ಉದಾರೀಕರಣದಿಂದ ಅಪಾರ ಸಾಧನೆ ಮಾಡಿದ್ದರೂ ಇನ್ನೂ ಸಾಧಿಸಬೇಕಾದದ್ದಿದೆ ಎಂದಿದೆ.

ಬಡತನ ನಿರ್ಮೂಲನೆಯ ಕಾರ್ಯದಲ್ಲಿ ಖಾಸಗಿಯವರು ಮತ್ತು ಸರಕಾರೇತರ ಸಂಸ್ಥೆಗಳನ್ನು ತೊಡಗಿಸುವುದು ಬಹಳ ಮುಖ್ಯವಾದದ್ದು ಎಂದೂ ಅದು ಹೇಳಿದೆ.

ತಾನೇ ಯೋಜಿಸಿದ ಕಾರ್ಯಕ್ರಮದ ಬಗ್ಗೆ ವಿಶ್ವಬ್ಯಾಂಕ್ ಪ್ರಶಂಸೆ ಮಾಡಿಕೊಳ್ಳುತ್ತಿರುವುದು ಸ್ಪಷ್ಟ. ಯಾಕೆಂದರೆ ವಿಶ್ವಸಂಸ್ಥೆಯಿಂದ ಹಿಡಿದು ಅಲ್ಪ ಸ್ವಲ್ಪ ವಸ್ತುನಿಷ್ಠತೆ ಇರುವ ಎಲ್ಲರೂ ಉದಾರೀಕರಣದಿಂದ ಭಾರತದಲ್ಲಿ ಬಡತನ ಹೆಚ್ಚಾಗಿದೆ, ಬಡವರ ಮತ್ತು ಶ್ರೀಮಂತರ ನಡುವಣ ಕಂದರ ಹೆಚ್ಚಿದೆ, ಉದ್ಯೋಗಗಳ ಸೃಷ್ಟಿ ಆಗುತ್ತಿಲ್ಲ, ಕೃಷಿ ಪೂರ್ತಿ ಹದಗೆಡುತ್ತಿದೆ ಖಾಸಗೀಕರಣ ದೇಶವನ್ನೇ ಹಾಳುಗೆಡುವುತ್ತಿದೆ ಎಂದಿವೆ. ಹೀಗಿರುವಾಗ ಈ ವಿಶ್ವ ಬ್ಯಾಂಕ್ ವರದಿ ಪ್ರಶಂಸೆಗೆ ತೊಡಗಿರುವುದು ಸಂದೇಹ ಮೂಡಿಸುತ್ತದೆ. ಇಲ್ಲಿ ವಸ್ತುನಿಷ್ಠತೆ ಇಲ್ಲ. ತಾನು ಹೇರಿದ ಷರತ್ತುಗಳನ್ನು ಭಾರತ ಒಪ್ಪಿಕೊಂಡಿರುವುದರಿಂದ ಇದರಿಂದ ಭಾರತಕ್ಕೆ ಲಾಭವಾಗಿದೆ ಎಂದು ಹೇಳುವುದು ಅದರ ಉದ್ದೇಶ. ಆದರೆ ದೇಶದ ಬಡ ಜನತೆ ತೀವ್ರ ಬೆಲೆಗಳು, ಉದ್ಯೋಗ ನಷ್ಟ ಇತ್ಯಾದಿ ಸಮಸ್ಯೆಗಳನ್ನು ಕಾಣುತ್ತಿರುವುದರಿಂದ ಅವರಿಗೆ ಈ ಉದಾರೀಕರಣ ಎಂತಹ ನೋವು ತರುತ್ತದೆ ಎಂಬುದು ಸ್ಪಷ್ಟವಾಗಿ ರಬೇಕು ಅಲ್ಲವೇ?

ಜಾರಿಗೆ ಬಂದ ಸ್ವಯಂ ಘೋಷಣಾ ಯೋಜನೆ

ಬಂಡವಾಳಿಗರಿಗೆ ಕನಸಿನ ಬಜೆಟ್ ನೀಡಿದ ಕೇಂದ್ರ ಹಣಕಾಸು ಮಂತ್ರಿ ಪಿ.ಚಿದಂಬರಂ ತಮ್ಮ ಬಜೆಟ್ಟಿನಲ್ಲಿ ಈ ಸ್ವಯಂ ಘೋಷಣಾ ಯೋಜನೆಯನ್ನು ಘೋಷಿಸಿದ್ದರು. ಜುಲೈ 1, 1997 ರಿಂದ ಆರು ತಿಂಗಳ ಕಾಲ ಜಾರಿಯಲ್ಲಿರುವ ಈ ಯೋಜನೆಗೆ ಕಪ್ಪು ಹಣ ಇರುವವರು ತಾವಾಗಿ ಬಂದು ತಮ್ಮಲ್ಲಿ ಕಪ್ಪುಹಣ ಇದೆಯೆಂದು ಘೋಷಣೆ ಮಾಡಿ ಶೇ 30 ರಷ್ಟು ತೆರಿಗೆ ತೆತ್ತರೆ ಅವರನ್ನು ಕಾನೂನಿನ ತೊಂದರೆಗಳಿಂದ ಮುಕ್ತಗೊಳಿಸಲಾಗುತ್ತದೆ. ಕೋರ್ಟುಗಳು ಇಂತಹ ಪ್ರಕರಣಗಳನ್ನು ವಿಚಾರಣೆ ಮಾಡುವ ಅಗತ್ಯವಿಲ್ಲ.

ಕಾಳಸಂತೆಕೋರರಿಗೆ ರಕ್ಷಣೆ, ಮನ್ನಣೆ ನೀಡುವ ಈ ಯೋಜನೆ ಪ್ರಾಮಾಣಿಕವಾಗಿ ತೆರಿಗೆ ತೆತ್ತವರಿಗೆ ಅನ್ಯಾಯವೆಸಗುತ್ತದೆ (ಹಾಗೆ ಪ್ರಾಮಾಣಿಕವಾಗಿ ತೆರಿಗೆ ತೆತ್ತವರ ಸಂಖ್ಯೆ ಬಹಳ ಕಡಿಮೆ ಇರಬಹುದು).

ಜೊತೆಗೆ ಹಿಂದೆ ಇಂತಹ ಯೋಜನೆಗಳನ್ನು ತಂದಾಗ ಅವು ಯಶಸ್ವಿಯಾಗಲಿಲ್ಲ ಎಂಬ ಸತ್ಯವೂ ಇದೆ. ಪೂರ್ತಿ ತೆರಿಗೆ ತೆರದೆ ತಪ್ಪಿಸಿಕೊಳ್ಳುವ ಸಾಧ್ಯತೆ ಇರುವಾಗ ಹಾಗೆ ತಪ್ಪಿಸಿಕೊಂಡು ಕಾಳಸಂತೆ ವ್ಯವಹಾರವನ್ನೇ ನಡೆಸುವ ಅವಕಾಶಗಳಿರುವಾಗ ಯಾರಾದರೂ ನಾನು ಕಾಳಸಂತೆ ವ್ಯವಹಾರದಲ್ಲಿ ದುಡಿದಿದ್ದೆ, ಈಗ ಆ ಹಣವನ್ನು ಘೋಷಿಸಿಕೊಳ್ಳುತ್ತೇನೆ, ನನ್ನನ್ನು ಬಿಟ್ಟು ಬಿಡಿ ಎಂದು ಕೇಳುತ್ತಾರೆಯೇ?

ಕಾಳಸಂತೆಕೋರರಿಗೆ ಬಹುಮಾನ ನೀಡುವ ಯೋಜನೆಯಲ್ಲವೇ ಇದು?

ವಿದೇಶಗಳಲ್ಲಿ ಹೂಡಿಕೆ ಮಾಡುವ ನೀತಿಯ ಉದಾರೀಕರಣ

ಭಾರತೀಯರು ವಿದೇಶಗಳಲ್ಲಿ ಹಣ ಹೂಡಲು ಅನುಕೂಲ ಮಾಡಿಕೊಡಲು ವಿದೇಶಿ ಹೂಡಿಕೆ ನೀತಿಯನ್ನು ಇನ್ನೂ ಉದಾರಗೊಳಿಸಲಾಗಿದೆ. ಭಾರತ ಬಂಡವಾಳ ಖಾತೆಯು ಪೂರ್ಣ ಪರಿವರ್ತನೀಯತೆಯತ್ತ ಚಲಿಸಲು ಮತ್ತು ಭಾರತೀಯ ಕಂಪನಿಗಳ ಜಾಗತೀಕರಣವನ್ನು ಪ್ರೋತ್ಸಾಹಿಸಲು ಈ ಕ್ರಮ ಕೈಗೊಳ್ಳಲಾಗಿದೆಯಂತೆ. ಈ ಹೊಸ ನೀತಿಯಡಿ ವಿದೇಶಗಳಲ್ಲಿ ಹೂಡಿಕೆ ಮಾಡಬಯಸುವವರ ಪ್ರಸ್ತಾಪಗಳನ್ನು ಶೀಘ್ರವಾಗಿ ಪರಿಶೀಲಿಸಿ ಅನುಮತಿ ನೀಡಲು ಎರಡು ವಿಶೇಷ ಗವಾಕ್ಷಿಗಳನ್ನು ತೆರೆಯಲಾಗಿದೆ. ಇದಲ್ಲದೆ, ಅಂತರ್‌ಮಂತ್ರಾಲಯ ವಿಶೇಷ ಸಮಿತಿ ಸಹ ಇರುತ್ತದೆ. ಇಲ್ಲಿ 15 ದಶಲಕ್ಷ ಡಾಲರುಗಳಷ್ಟು ಹೂಡಿಕೆಗಳಿಗೆ ಅನುಮೋದನೆ ಶೀಘ್ರವೇ ದೊರೆಯುತ್ತದಂತೆ.

ಈ ನೀತಿಯಿಂದಾಗಿ ಭಾರತೀಯ ಕಂಪನಿಗಳಿಗೆ ವಿದೇಶಗಳಲ್ಲಿ ಹೂಡಿಕೆ ಮಾಡಲು ಕೇಂದ್ರ ಸರಕಾರದ ವಿಶೇಷ ಅನುಮತಿ ಅವಶ್ಯಕತೆಯಿರುವುದಿಲ್ಲ.

ಚಾಲ್ತಿ ಖಾತೆಯ ಪೂರ್ಣ ಪರಿವರ್ತನೀಯತೆಯನ್ನು ತರಲು ವಿದೇಶಿ ಹೂಡಿಕೆಗಳು ಭಾರತದೊಳಕ್ಕೆ ಬಂದು ಭಾರತದ ಅಭಿವೃದ್ಧಿಯಾಗುವಂತೆ ಮಾಡುವುದೇ ಮುಖ್ಯ ಉದ್ದೇಶ ಎನ್ನುವ ಸರಕಾರ ಭಾರತದೊಳಕ್ಕೆ ಹೆಚ್ಚು ವಿದೇಶಿ ಬಂಡವಾಳ ಹರಿದು ಬರುವಂತೆ ಮಾಡಬೇಕಲ್ಲವೇ? ಬದಲಿಗೆ ಅದು ಬಂಡವಾಳ ಭಾರತದಿಂದ ಹೊರಹೋಗಲು ಅನುವು ಮಾಡಿಕೊಡುತ್ತಿದೆ. ಇದೇ ಉದಾರೀಕರಣದ ನಿಜ ಉದ್ದೇಶವೇ?

ಸಹಕಾರಿ ಚಳುವಳಿಗೆ ಕಾಯಕಲ್ಪದ ಅವಶ್ಯಕತೆ

ಎನ್.ಕೆ.ಉಪಾಧ್ಯಾಯ

ಕೆಳಹಂತದಲ್ಲಿ, ಗ್ರಾಮಮಟ್ಟದಲ್ಲಿ ಜನರ ಸಮಸ್ಯೆಗಳಿಗೆ ಪರಿಹಾರ ಸಿಗಬೇಕು. ಅವರ ಕುಂದುಕೊರತೆ ನಿವಾರಣೆಯಾಗಬೇಕು, ಯೋಜನೆಗಳು ಕೆಳಹಂತದಲ್ಲೇ ಜನರ ಸಹಕಾರದಿಂದ ರೂಪಿಸಲ್ಪಟ್ಟು ಅದರ ಪ್ರತಿಫಲ ಅವರಿಗೆ ಅಲ್ಲೆ ಲಭ್ಯವಾಗಬೇಕೆಂಬ ಉದ್ದೇಶದಿಂದಲೇ ಗ್ರಾಮ ಪಂಚಾಯತಿ ವ್ಯವಸ್ಥೆಯನ್ನು ಜಾರಿಯಲ್ಲಿ ತರಲಾಗಿದೆ. ಆದರೆ ದೇಶದ ಎಲ್ಲಾ ರಾಜ್ಯಗಳಲ್ಲಿ ಈ ವ್ಯವಸ್ಥೆ ಫಲದಾಯಕವಾಗಿ ಮೂಡಿಬಂದು ಯಶಸ್ವಿಯಾಗಿದೆಂದು ಹೇಳಲು ಸಾಧ್ಯವಿಲ್ಲ. ಬಂಡವಾಳಶಾಹಿ ಭೂಮಾಲಕ ವರ್ಗ ಅದನ್ನು ಸಫಲಗೊಳಿಸಲು ಬಿಡುವುದಿಲ್ಲ. ಯಾಕೆಂದರೆ ಅದು ಈ ವರ್ಗಗಳಿಗೆ ಮಾರಕವಾಗಿದೆ. ಆದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಪಶ್ಚಿಮ ಬಂಗಾಳದ ಎಡರಂಗ ಸರಕಾರ ಹಾಗೆಯೇ ಕೇರಳದ ಎಡ ಪ್ರಜಾಪ್ರಭುತ್ವರಂಗದ ಸರಕಾರಗಳು ಮಾತ್ರ ನಿಜವಾದ ಅರ್ಥದಲ್ಲಿ ಅಧಿಕಾರ ವಿಕೇಂದ್ರೀಕರಣದ ಗ್ರಾಮಪಂಚಾಯತಿ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಜಾರಿಯಲ್ಲಿ ತಂದು ಕೆಳಮಟ್ಟದ ಜನರು ಕೂಡ ಅದರ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಮಾಡಿವೆ. ಸಹಕಾರಿ ಚಳುವಳಿಗೂ ಇದೇ ಮೂಲ ತತ್ವ ಅನ್ವಯವಾಗುತ್ತದೆ.

ಮೂಲಧ್ಯೇಯಕ್ಕೆ ಕೊಡಲಿಯೇಟು

ನಮ್ಮ ರಾಜ್ಯದಲ್ಲಿ 26 ಸಾವಿರ ಸಹಕಾರಿ ಸಂಘಗಳಿದ್ದು ಅವುಗಳ ಪೈಕಿ ಅಂದಾಜು ಐದು ಸಾವಿರದಷ್ಟು ಸಹಕಾರಿ ಸಂಘಗಳು ನಿಷ್ಕ್ರಿಯವಾಗಿವೆಂದೂ ಅವುಗಳನ್ನು ವಿಸರ್ಜಿಸಬೇಕಾದೀತೆಂದೂ ರಾಜ್ಯ ಸಹಕಾರಿ ಸಚಿವ ಎಸ್.ಎಸ್.ಪಾಟೀಲರು ಹೇಳಿ, ರಾಜ್ಯದಲ್ಲಿ ಬೆಳೆದು ನಿಂತಿರುವ ಸಹಕಾರಿ ಚಳುವಳಿಯ' ಸ್ಪಷ್ಟ ರೂಪವನ್ನು ಬಿಚ್ಚಿಟ್ಟಿದ್ದಾರೆ. ಜನರ ಹಿಡಿತದಲ್ಲಿರಬೇಕಾಗಿದ್ದ ಈ ಸಹಕಾರಿ ಸಂಘಗಳು ಪಟ್ಟಭದ್ರ ಹಿತಾಸಕ್ತಿಗಳ ಹಿಡಿತದಲ್ಲಿ ಸಿಕ್ಕಿಕೊಂಡಿರುವುದರಿಂದ ಸಹಕಾರಿ ಚಳವಳಿಯ ಮೂಲ ಧ್ಯೇಯಕ್ಕೆ ಕೊಡಲಿಯೇಟು ಬಿದ್ದಂತಾಗಿದೆ. ಇಷ್ಟು ದಿವಸ ರಾಜ್ಯ ಆಳುತ್ತಿದ್ದವರೆಲ್ಲ ತಮ್ಮ ವರ್ಗದ ಹಿತಸಾಧನೆಗೆ ಅಡ್ಡಿ ಉಂಟು ಮಾಡುವುದಕ್ಕೆ ಹಿಂಜರಿದು ಸಹಕಾರಿ ಸಂಘಗಳಲ್ಲಿಯ ಅವ್ಯವಹಾರಗಳ ಕುರಿತು ಅರಿವಿಲ್ಲದವರಂತೆ ವರ್ತಿಸುತ್ತಿದ್ದರು. ಅಧಿಕಾರಿಗಳಿಗೂ ಅಂಥ ನಿಲುಮೆ ಫಲದಾಯಕವಾಗಿತ್ತು. ಬಹುತೇಕ ಸಹಕಾರಿ ಸಂಘಗಳು ಭ್ರಷ್ಟಾಚಾರದ ನೆಲೆಬೀಡಾಗಿವೆ. ಅದು ದೇಶದ ಸಹಕಾರಿ ಸಂಘ ಇರಲಿ, ನೂಲಿನ ಗಿರಣಿ, ಸಕ್ಕರೆ ಕಾರ್ಖಾನೆ, ಪಿ.ಎಲ್.ಡಿ.ಬ್ಯಾಂಕ್, ಬೇರೆ ಯಾವುದೇ ವ್ಯವಹಾರಗಳ, ವಿದ್ಯಮಾನಗಳ ಸಹಕಾರಿ ಸಂಘಗಳಿರಲಿ ಎಲ್ಲದರ ಪಾಡು ಒಂದೇ. ವಂಚನೆ, ಮೋಸತನ, ಭ್ರಷ್ಟಾಚಾರ, ಅವ್ಯವಹಾರ, ಆಡಳಿತ ನಡೆಸುವವರಿಗೇನೇ ಇದರ ಕುರಿತು ಆಸ್ತೆ ಇಲ್ಲದಿರುವಾಗ, ಮಧ್ಯ ಪ್ರವೇಶಕ್ಕೆ ಅವಕಾಶ ಎಲ್ಲಿದೆ ಹೇಳಿ!

ಸ್ವಾಗತಾರ್ಹ ಮಾತಾದರೂ..........

ಸಹಕಾರ ಸಚಿವರು ಸಹಕಾರಿ ಸಂಘಗಳತ್ತ ಗಮನ ಹರಿಸಿರುವುದನ್ನು ಸ್ವಾಗತಿಸಬೇಕಾಗಿದೆ. ಸಹಕಾರ ಚಳುವಳಿ ಎಲ್ಲ ಕ್ಷೇತ್ರಗಳಲ್ಲಿ ಬೆಳೆಯಬೇಕು. ಸಹಕಾರ ಚಳುವಳಿಯಿಂದ ಜನರಲ್ಲಿ ಸಹಕಾರ ಭಾವನೆ, ಸಹಕಾರ ಪ್ರವೃತ್ತಿ ಬೆಳೆಯುತ್ತಿದೆ. ಸಾಲ ಸೌಲಭ್ಯಗಳು ಕೃಷಿಕರಿಗೆ ಕೈಗಾರಿಕೆಗಳಿಗೆ ಬಂಡವಾಳ, ಚಿಕ್ಕಪುಟ್ಟ ವ್ಯವಹಾರಗಳಿಗೆ ಬಂಡವಾಳ ಅದರ ಮೂಲಕ ಅಗ್ಗ ದರದಲ್ಲಿ ದಿನನಿತ್ಯ ಬಳಕೆಯ ವಸ್ತುಗಳ ಪೂರೈಕೆ - ಹೀಗೆ ಹತ್ತಾರು ವಿಧದಲ್ಲಿ ನಾನಾ ರೀತಿಯ ಸವಲತ್ತುಗಳಿಗೆ ಸಹಕಾರಿ ಚಳುವಳಿ ದಾರಿ ಮಾಡಿಕೊಡುತ್ತದೆ. ಸಾಂಸ್ಕೃತಿಕ ಚಳುವಳಿ, ಆಟಪಾಠಗಳಿಗೂ ಇದು ಅವಕಾಶ ಮಾಡಿ ಕೊಡುತ್ತದೆ. ಸಹಕಾರಿ ಖಾತೆಯ ನಿರ್ದೇಶಕರು ಮಾಡಬೇಕಾದ ಕೆಲಸವನ್ನು ಸಹಕಾರಿ ಮಂತ್ರಿಗಳು ಮಾಡಿದ್ದಾರೆ. ನಿಷ್ಕ್ರಿಯವಾಗಿ

ಪುಟ 7 ನೋಡಿ

ರೇಶನ್ ಪ್ರಮಾಣ ಕಡಿತ ಮತ್ತು ಬೆಲೆ ಏರಿಕೆ ವಿರೋಧಿಸಿ ದ.ಕ.ಜಿಲ್ಲೆಯಾದ್ಯಂತ ಸಿಪಿಐ(ಎಂ) ಪ್ರತಿಭಟನಾ ಪ್ರದರ್ಶನ

ರೇಶನ್ ಮೂಲಕ ವಿತರಣೆ ಮಾಡುವ ಅಕ್ಕಿಯ ಪ್ರಮಾಣವನ್ನು ಸರಕಾರವು ಜೂನ್ ತಿಂಗಳಿಂದ ವಿಪರೀತವಾಗಿ ಕಡಿಮೆ ಮಾಡಿರುವುದಲ್ಲದೆ ಬೆಲೆಯನ್ನೂ ಏರಿಸಿರುವುದನ್ನು ವಿರೋಧಿಸಿ ಜುಲೈ 1 ರಂದು ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ತಾಲ್ಲೂಕು ಕಛೇರಿಗಳ ಮುಂದೆ ಪ್ರತಿಭಟನಾ ಪ್ರದರ್ಶನಗಳು ನಡೆದವು. ಕೇಂದ್ರದ ಸಂಯುಕ್ತ ರಂಗ ಸರಕಾರದ ಸಮಾನ ಕನಿಷ್ಟ ಕಾರ್ಯಕ್ರಮದ ಮೇರೆಗೆ ಬಡತನದ ರೇಖೆಯ ಕೆಳಮಟ್ಟದಲ್ಲಿರುವವರಿಗೆ ಅರ್ಧ ಬೆಲೆಯಲ್ಲಿ ಆಹಾರ ಸಾಮಾಗ್ರಿ ವಿತರಿಸಬೇಕಾಗಿದೆ. ಆದರೆ ಬಡತನದ ರೇಖೆಯ ಕೆಳಗಿನವರನ್ನು ಗುರುತಿಸಿ ಅವರಿಗೆ ಪ್ರತ್ಯೇಕ ಕಾರ್ಡು ನೀಡುವ ಕೆಲಸವನ್ನು ಸಮರ್ಪಕವಾಗಿ ಮಾಡದುದರಿಂದ ಲಕ್ಷಗಟ್ಟಲೆ ಬಡವರು ಈ ವ್ಯವಸ್ಥೆಯಿಂದ ಹೊರಗೆ ಉಳಿದಿದ್ದಾರೆ. ಹಸಿರು ಕಾರ್ಡುದಾರರಿಗೆ ತಿಂಗಳಿಗೆ ಬರೇ 8 ಕಿ.ಲೋ. ಅಕ್ಕಿ ಕೊಡುವುದರಿಂದ ಈ ಬಡ ಜನರಿಗೆ ಕನಿಷ್ಟ ಆಹಾರ ದೊರಕಿದಂತಾಗುವುದಿಲ್ಲ.

ಇತರ ಜನಸಾಮಾನ್ಯರಿಗೆ ನೀಡುವ ಪಡಿತರ ಅಕ್ಕಿಯ ಪ್ರಮಾಣವನ್ನು ಎರಡೂವರೆ ಕಿಲೋಗೆ ಇಳಿಸಿರುವುದು ಅನ್ಯಾಯ ಮಾತ್ರವಲ್ಲದೆ ಅವಮಾನಕಾರಿಯಾಗಿದೆ ಎಂದಿರುವ ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಬಡತನದ ರೇಖೆಯ ಕೆಳಮಟ್ಟದಲ್ಲಿರುವ ಕುಟುಂಬಗಳನ್ನು ಗುರುತಿಸಿ ಅವರೆಲ್ಲರಿಗೂ ಅರ್ಧ ಬೆಲೆಯಲ್ಲಿ ಹಿಂದಿನ ಪ್ರಮಾಣದಲ್ಲೇ ಅಕ್ಕಿಯನ್ನು ವಿತರಿಸಬೇಕು. ಇತರರಿಗೆ ಈ ತನಕ ಇದ್ದ ದರದಲ್ಲಿ ಮತ್ತು ಅದೇ ಪ್ರಮಾಣದಲ್ಲಿ ಅಕ್ಕಿ ವಿತರಿಸಬೇಕು ಎಂದು ಒತ್ತಾಯಿಸಿದೆ.

ಜನಸಾಮಾನ್ಯರು ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಇಂದಿನ ದಿನಗಳಲ್ಲಿ ಪಡಿತರ ಅಕ್ಕಿಯ ಪ್ರಮಾಣ ಕಡಿತ ಮಾಡಿದ ಮತ್ತು ಬೆಲೆ ಏರಿಸಿದ ಸರಕಾರದ ಕ್ರಮವನ್ನು ಕೂಡಲೇ ಹಿಂತೆಗೆದು ಸಾಕಷ್ಟು ಪ್ರಮಾಣದಲ್ಲಿ ಜೀವನಾವಶ್ಯಕ ವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ವಿತರಿಸಲು ಸರಕಾರವು ತುರ್ತು ಕ್ರಮ ವಹಿಸಬೇಕೆಂದು ಸಿಪಿಐ(ಎಂ) ಮುಖಂಡರು ಈ ಪ್ರತಿಭಟನಾ ಪ್ರದರ್ಶನಗಳಲ್ಲಿ ಒತ್ತಾಯಿಸಿದರು. ಮಂಗಳೂರಿನಲ್ಲಿ ಜಿಲ್ಲಾಧಿಕಾರಿಯವರ ಕಚೇರಿಯಿದಿರು ಸಿಪಿಐ(ಎಂ) ಕಾರ್ಯಕರ್ತರು ಭಾರೀ ಪ್ರದರ್ಶನ ನಡೆಸಿ ಬಿ.ಮಾಧವ, ಕೆ. ಮೂಸಬ್ಬ, ರಾಮಚಂದ್ರ ಉಚ್ಚಿಲ್, ಜೆ.ಬಾಲಕೃಷ್ಣ ಶೆಟ್ಟಿ, ಯು.ಬಿ.ಲೋಕಯ್ಯ ಮುಂತಾದವರ ನೇತೃತ್ವದಲ್ಲಿ ಶಿಷ್ಟ ಮಂಡಳಿಯು ಜಿಲ್ಲಾಧಿಕಾರಿಯವರಿಗೆ ಮನವಿ ಅರ್ಪಿಸಲಾಯಿತು.

ಇದೇ ರೀತಿ ಕುಂದಾಪುರ, ಉಡುಪಿ, ಬಂಟ್ವಾಳ ಮುಂತಾದ ಕಡೆಗಳಲ್ಲಿ ತಾಲ್ಲೂಕು ಕಛೇರಿಯೆದುರು ಪ್ರತಿಭಟನಾ ಪ್ರದರ್ಶನ ನಡೆಸಿ ಮನವಿ ಸಲ್ಲಿಸಲಾಯಿತು

ಜುಲೈ 25 ರಂದು ಅಂಗನವಾಡಿ ನೌಕರರ ಬೇಡಿಕೆಗಳಿಗಾಗಿ ರಾಜ್ಯಮಟ್ಟದ ರ್‍ಯಾಲಿ

ಅಂಗನವಾಡಿ ನೌಕರರನ್ನು ಸರಕಾರಿ ನೌಕರರೆಂದು ಪರಿಗಣಿಸಬೇಕು. ಅಲ್ಲಿಯವರೆಗೆ ಕಾರ್ಯಕರ್ತೆಯರಿಗೆ ರೂ. 1,200 ಹಾಗೂ ಸಹಾಯಕಿಯರಿಗೆ ರೂ. 800 ವೇತನ ನೀಡಬೇಕೆಂದು ಆಗ್ರಹಿಸಿ ಜುಲೈ 25 ಮತ್ತು 26 ರಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರಿಂದ ರ್‍ಯಾಲಿ, ಮತಪ್ರದರ್ಶನ, ಧರಣಿ ಕಾರ್ಯಕ್ರಮ ಸಂಘಟಿಸಲಾಗಿದೆ. ರಾಜ್ಯದ ಎಲ್ಲ ಕಡೆಯಿಂದ ಸಾವಿರಾರು ನೌಕರರು ಭಾಗವಹಿಸಲು ಸಿದ್ಧತೆ ನಡೆದಿದೆ.

ಇನ್ನಿತರ ಮುಖ್ಯ ಬೇಡಿಕೆಗಳೆಂದರೆ ರೇಶನ್ ವ್ಯವಸ್ಥೆಯನ್ನು ಬಲಪಡಿಸಬೇಕು, ಅಂಗನವಾಡಿ ಖಾಸಗೀಕರಣ ವಿಚಾರ ಕೈ ಬಿಡಬೇಕು, ಮಹಿಳಾ ಮೀಸಲಾತಿ ಮಸೂದೆಯನ್ನು ಲೋಕಸಭೆ ಅಂಗೀಕರಿಸಬೇಕೆಂದು ಒತ್ತಾಯಿಸಿ ರಾಜ್ಯ ಮಟ್ಟದ ರ್‍ಯಾಲಿ ನಡೆಯುತ್ತದೆ.

ಸಂಯುಕ್ತ ರಂಗ ಸರಕಾರ ಅಂಗನವಾಡಿ ನೌಕರರ ಅಖಿಲ ಭಾರತ ನಿಯೋಗಕ್ಕೆ 1 ಸಾವಿರ ರೂಪಾಯಿಗಳ ಗೌರವಧನ ಕೊಡುತ್ತೇವೆ ಎಂದು ಹೇಳಿ ಈಗ ಕೇವಲ ಕಾರ್ಯಕರ್ತೆಯರಿಗೆ ಶೇ 23 ರಷ್ಟು ಮತ್ತು ಸಹಾಯಕಿಯರಿಗೆ ಶೇ 30 ರಷ್ಟು ಏರಿಸಿರುವುದನ್ನು ಅಂಗನವಾಡಿ ನೌಕರರ ಸಂಘ ತೀವ್ರವಾಗಿ ಖಂಡಿಸಿದೆ.

ರಾಜ್ಯದಲ್ಲಿ 80,000 ನೌಕರರು ದುಡಿಯುತ್ತಿದ್ದು ಶಿಶು ಅಭಿವೃದ್ಧಿಗಾಗಿ ಕೇಂದ್ರ ಸರಕಾರದಿಂದ ಪೌಷ್ಟಿಕ ಆಹಾರವನ್ನು ಪೂರೈಕೆ ಮಾಡುತ್ತಿದ್ದಾರೆ. ಆದರೆ ಆಹಾರದಲ್ಲಿ 500 ಕೋಟಿ ರೂ. ಗಳ ಅವ್ಯವಹಾರ ನಡೆದು ಅಗವಾನಿಯವರ ನೇತೃತ್ವದಲ್ಲಿ ತನಿಖೆ ನಡೆಸಿ ಸರಕಾರಕ್ಕೆ ವರದಿ ಮಾಡಿದ್ದರು. ಇದುವರೆಗೂ ಯಾವುದೇ ರೀತಿಯ ಕ್ರಮಗಳನ್ನು ಕೈಗೊಳ್ಳದೇ ಇಲಾಖೆಯ ಕಾರ್ಯದರ್ಶಿಯವರಿಗೆ ಬಡ್ತಿ ನೀಡಿರುವುದು ಆಶ್ಚರ್ಯ ಮತ್ತು ಖಂಡನೀಯವಾಗಿದೆ ಎಂದು ಸಂಘ ಅಭಿಪ್ರಾಯ ಪಟ್ಟಿದೆ. ಈ ಅವ್ಯವಹಾರ ತನಿಖೆಯಾಗುವ ಮೊದಲು ಕೋ.ಚನ್ನಬಸಪ್ಪನವರು ಈ ಅವ್ಯವಹಾರದಲ್ಲಿ ಅಂಗನವಾಡಿ ನೌಕರರ ಪಾತ್ರವಿರುವುದರಿಂದ ಅವರನ್ನು ಮರಗಳಿಗೆ ಕಟ್ಟಿ ಹೊಡೆಯಬೇಕೆಂದೂ ಸಂಯುಕ್ತ ಕರ್ನಾಟಕದಲ್ಲಿ ಒಂದು ಲೇಖನವನ್ನು ಬರೆದಿದ್ದರು. ಆದರೆ ಈ ಇಲಾಖೆಯ ಉನ್ನತ ಅಧಿಕಾರಿಗಳೇ ನೇರ ಹೊಣೆಗಾರರೆಂದು ತನಿಖಾ ವರದಿ ತಿಳಿಸಿದ್ದು ಈಗ ಈ ಬಗ್ಗೆ ಯಾವುದೇ ಚಕಾರವೆತ್ತದಿರುವುದನ್ನೂ ಸಂಘ ಖಂಡಿಸಿದೆ. ಈ ಕೂಡಲೇ ತನಿಖೆಯ ವಿವರಗಳನ್ನು ಬಹಿರಂಗ ಪಡಿಸಬೇಕೆಂದು ಈ ಸಂಘ ಒತ್ತಾಯಿಸಿದೆ.

ಈರುಳ್ಳಿ ಬೆಂಬಲ ಬೆಲೆ ಹೆಚ್ಚಿಸಲು ರೈತರ ಮನವಿ

ಈರುಳ್ಳಿ ಬೆಲೆ ತೀವ್ರವಾಗಿ ಕುಸಿದಿದ್ದು ರೈತರು ತುಂಬಾ ಸಂಕಷ್ಟಕ್ಕೆ ಈಡಾಗಿದ್ದಾರೆ. ಸರಕಾರವು ನಿಗದಿ ಮಾಡಿದ ಬೆಲೆಯೂ ಕೂಡಾ ಬಹಳ ಕಡಿಮೆಯಾಗಿದೆ. ರೈತರ್ು ಬೆಳೆಗೆ ಖರ್ಚು ಮಾಡಿದ ಲಾಗೋಡಿ ಮಾತ್ರ ಅಲ್ಲ ಟ್ರಕ್ಕಿನ ಬಾಡಿಗೆ ಕೂಡ ಬರದೆ ರೈತರು ಕಣ್ಣೀರು ಇಡುವಂತೆ ಆಗಿದೆ. ಆದ್ದರಿಂದ ಸರಕಾರವು ಮಧ್ಯ ಪ್ರವೇಶ ಮಾಡಿ ಈರುಳ್ಳಿಯ ಬೆಂಬಲ ಬೆಲೆಯನ್ನು ಹೆಚ್ಚಿಸಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಬಿಜಾಪುರ ಜಿಲ್ಲಾ ಸಮಿತಿ ಸರಕಾರವನ್ನು ಆಗ್ರಹಪಡಿಸಿದೆ.

ಭೀಮಸಿ ಕಲಾದಗಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದ ಜಿಲ್ಲಾ ಸಮಿತಿಯು ಈ ಬಗ್ಗೆ ಸರ್ವಾನುಮತದಿಂದ ಠರಾವು ಒಂದು ಪಾಸು ಮಾಡಿ ಸಗಟು ವ್ಯಾಪಾರಿ ಬಂಡವಾಳಗಾರರು ಹೆಚ್ಚಿನ ಲಾಭ ಪಡೆಯುವ ಉದ್ದೇಶದಿಂದ ಮುಗ್ಧ ರೈತರ ಸುಲಿಗೆಗೆ ಇಳಿದಿದ್ದಾರೆ ಎಂದು ಆಪಾದಿಸಿತು.

ವಿಜಾಪುರ ಜಿಲ್ಲೆಯ ಆಹಾರ ನಾಗರೀಕ ಪೂರೈಕೆ ಅಧಿಕಾರಿಗಳಾದ ಎಸ್.ಎ.ಡಂಬಳ ಹಾಗೂ ಸಿ.ಎಸ್.ಅಂಗಡಿ ಇವರಿಗೆ ಹಿಂಬಡತಿ ಆಗಿರುವುದು ಅಸಮರ್ಪಕವಾಗಿದೆ ಎಂಬ ಅಭಿಪ್ರಾಯ ಪಟ್ಟ ಈ ಸಭೆ ಇವರನ್ನು ಸಸ್ಪೆಂಡ್ ಮಾಡಿ ಸಿ.ಒ.ಡಿ. ತನಿಖೆ ನಡೆಯಿಸಿ ತೀವ್ರವಾದ ಶಿಕ್ಷೆಗೆ ಗುರಿಪಡಿಸಿದಾಗ ಮಾತ್ರ ಸಮರ್ಪಕವಾದ ಕ್ರಮ ಜರುಗಿಸಿದಂತೆ ಆಗುತ್ತದೆ ಎಂದು ಅಭಿಪ್ರಾಯಪಟ್ಟಿತು.

ಬಡ ಜನರಿಗೆಂದು ಕಡಿಮೆ ದರದಲ್ಲಿ ವಿತರಿಸಲು ಇದ್ದ ಹಸಿರು ಕಾರ್ಡಿನ ಆಹಾರ ಧಾನ್ಯವನ್ನು ಕಾಳಸಂತೆಯಲ್ಲಿ ಮಾರಾಟ ಮಾಡಿ ಭವ್ಯವಾದ ಬಂಗಲೆ ಕಟ್ಟಿಕೊಂಡಿರುವ ಇವರನ್ನು ಸಸ್ಪೆಂಡ್ ಮಾಡದೆ ಹಿಂಬಡತಿ ಮಾಡಿದ ಸರಕಾರದ ಕ್ರಮವು ಅಪರಾಧಗಳನ್ನು ರಕ್ಷಿಸುವ ಕ್ರಮವಾಗಿದೆ ಎಂದು ಸಭೆಯು ಆಪಾದಿಸಿತು. ಜಿಲ್ಲೆಗೆ ಅಕ್ಕಿ ವಿತರಣೆಯನ್ನು ಕಡಿತ ಮಾಡಿರುವುದನ್ನು ರದ್ದು ಮಾಡಿ ವಿತರಣೆ ಮಾಡಬೇಕು ಎಂದೂ ಸಭೆ ಆಗ್ರಹಿಸಿತು.

ಕೃಷ್ಣಾ ನೀರಾವರಿ ಯೋಜನೆಯ ಕೆಲಸವು ಮತ್ತೆ ವಿಳಂಬ ರೀತಿಯಿಂದ ನಡೆದಿದ್ದು ಮಾತ್ರವಲ್ಲ ಕಳಪೆ ಮಟ್ಟದಲ್ಲಿ ಕೆಲಸ ನಡೆದಿದೆ ಎಂದು ಇಂಡಿ ಸಿಂಧಗಿ ಬಾಗೇವಾಡಿ ಭಾಗದ ರೈತರು ಆಪಾದಿಸಿದರು. ಆಲಮಟ್ಟಿ ಅಣೆಕಟ್ಟಿನ ಕ್ರಸ್ಟ್ ಗೇಟ್‌ಗಳನ್ನು ಕೂಡಿಸದೆ ವಿಳಂಬ ಮಾಡುತ್ತಿದ್ದು, ಸರಕಾರವು ಕೆಲಸ ನಡೆಸದೆ 2000 ಇಸ್ವಿಯಷ್ಟೊತ್ತಿಗೆ ಕೆಲಸ ಮುಗಿಯುತ್ತದೆ ಎಂದು ಸುಳ್ಳು ಭರವಸೆಗಳನ್ನು ನೀಡುತ್ತಾ ಜನರನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ ಎಂದು ಸಭೆ ಆಪಾದಿಸಿತು.

ವಿಜಾಪುರಕ್ಕೆ ಕುಡಿಯುವ ನೀರು: ವಿಜಾಪುರ ನಗರಕ್ಕೆ ಕುಡಿಯುವ ನೀರು ಪೂರೈಕೆ ಯೋಜನೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ ಎಂದು ನಗರಸಭೆಯ ಸದಸ್ಯರು ಹಾಗೂ ಉಪಾದ್ಯಕ್ಷರು ಆಪಾದನೆ ಮಾಡಿ ದ್ದಾರೆ. ಈ ಬಗ್ಗೆ ಸರಕಾರವು ಗಂಭೀರವಾಗಿ ಪರಿಗಣಿಸಿ ಸಿ.ಓ.ಡಿ. ತನಿಖೆ ನಡೆಯಿಸಿ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಬೇಕು ಹಾಗೂ ನಗರಕ್ಕೆ ಕುಡಿಯುವ ನೀರು ಶೀಘ್ರವಾಗಿ ಪೂ ರೈಕೆಯಾಗುವಂತೆ ಕೂಡಲೇ ಕ್ರಮ ಕೈಗೊಳ್ಳ ಬೇಕು ಎಂದು ಸಭೆಯು ಸರಕಾರಕ್ಕೆಆಗ್ರಹಿಸಿತು.

ತರಬೇತಿ ಶಿಬಿರ: ಜಿಲ್ಲಾ ಮಟ್ಟದ ರೈತ ಸಂಘದ ಪ್ರಮುಖ ಕಾರ್ಯಕರ್ತರಿಗೆ ಜುಲೈ ಎರಡನೇ ವಾರದಲ್ಲಿ ಎರಡು ದಿವಸ ತರಬೇತಿ ಶಿಬಿರ ನಡೆಸಲು ಜಿಲ್ಲಾ ಸಮಿತಿಯು ತೀರ್ಮಾನಿಸಿತು.

ಕಾರವಾರ: ಅಂಗನವಾಡಿ ನೌಕರರ ಸಂಘದ ಪದಾಧಿಕಾರಿಗಳ ಆಯ್ಕೆ

ಸಿಐಟಿಯುಗೆ ಸೇರಿದ ರಾಜ್ಯ ಅಂಗನವಾಡಿ ನೌಕರರ ಸಂಘದ ಕಾರವಾರ ತಾಲ್ಲೂಕು ಸದಸ್ಯರ ಸಭೆಯು ಜೂನಾ 26 ರಂದು ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಿತು. ಅಧ್ಯಕ್ಷರಾಗಿ ರಜನೀ ಹಬ್ಬು, ಉಪಾಧ್ಯಕ್ಷರಾಗಿ ಶಾನಂದಾ ಡಿ.ನಾಯ್ಕ, ಕಾರ್ಯದರ್ಶಿಯಾಗಿ ಪಾತಿಮಾ ಪರ್ನಾಂಡಿಸ್, ಸಹ ಕಾರ್ಯದರ್ಶಿಯಾಗಿ ಅಹಲ್ಯಾ ಗೋಟೆಗಾಳಿ, ಖಜಾಂಚಿಯಾಗಿ ಶ್ಯಾಮಲಾ ಹೆಗಡೆ ಹಾಗೂ ಸಮಿತಿ ಸದಸ್ಯರಾಗಿ 10 ಮಂದಿ ಆಯ್ಕೆಗೊಂಡಿದ್ದಾರೆ.

ಸಭೆಯಲ್ಲಿ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿಯವರು ನೌಕರರ ಬೇಡಿಕೆಗಳ ಈಡೇರಿಕೆ ಬಲಿಷ್ಟ ಹೋರಾಟದ ಮೂಲಕ ಮಾತ್ರ ಸಾಧ್ಯ ಎಂದು ತಿಳಿಸಿದರು. ಉತ್ತರ ಕನ್ನಡ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಸಿಐಟಿಯು ನೇತೃತ್ವದ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ ಬಲಿಷ್ಟಗೊಂಡು ಜಿಲ್ಲಾ ಮಟ್ಟದಲ್ಲಿ ಹೋರಾಟ ಬೆಳೆದು ಬರುತ್ತಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದರು. ಸಭೆಯಲ್ಲಿ ಡಿವೈಎಫ್ಐ ರಾಜ್ಯ ಸಮಿತಿ ಅಧ್ಯಕ್ಷರಾದ ಶಾಂತರಾಮ ನಾಯಕ್ ಮಾತನಾಡಿ ಅಂಗನವಾಡಿಗಳ ಖಾಸಗೀಕರಣವನ್ನು ತೀವ್ರವಾಗಿ ವಿರೋಧಿಸಿ ನೌಕರರನ್ನು ಸರಕಾರಿ ನೌಕರರಾಗಿ ಪರಿಗಣಿಸಬೇಕೆಂದು ಒತ್ತಾಯಿಸಿದರು. ಸಿಐಟಿಯು ಮುಖಂಡ ಸುಭಾಷ ಕೊಪ್ಪಿಕರ, ಎಸ್.ಬಿ.ನಾಯಕ, ಎಸ್.ಎಫ್.ಐ. ಜಿಲ್ಲಾ ಸಹ ಕಾರ್ಯದರ್ಶಿ ಯಮುನಾ ಗಾಂವಕರ ಸಭೆಯಲ್ಲಿ ಮಾತನಾಡಿದರು.

ಜಿಲ್ಲಾ ಮಟ್ಟದ ಸಭೆ

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ(ಸಿಐಟಿಯು) ಜಿಲ್ಲಾ ಸಮಿತಿ ಸಭೆಯು ಕಾರವಾರದಲ್ಲಿ ಜೂನ್ 26ರಂದು ನಡೆಯಿತು. ರಾಜ್ಯ ಕಾರ್ಯದರ್ಶಿ ಎಸ್.ವರಲಕ್ಷ್ಮಿ ಸಭೆಯಲ್ಲಿ ಭಾಗವಹಿಸಿ ಜಿಲ್ಲಾ ಮಟ್ಟದ ಸಂಘಟನೆ ಬಲಪಡಿಸುವ ಹಾಗೂ ಬೇಡಿಕೆಗಳ ಬಗ್ಗೆ ವಿವರವಾಗಿ ತಿಳಿಸಿದರು. ಸಭೆಯಲ್ಲಿ ರಾಜ್ಯ ಸಮಿತಿ ಸಹ ಕಾರ್ಯದರ್ಶಿ ನಾಗರತ್ನ ಪಡಿಯಾರ, ಸಮಿತಿ

ಸದಸ್ಯೆ ಸವಿತಾ ತಲ್ಮಾಡಿ, ಎಚ್.ಬಿ.ನಾಯ್ಕ ಹಾಗೂ ಬೇರೆ ಬೇರೆ ತಾಲ್ಲೂಕುಗಳ ಪದಾಧಿಕಾರಿಗಳು ಹಾಜರಿದ್ದರು. ಸುಭಾಷ ಕೊಪ್ಪಿಕರ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ನಿಯೋಗದ ಭೇಟಿ

ಜಿಲ್ಲಾ ಮಟ್ಟದ ನಿಯೋಗವೊಂದು ಎಸ್.ವರಲಕ್ಷ್ಮಿಯವರ ನಾಯಕತ್ವದಲ್ಲಿ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರನ್ನು ಭೇಟಿ ಮಾಡಿ ಬೇಡಿಕೆಗಳ ಬಗ್ಗೆ ಮನವಿ ಸಲ್ಲಿಸಿ ಚರ್ಚಿಸಿತು.

ದೊಡ್ಡಬಳ್ಳಾಪುರದಲ್ಲಿ ಕೆ.ಇ.ಬಿ. ಕಛೇರಿ ಮುಂದೆ ರೈತರ ಪ್ರತಿಭಟನಾ ಪ್ರದರ್ಶನ

ರೈತರು ತಮ್ಮ ಪಂಪುಸೆಟ್ಟುಗಳಿಗೆ ಕೆಪಾಸಿಟರ್‌ಗಳನ್ನು ಅಳವಡಿಸಿಲ್ಲವೆಂದು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ತಿಂಗಳಿಗೆ 200 ರೂಪಾಯಿಗಳ ದಂಡ ವಸೂಲಿ ಮಾಡುತ್ತಿರುವ ಕ್ರಮವನ್ನು ವಿರೋಧಿಸಿ ದೊಡ್ಡ ಬಳ್ಳಾಪುರ ತಾಲ್ಲೂಕಿನ ವಿವಿಧ ಗ್ರಾಮಗಳ ನೂರಾರು ರೈತರು ಮಂಡಳಿಯ ಮುಖ್ಯ ಕಛೇರಿಯ ಮುಂದೆ ಜೂನ್ 10 ರಂದು ಪ್ರತಿಭಟನಾ ಪ್ರದರ್ಶನವನ್ನು ನಡೆಸಿದರು.

ಈ ಪ್ರದರ್ಶನದ ನೇತೃತ್ವವನ್ನು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ರೈತ ಮುಖಂಡರು ಆದ ಹೆಚ್.ಮುಗುವಾಳಪ್ಪ ನವರು ಮತ್ತು ಕರ್ನಾಟಕ ಪ್ರಾಂತ ರೈತ ಸಂಘದ ತಾಲ್ಲೂಕು ಕಾರ್ಯದರ್ಶಿಯಾದ ಆರ್.ಚಂದ್ರ ತೇಜಸ್ವಿಯವರು ವಹಿಸಿದ್ದರು.

ನೆರೆದಿದ್ದ ರೈತರನ್ನು ಉದ್ದೇಶಿಸಿ ಅವರ ಬೇಡಿಕೆಗಳ ಬಗ್ಗೆ ಮಾತನಾಡಿದ ಕೆ.ಇ.ಬಿ.ಯ ಕಾರ್ಯನಿರ್ವಾಹಕ ಅಭಿಯಂತರರಾದ ಹನುಮಂತರಾಜು ಅವರು 12 ಗಂಟೆಗಳ ವಿದ್ಯುತ್ ಪೂರೈಕೆ ಮಾಡಲು ಕೂಡಲೇ ಕ್ರಮ ಕೈಗೊಳ್ಳುವುದಾಗಿಯೂ, ಕ್ಯಾಪಸಿಟರ್‌ಗಳ ಹೆಸರಿನಲ್ಲಿ ನಡೆಯುತ್ತಿರುವ ದಂಡ ವಸೂಲಿಯನ್ನು ನಿಲ್ಲಿಸಲು ಕ್ರಮ ಕೈಗೊಂಡು ಈ ಬಗ್ಗೆ ಮೇಲಿನ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿ ರೈತರಿಗೆ ನ್ಯಾಯ ದೊರಕಿಸಿ ಕೊಡುವ ಭರವಸೆ ನೀಡಿದರು.

ಪದವಿ ಶುಲ್ಕ ಏರಿಕೆ ವಿರುದ್ಧ ಶಿಕ್ಷಣ ನಿರ್ದೇಶಕರ ಕಛೇರಿಗೆ ಎಸ್‌ಎಫ್‌ಐ ಮುತ್ತಿಗೆ

ಪದವಿ ತರಗತಿಗಳಿಗೆ ಶೇ 23 ರಿಂದ ಶೇ 90 ರವರೆಗೆ ತೀವ್ರ ಸ್ವರೂಪದಲ್ಲಿ ಶುಲ್ಕ ಏರಿಕೆ ಮಾಡಿರುವ ರಾಜ್ಯ ಸರಕಾರದ ವಿರುದ್ಧ ಭಾರತವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ನೇತೃತ್ವದಲ್ಲಿ ಕಾಲೇಜು ಶಿಕ್ಷಣ ನಿರ್ದೇಶನಾಲಯ ಕಛೇರಿ ಯನ್ನು ಮುತ್ತಿಗೆ ಹಾಕಿ ತೀವ್ರ ಪ್ರತಿಭಟನೆ ನಡೆಸಲಾಯಿತು.

ಪರಿಶಿಷ್ಟ ಜಾತಿ-ಪಂಗಡದ ವಿದ್ಯಾರ್ಥಿಗಳಿಗೂ ಸೇರಿದಂತೆ ವಿದ್ಯಾರ್ಥಿ ಸಮುದಾಯದ ಮೇಲಿನ ದೊಡ್ಡ ಹಲ್ಲೆಯಾಗಿರುವ ಶುಲ್ಕ ಏರಿಕೆ ವಿರುದ್ಧ ನಗರದ ವಿವಿಧ ಕಾಲೇಜುಗಳ ನೂರಾರು ವಿದ್ಯಾರ್ಥಿಗಳು ಇಂದು ಬೆಳಿಗ್ಗೆ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ನಿರ್ದೇಶಕರ ಕಛೇರಿಯನ್ನು ಮುತ್ತಿಗೆ ಹಾಕಿದರು.

ಈ ಸಂದರ್ಭದಲ್ಲಿ ಮಾತನಾಡಿದ ಎಸ್‌ಎಫ್‌ಐ ರಾಜ್ಯ ಅಧ್ಯಕ್ಷರಾದ ಕೆ.ಎನ್. ಉಮೇಶ್‌ರವರು ಸರಕಾರದ ನಿರ್ಧಾರ 'ಉಳ್ಳವರಿಗೆ ಮಾತ್ರ ಶಿಕ್ಷಣ' ಎನ್ನುವ ನೀತಿಯಾಗಿದ್ದು ಈ ಶುಲ್ಕ ಏರಿಕೆ ಜಾರಿಯಾಗದಿರಲು ರಾಜ್ಯ ವಿದ್ಯಾರ್ಥಿ ಸಮುದಾಯ ಅವಕಾಶ ನೀಡುವುದಿಲ್ಲ, ಈ ನೀತಿ ತತ್‌ಕ್ಷಣ ವಾಪಸ್ಸಾಗದಿದ್ದಲ್ಲಿ ರಾಜ್ಯಾದ್ಯಂತ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಎಸ್‌ಎಫ್‌ಐ ಬೆಂಗಳೂರು ಜಿಲ್ಲಾ ಅಧ್ಯಕ್ಷರಾದ ಕೆ.ಶ್ರೀನಿವಾಸ್, ಕಾರ್ಯದರ್ಶಿಗಳಾದ ಆರ್.ರಾಮಕೃಷ್ಣ, ಬೆಂಗಳೂರು ವಿಶ್ವ ವಿದ್ಯಾಲಯದ ಸೆನೆಟ್ ಸದಸ್ಯೆ ಹಾಗೂ ಎಸ್‌ಎಫ್‌ಐ ರಾಜ್ಯ ಉಪಾಧ್ಯಕ್ಷರೂ ಆದ ಕೆ.ಎಸ್.ಲಕ್ಷ್ಮಿ ಶುಲ್ಕ ಏರಿಕೆಯನ್ನು ಖಂಡಿಸಿ ಮಾತನಾಡಿದರು. ಆನಂತರ ಕಾಲೇಜು ಶಿಕ್ಷಣ ನಿರ್ದೇಶಕರು ಹಾಗೂ ಆಯುಕ್ತರಿಗೆ ಮನವಿ ಸಲ್ಲಿಸಲಾಯಿತು.

ಎಸ್‌ಎಫ್‌ಐ ರಾಜ್ಯ ಸಮಿತಿಯು ಜುಲೈ 9 ರವರೆಗೆ ಶುಲ್ಕ ಏರಿಕೆ ನೀತಿ ವಾಪಸ್ಸು ಪಡೆಯಲು ಗಡುವು ನೀಡಿದ್ದು, ಸರಕಾರ ನೀತಿಯನ್ನು ವಾಪಸ್ಸು ಪಡೆಯದಿದ್ದಲ್ಲಿ ಜುಲೈ 10 ರಂದು ರಾಜ್ಯಾದ್ಯಂತ ಕಾಲೇಜು ಬಂದ್, ರಸ್ತೆ ತಡೆ ಮುಂತಾದ ತೀವ್ರ ಸ್ವರೂಪದ ಹೋರಾಟಕ್ಕೆ ಕರೆ ನೀಡಿದೆ. ಶುಲ್ಕ ಏರಿಕೆ ವಾಪಸ್ಸಾಗುವವರೆಗೂ ವಿದ್ಯಾರ್ಥಿಗಳು ಶುಲ್ಕ ಪಾವತಿ ಮಾಡಬಾರದೆಂದು ಈ ಮೂಲಕ ಎಸ್‌ಎಫ್‌ಐ ವಿದ್ಯಾರ್ಥಿಗಳನ್ನು ವಿನಂತಿಸಿದೆ.

ಕರ್ನಾಟಕದಲ್ಲಿ ಕಳೆದ ವಾರ

ಜೂನ್ 27

. ಕಾವೇರಿ ನೀರು ಹಂಚಿಕೆ ಕುರಿತ ನ್ಯಾಯಮಂಡಳಿ ಮಧ್ಯಂತರ ಆದೇಶದ ಜಾರಿಗೆ ಕೇಂದ್ರದ ಕರಡು ಸೂಚನೆಗೆ ರಾಜ್ಯ ಸರಕಾರ ಸಾರಾಸಗಟು ತಿರಸ್ಕಾರ.

. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹೊರಡಿಸಿದ್ದ 'ಧರ್ಮಕಾರಣ' ಕಾದಂಬರಿಯ ಮುಟ್ಟುಗೋಲಿನ ಆಜ್ಞೆಯನ್ನು ಹೈಕೋರ್ಟ್‌ನಲ್ಲಿ ನೀಡಿದ ಹೇಳಿಕೆಯಿಂದ ಹಿಂದೆ ಪಡೆದು, ಗೃಹ ಇಲಾಖೆಯ ಮೂಲಕ ಮತ್ತೆ ಮುಟ್ಟುಗೋಲು ಆದೇಶ.

ಜೂನ್ 29

. ಬೆಂಗಳೂರು - ಹಾಸನ ರೈಲ್ವೆ ಮಾರ್ಗ ಶಿಲಾನ್ಯಾಸ. ಮೂರು ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ರೈಲ್ವೆ ಮಂತ್ರಿಗಳು.

ಜೂನ್ 30

. ರಾಜ್ಯದಲ್ಲಿ ಬಂಡವಾಳ ಹೂಡಲು 23 ಅಮೆರಿಕನ್ ಹಾಗೂ 13 ಇಂಗ್ಲೆಂಡಿನ ಕಂಪನಿಗಳು ಆಸಕ್ತಿ ತೋರಿಸಿವೆ ಎಂದು, ವಿದೇಶ ಪ್ರವಾಸದಿಂದ ಮರಳಿದ ಮುಖ್ಯಮಂತ್ರಿಗಳು. ಒಟ್ಟು 2665 ಕೋಟಿ ರೂಗಳ ಬಂಡವಾಳ ಬರಬಹುದೆಂದು ಮುಖ್ಯಮಂತ್ರಿಗಳ ನಿರೀಕ್ಷೆ.

. ಅರ್ಜಿದಾರರು ಅನವಶ್ಯಕವಾಗಿ ಕೋರ್ಟ್ ಮೆಟ್ಟಿಲು ಹತ್ತುವಂತೆ ಮಾಡದೆ, ಕೋರ್ಟ್ ಆದೇಶಗಳ ಬಗ್ಗೆ ನಿಗದಿತ ವೇಳೆಯಲ್ಲಿ ಕಟ್ಟುನಿಟ್ಟಾಗಿ ನಿರ್ದಿಷ್ಟ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಬೇಕೆಂದು ರಾಜ್ಯದ ಮುಖ್ಯಕಾರ್ಯದರ್ಶಿಯವರಿಗೆ ಹೈಕೋರ್ಟ್ ಆದೇಶ.

ಜುಲೈ 1

.ಕಾವೇರಿ ಪ್ರಾಧಿಕಾರ ರಚನೆಯ ಕರಡುಅಧಿಸೂಚನೆಯನ್ನು ತಿರಸ್ಕರಿಸಲು ರಾಜ್ಯದ ಸರ್ವಪಕ್ಷಗಳ ಸಭೆಯ ನಿರ್ಧಾರ. ರಾಷ್ಟ್ರೀಯ ಜಲನೀತಿಗೆ ಮಾರ್ಗಸೂಚಿ ರೂಪಿಸುವಂತೆ ಒತ್ತಾಯಿಸಲು ಪ್ರಧಾನಿ ಬಳಿಗೆ ನಿಯೋಗ ಕಳಿಸಲು ನಿರ್ಧಾರ.

. ಕೇಂದ್ರದ ಕರಡು ಅಧಿಸೂಚನೆಯ ವಿರುದ್ಧ ಮಂಡ್ಯದಲ್ಲಿ ಬಂದ್.

. ಬೆಂಗಳೂರಿನಲ್ಲಿ ಹಾಡುಹಗಲೇ ಭೂಗತ ದೊರೆಗಳ ರೌಡಿಗಳ ಪರಸ್ಪರ ಧಾಳಿ, ಒಬ್ಬನ ಸಾವು.

ಜುಲೈ 2

. ಜನತಾದಳ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಯನ್ನು ಬಹಿಷ್ಕರಿಸುವವ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿಗಳ ಎಚ್ಚರಿಕೆ.

. ರಾಜ್ಯದ ಒಂಭತ್ತನೇ ಪಂಚವಾರ್ಷಿಕ ಯೋಜನೆಯ ಗಾತ್ರ 23400 ಕೋಟಿ ರೂ. ಎಂಟನೇ ಯೋಜನೆಯಲ್ಲಿ ಮಾಡಿದ ಖರ್ಚು 16817.5 ಕೋಟಿ ರೂ.

. ಸರಕಾರ ಗುತ್ತಿಗೆ ಶಿಕ್ಷಕರ ನೇಮಕಾತಿಯ ನಿಯಮಾವಳಿಗಳ ತಿದ್ದುಪಡಿ ತಂದ ಹಿನ್ನೆಲೆಯಲ್ಲಿ 10 ಸಾವಿರ ಗುತ್ತಿಗೆ ಶಿಕ್ಷಕರ ಮೂಲ ವೇತನ ಕಡಿತಗೊಳ್ಳಲಿದೆ ಎಂದು ಮಾಧ್ಯಮಿಕ ಶಿಕ್ಷಕರ ಸಂಘದ ಖಂಡನೆ.

ಜುಲೈ 3

. ಜನತಾದಳ ಅಧ್ಯಕ್ಷೀಯ ಚುನಾವಣೆಯಲ್ಲಿ ರಾಜ್ಯದಲ್ಲಿನ 65 ಮತದಾರರ ಪೈಕಿ ಕೇಂದ್ರ ಮಂತ್ರಿ ಜಾಲಪ್ಪನವರು ಸೇರಿದಂತೆ 14 ಮಂದಿಯ ಬಹಿಷ್ಕಾರ. ಬಹಿಷ್ಕಾರ ಬೆದರಿಕೆ ಹಾಕಿದ್ದರೂ ಏಳು ರಾಜ್ಯ ಸಚಿವರು ಮತದಾನದಲ್ಲಿ ಭಾಗವಹಿಸಿದರು.


. ಬೆಂಗಳೂರಿನಲ್ಲಿ ಅನಧಿಕೃತ ಕಟ್ಟಡ ನಿರ್ಮಾಣ ತಡೆಗೆ ಬೆಂಗಳೂರು ಮಹಾನಗರ ಪಾಲಿಕೆಯ "ರಾತ್ರಿ ಗಸ್ತು ತುರ್ತು ಪಡೆ"ಯ ರಚನೆ

ಏಜೆಂಸಿದಾರರಿಗೆ ಸೂಚನೆ

ದುಡಿಯುವ ಜನರ ಪತ್ರಿಕೆ "ಐಕ್ಯರಂಗ" ನಿರಂತರವಾದ ಬೆಲೆ ಏರಿಕೆಗಳಿಂದಾಗಿ ತೀವ್ರ ಹಣಕಾಸು ಮುಗ್ಗಟ್ಟು ಅನುಭವಿಸಬೇಕಾಗಿ ಬಂದಿದೆ. ಇದನ್ನು ಎದುರಿಸಲು ಏಜೆಂಸಿದಾರರ ಸಹಕಾರವನ್ನು ಮತ್ತೆ-ಮತ್ತೆ ಕೋರುತ್ತಿದ್ದರೂ ಬಹಳ ಮಂದಿ ಪರಿಸ್ಥಿತಿಯ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ. ಆದ್ದರಿಂದ ನಿರ್ವಾಹವಿಲ್ಲದೆ ವ್ಯವಸ್ಥಾಪಕ ಮಂಡಳಿ ಕೆಲವು ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ನಿರ್ಧರಿಸಿದೆ. ಏಜೆಂಸಿ ಬಿಲ್ ಬಾಕಿಯನ್ನು ಜುಲೈ ೩೧ರೊಳಗೆ ಪಾವತಿ ಮಾಡದ ಏಜೆಂಸಿಗಳನ್ನು ರದ್ದು ಮಾಡಲಾಗುವುದು. ಇದನ್ನು ಸಂಬಂಧಪಟ್ಟ ಎಲ್ಲಾ ಏಜೆಂಸಿದಾರರು ಗಮನಿಸಬೇಕಾಗಿ ಕೋರುತ್ತೇವೆ. ಏಜೆಂಸಿದಾರರಿಗೆ ಕಳಿಸಿರುವ ಜೂನ್ ತಿಂಗಳ ಬಿಲ್‌ನಲ್ಲಿ ಹಿಂದಿನ ಬಾಕಿಯನ್ನು ಪ್ರತ್ಯೇಕವಾಗಿ ನಮೂದಿಸಲಾಗಿದೆ.

\- ವ್ಯವಸ್ಥಾಪಕರು

ಸಂಯುಕ್ತ ರಂಗ ಸರಕಾರ ಅಧಿಕಾರವಹಿಸಿಕೊಂಡು ಈಗ ಒಂದು ವರ್ಷದ ಮೇಲಾಗಿದೆ. ಕಾಂಗ್ರೆಸ್ಸೇತರ, ಬಜೆಪಿಯೇತರ ಪಕ್ಷಗಳು ಸೇರಿ ರಚಿಸಿಕೊಂಡ 'ಸಂಯುಕ್ತ ರಂಗ' ಒಂದು 'ಸಮಾನ ಕನಿಷ್ಠ ಕಾರ್ಯಕ್ರಮ'ವನ್ನು
ಅಂಗೀಕರಿಸಿ ಕೂಡಾ ಒಂದು ವರ್ಷದ ಮೇಲಾಗಿದೆ. ಯಾವ ಒಂದು ಪಕ್ಷಕ್ಕೂ ಜನಾದೇಶ ಸಿಗದ ಸನ್ನಿವೇಶದಲ್ಲಿ, ಕಾಂಗ್ರೆಸ್ಸನ್ನು ಜನ ತಿರಸ್ಕರಿಸಿದ ಹಾಗೂ ಜನರಿಂದ ಅಧಿಕಾರ ನಡೆಸುವ ಆದೇಶ ಪಡೆಯದಿದ್ದರೂ
ಹೇಗಾದರೂ ಅಧಿಕಾರ ನಡೆಸುವ ಬಜೆಪಿಯ ಹುನ್ನಾರವನ್ನು ವಿಫಲಗೊಳಿಸಿ ದೇಶದ ಐಕ್ಯತೆಯನ್ನು ರಕ್ಷಿಸಬೇಕಾಗಿದ್ದ ಹಿನ್ನೆಲೆಯಲ್ಲಿ ವಿಭಿನ್ನ ಸೈದ್ಧಾಂತಿಕ ನೆಲೆಯ ಕಾಂಗ್ರೆಸ್ಸೇತರ, ಬಜೆಪಿಯೇತರ ಪಕ್ಷಗಳು ಐದೇ ದಿನದಲ್ಲೊಳಗೆ
ರೂಪಿಸಿದ ಈ 'ಸಮಾನ ಕನಿಷ್ಠ ಕಾರ್ಯಕ್ರಮ' ದಲ್ಲಿ ಬಹಳಷ್ಟು ಸಕಾರಾತ್ಮಕ ಅಂಶಗಳಿವೆ. ಕೆಲವು ನಕಾರಾತ್ಮಕ ಅಂಶಗಳೂ ಇವೆ. ಆದರೆ ಸಂಯುಕ್ತ ರಂಗ ಸರಕಾರ ಈ ಸಕಾರಾತ್ಮಕ ಅಂಶಗಳನ್ನು ಬದಿಗೊತ್ತಿ ನಕಾರಾತ್ಮಕ
ಅಂಶಗಳ ಮೇಲೆಯೇ ಒತ್ತು ನೀಡುತ್ತಿದೆ. ಬಹುಪಾಲು ದುಡಿಯುವ ಜನರಿಗೆ ನೀಡಿದ ವಚನಗಳನ್ನು ಪಾಲಿಸಲು ಹಿಂದೇಟು ಹಾಕುತ್ತಾ ಇನ್ನೊಂದು ಕಡೆ ಬಂಡವಾಳಿ
ಗರನ್ನು ಮೆಚ್ಚಿಸುವ ನೀತಿಗಳನ್ನು ಬಹಳ ಮುತುವರ್ಜಿಯಿಂದ ಜಾರಿಗೆ ತರುತ್ತಿದೆ. ಪೆಟ್ರೋಲಿಯಂ ಬೆಲೆಯೇರಿಕೆಯ ವಿವಾದ ಇದಕ್ಕೊಂದು ಉದಾಹರಣೆಯಷ್ಟೆ.
ಸಿಪಿಐ(ಎಂ) ಸಂಯುಕ್ತ ರಂಗದ ಚಾಲನಾ ಸಮಿತಿಯ ಸಭೆಗಳಲ್ಲಿ ಹಾಗೂ ಸಂಸತ್ತಿನಲ್ಲಿ ಮತ್ತೆ-ಮತ್ತೆ ನೆನಪಿಸಿದರೂ, ಎಚ್ಚರಿಸಿದರೂ ಜನಸಾಮಾನ್ಯರಿಗೆ ನೀಡಿದ ವಚನ
ಗಳನ್ನು ಪಾಲಿಸುತ್ತಿಲ್ಲ. ಆದ್ದರಿಂದ ಇತ್ತೀಚೆಗೆ ಮೇ 12 ರಿಂದ 14 ರ ವರೆಗೆ ಸಭೆ ಸೇರಿದ ಸಿಪಿಐ(ಎಂ) ಕೇಂದ್ರ ಸಮಿತಿ ಈ ವಚನಗಳನ್ನು ಈಡೇರಿಸಲು ಆಗ್ರಹಪಡಿ
ಸುವಂತೆ ಹಾಗೂ ದುಡಿಯುವ ಜನಗಳ, ದೇಶದ ಸ್ವಾವಲಂಬನೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಕ್ರಮಗಳನ್ನು ವಿರೋಧಿಸುವಂತೆ ಜನಗಳನ್ನು ಅಣಿನೆರೆ
ಸಲು ಜುಲೈ 15 ರಿಂದ 31 ರವರೆಗೆ ರಾಷ್ಟ್ರೀಯ ಪ್ರಚಾರಾಂದೋಲನ ನಡೆಸಬೇಕೆಂದು ಕರೆ ನೀಡಿತು. ಈ ಪ್ರಚಾರಾಂದೋಲನಕ್ಕೆ ಈಗ ದೇಶಾದ್ಯಂತ ಸಿದ್ಧತೆಗಳು ನಡೆ
ಯುತ್ತಿವೆ. ಈ ಸಂದರ್ಭದಲ್ಲಿ ಎಂಟು ಮುಖ್ಯ ಬೇಡಿಕೆಗಳನ್ನು ಮುಂದಿಡಲಾಗಿದೆ. ಈ ಬೇಡಿಕೆಗಳ ಬಗ್ಗೆ 'ಐಕ್ಯರಂಗ' ದಲ್ಲಿ ನೀವು ಈಗಾಗಲೇ ವಿವಿಧ ಸಂದರ್ಭಗಳಲ್ಲಿ
ಓದಿದ್ದೀರಿ. ರಾಷ್ಟ್ರೀಯ ಪ್ರಚಾರಾಂದೋಲನದ ಸಂದರ್ಭದಲ್ಲಿ ದುಡಿಯುವ ಜನಗಳ ಈ ಬೇಡಿಕೆಗಳ ಒಂದು ವಿಹಂಗಮ ನೋಟವನ್ನು ಕೊಡಲು ಪ್ರಯತ್ನಿಸಲಾಗಿದೆ.



"ಜನಗಳಿಗೆ ನೀಡಿದ ಭರವಸೆಗಳ ಜಾರಿಗೆ ಆದ್ಯತೆ ನೀಡಿ ಬಂಡವಾಳಿಗರನ್ನೇ ಮೆಚ್ಚಿಸುವ ನೀತಿಗಳನ್ನು ನಿಲ್ಲಿಸಿ"

1 ಲಾಭಕರ ಸಾರ್ವಜನಿಕ ವಲಯದ ಉದ್ದಿಮೆಗಳ ಹಾಗೂ ಮಹತ್ವದ ಮತ್ತು ಪ್ರಧಾನ ವಲಯಗಳಲ್ಲಿರುವ ಉದ್ದಿಮೆಗಳ ಶೇರುಗಳ ಮೂಲಕ ಸಾರ್ವಜನಿಕ ವಲಯವನ್ನು ಕಳಚಿ ಹಾಕುವುದನ್ನು ನಿಲ್ಲಿಸಬೇಕು.

ಸಾರ್ವಜನಿಕ ವಲಯದ ಉದ್ದಿಮೆ ಗಳನ್ನು ಕೆಲವು ನಿರ್ದಿಷ್ಟ ರಾಜಕೀಯ ನೀತಿ/ಉದ್ದೇಶಗಳ ಫಲವಾಗಿ ಸ್ಥಾಪಿಸಲಾಯಿತು. ಆ ಉದ್ದೇಶಗಳೇ ಬದಲಾಗಿವೆ ಎಂದು ಹೇಳುವ ಧೈರ್ಯವಂತೂ ರಾಜಕೀಯ ವ್ಯವಸ್ಥೆಗೆ ಇಲ್ಲ. ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳದ ಪ್ರಭಾವದಿಂದಾಗಿ ಈ ಘೋಷಿತ ಉದ್ದೇಶಗಳೆಲ್ಲ ದಾರಿತಪ್ಪಿವೆ. ಇದು ದೇಶದ ಸಾರ್ವಭೌಮತ್ವವನ್ನೇ ಹಾಳುಗೆಡವುತ್ತಿದೆ.

ಸಂಯುಕ್ತರಂಗ ಸರಕಾರ ಬಂದ ಮೇಲೆ ಈ. ಸಾರ್ವಜನಿಕ ವಲಯದ ಉದ್ದಿಮೆಗಳ ಪುನರುಜ್ಜೀವನದ ಬಗ್ಗೆ, ಅವುಗಳ ಸಾಮರ್ಥ್ಯವನ್ನು ಉತ್ತಮ ಪಡಿಸುವತ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತದೆಂಬ ಆಶಯವಿತ್ತು. ಸಂಯುಕ್ತ ರಂಗದ ಸಮಾನ ಕನಿಷ್ಠ ಕಾರ್ಯಕ್ರಮದಲ್ಲಿ ಈ ಬಗ್ಗೆ ಸ್ಪಷ್ಟವಾದ ಮಾತುಗಳಿವೆ. ಆದರೆ ಸಂಯುಕ್ತ ರಂಗ ಸರಕಾರ ಶೇರು ಹಿಂಪಡೆತಕ್ಕೆ ಒಂದು ಸಮಿತಿಯನ್ನೇ ನೇಮಿಸಿದೆ.

ಲಾಭದಾಯಕ ಉದ್ದಿಮೆಗಳನ್ನು ಖಾಸಗಿಯವರಿಗೆ ಮೂರು ಕಾಸಿಗೆ ಮಾರುವ ಕೆಲಸವನ್ನು ಸರಕಾರ ಸುವ್ಯವಸ್ಥಿತವಾಗಿ ನಡೆಸುತ್ತಿದೆ. ಕೇಂದ್ರ ಸರಕಾರದ ಹಣಕಾಸು ಕೊರತೆಯನ್ನು ನೀಗಲು ಹಣ ಈ ಶೇರು ಮಾರಾಟದಿಂದಲೇ ಬರಬೇಕು. ಬಂಡವಾಳ ಶಾಹಿಗಳಿಗೆ ತೆರಿಗೆ ವಿನಾಯಿತಿ ಕಡಿತವನ್ನೂ ಸರಕಾರ ಇದೇ ಸಮಯದಲ್ಲಿ ನೀಡುತ್ತದೆ. ಅಂದರೆ ಈ ಮೂಲಕ ಬರಬಹುದಾದ ಆದಾಯ ಹಣಕಾಸು ಕೊರತೆ ನೀಗಲು ಬೇಡ. ಸಾರ್ವಜನಿಕ ವಲಯದ ಉದ್ದಿಮೆ ಗಳ ಶೇರು ಮಾರಾಟದಿಂದ ಬರುವ ಹಣ ಇದಕ್ಕೆ ಬಳಕೆಯಾಗಬೇಕು.

ಹಾಗೆ ನಮ್ಮ ಸಾರ್ವಜನಿಕ ವಲಯುವೆಂಬುದು ಈ ಬಂಡವಾಳಿಗರು/ ಆಳರಸರು ಹೇಳುವಂತಹ ಮಾರಿ ಹಾದೆ? ಖಂಡಿತ ಇಲ್ಲ, ಬದಲಿಗೆ ಇವು ನಮ್ಮ ಆರ್ಥಿಕದ ಕಾಮಧೇನುಗಳು. ಅದಕ್ಕಾಗಿಯೇ ಈ ಬಂಡವಾಳಿಗರ ಹದ್ದಿನ ಕಣ್ಣು ಈ ವಲಯದ ಮೇಲೆ ಬಿದ್ದಿರುವುದು.

ಈ ಅಂಕಿ-ಸಂಖ್ಯೆಗಳನ್ನು ನೋಡಿ.

■ ಒಟ್ಟು ಕೇಂದ್ರ ಸರಕಾರದ 245 ಸಾರ್ವಜನಿಕ ವಲಯದ ಉದ್ದಿಮೆಗಳಿವೆ(166 ಉತ್ಪಾದನಾ ವಲಯದಲ್ಲಿ, 75 ಸೇವಾವಲಯದಲ್ಲಿ ಹಾಗೂ ಇನ್ನುಳಿದ 4 ಇನ್ನೂ ಕಾರ್ಯ ರೂಪಕ್ಕೆ ಬಾರದಿರುವಂತಹವು). ಇವುಗಳಲ್ಲಿ ಹೂಡಿಕೆಯಾಗಿರುವ ಮೊತ್ತ 172348 ಕೋಟಿ ರೂಪಾಯಿಗಳು. ಇವುಗಳ ಒಟ್ಟು ಸ್ವತ್ತು 3,00,000 ಕೋಟಿ ರೂಪಾಯಿ ಗಳಷ್ಟು. ಈ ವಲಯ ಶೇ 100 ರಷ್ಟು ಪೆಟ್ರೋಲಿಯಂ, ನೈಸರ್ಗಿಕ ಅನಿಲ, ಶೇ 95 ರಷ್ಟು ವಿದ್ಯುತ್ ಮತ್ತು ಶೇ 60 ರಷ್ಟು ಉಕ್ಕು ಉತ್ಪಾದನೆ ನೀಡುತ್ತದೆ.

■ 1995 ರಲ್ಲಿ 130 ಲಾಭ ಮಾಡುವ ಸಾರ್ವಜನಿಕ ವಲಯದ ಘಟಕಗಳಿದ್ದವು. ಇವು 12000 ಕೋಟಿ ರೂಪಾಯಿಗಳ ಲಾಭ ಮಾಡಿದವು. ಅಲ್ಲದೆ 25000 ಕೋಟಿ ರೂಪಾಯಿಗಳನ್ನು ದೇಶದ ಖಜಾನೆಗೆ ನೀಡಿ ದವು. ಇದಲ್ಲದೆ ಡಿವಿಡೆಂಡ್ ರೂಪದಲ್ಲಿ ಸರಕಾರಕ್ಕೆ 1400 ಕೋಟಿ ರೂಪಾಯಿಗಳನ್ನು ನೀಡಿದವು.

■ ಒಟ್ಟು 109 ಘಟಕಗಳು ಹಾನಿ ಮಾಡಿದವು. ಇವು ಮಾಡಿದ ಹಾನಿ 5000 ಕೋಟಿ ರೂಪಾಯಿಗಳಷ್ಟು. ಈ ಹಾನಿ ಯಾಕೆ? ಸರಕಾರದ ಅನಾವಶ್ಯಕ ಹಸ್ತಕ್ಷೇಪ, ಅಸಮರ್ಥ ನಿರ್ವಹಣೆಯಿಂದಾಗಿ.

■ ಇವು ಸುಮಾರು 50400 ಕೋಟಿ ರೂಪಾಯಿಗಳನ್ನು ವಿಸ್ತರಣೆ ಮತ್ತು ಆಧುನೀಕರಣಕ್ಕಾಗಿ ತೊಡಗಿಸಿದವು. ಇದರಲ್ಲಿ 46000 ಕೋಟಿ ರೂಪಾಯಿ ಗಳಿಗೂ ಹೆಚ್ಚು ಅವುಗಳ ಆಂತರಿಕ ಮೂಲಗಳಿಂದಲೇ ಬಂದಂತಹವು.

ಇವು ಸಾರ್ವಜನಿಕ ವಲಯದ ಘಟಕ ಗಳು ಅಸಮರ್ಥವಲ್ಲ, ಬದಲಿಗೆ ಅತ್ಯಂತ ಸಮರ್ಥವಾದಂತಹವು, ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಆದಾಯವನ್ನು ತಂದು ಕೊಡು ವಂತಹವು ಎಂಬುದನ್ನು ಎತ್ತಿತೋರಿಸುತ್ತದೆ.

ಉದಾರೀಕರಣವಾದಿಗಳು ಮತ್ತು ಖಾಸಗಿಯವರು ಸೇರಿ ಸಾರ್ವಜನಿಕ ವಲಯದ ಘಟಕಗಳು ಸರಕಾರಕ್ಕೆ ಹೊರೆ ಎಂಬ ಸುಳ್ಳನ್ನೂ ಪ್ರಚಾರ ಮಾಡುತ್ತಿದ್ದಾರೆ. ಯಾಕೆಂದರೆ ಅದರಿಂದ ಅವರಿಗೆ ಲಾಭವಿದೆ. ಶೇರು ಹಿಂಪಡೆತವೆಂದರೆ ಸರಕಾರ ತನ್ನ ಶೇರುಗಳನ್ನು ಹಿಂದಕ್ಕೆ ಪಡೆದು ಖಾಸಗಿ ಯವರಿಗೆ ಮಾರಿದಂತೆ. ಇಲ್ಲಿ ಶೇರುಗಳನ್ನು ಅದರ ಬೆಲೆಗೆ ಮಾರಿದರೆ ಖಾಸಗಿಯವರಿಗೆ ಲಾಭದ ಹೊಳೆ. ಮೂರು ಲಕ್ಷ ಕೋಟಿ ರೂಪಾಯಿಗಳ ಆಸ್ತಿ ಹೊಡೆವ ಸಂಚು ಇದು. ಆದ್ದರಿಂದಲೇ ಈ ಸುಳ್ಳು ಪ್ರಚಾರ.

ಸಾರ್ವಜನಿಕ ವಲಯದ ಘಟಗಳನ್ನು ಈ ರೀತಿ ಸಾಯಿಸಿ ಕಳಚಿ ಹಾಕುವುದನ್ನು ಕೂಡಲೇ ನಿಲ್ಲಿಸಬೇಕೆಂಬುದೇ ನಮ್ಮ ಒತ್ತಾಯ. ○

2 ಸಾರ್ವಜನಿಕ ಮತ್ತು ಖಾಸಗೀ ವಲಯಗಳಲ್ಲಿ ರೋಗಗ್ರಸ್ತ ಘಟಕಗಳನ್ನು ಪುನರುಜ್ಜೀವನಗೊಳಿಸಲು ತಕ್ಷಣ ಕ್ರಮ ಕೈಗೊಳ್ಳಬೇಕು.

ದೇಶದಲ್ಲಿ ಸುಮಾರು 4.5 ಲಕ್ಷ ಕೈಗಾರಿಕಾ ಘಟಕಗಳು ರೋಗಗ್ರಸ್ತವಾಗಿ ಮುಚ್ಚಿವೆ ಅಥವಾ ಇನ್ನೇನು ಮುಚ್ಚುವ ಸ್ಥಿತಿಯಲ್ಲಿವೆ. ಇದರಿಂದ ಲಕ್ಷಾಂತರ ಕಾರ್ಮಿಕರು ನಿರುದ್ಯೋಗಿಗಳಾಗಿ ನಿರ್ಗತಿಕರಾಗಿದ್ದಾರೆ. ಅವರ ಪುಟ್ಟ ಮಕ್ಕಳು ಕೂಡಾ ಶಾಲೆ ಬಿಟ್ಟು ಕೆಲಸ ಮಾಡಬೇಕಾದಂತಹ ಪರಿಸ್ಥಿತಿಯುಂಟಾಗಿದೆ. ಇದರಿಂದ ಬೇಸತ್ತು ಕಾರ್ಮಿಕರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಪ್ರಕರಣಗಳು ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತಿವೆ.

■ ಕೈಗಾರಿಕೆಗಳು ಮುಚ್ಚುವ ಸ್ಥಿತಿ ಬರಲು ಮೂಲಕಾರಣ ಸರಕಾರದ ತಪ್ಪಾದ, ಸಮತೋಲನವಿಲ್ಲದ ಕೈಗಾರಿಕಾ ನೀತಿ. ವಿಶ್ವಬ್ಯಾಂಕ್-ಐಎಂಎಫ್ ಹೇರಿದ ನೀತಿಗಳಂತೂ ವಾಸ್ತವವಾಗಿ ಭಾರತದ ಕೈಗಾರಿಕೆಗಳನ್ನು ನಾಶಮಾಡಿ ವಿದೇಶಿ ಉದ್ದಿಮೆಗಳಿಗೆ ಅವಕಾಶ ಮಾಡಿಕೊಡಲೆಂದೇ ಬಂದವುಗಳು. ಸಹಜವಾಗಿ ಕಳೆದ ನಾಲ್ಕೈದು ವರ್ಷಗಳಲ್ಲಿ ರೋಗಗ್ರಸ್ತವಾಗಿ ಮುಚ್ಚಿದ, ಅದರಿಂದಾಗಿ ಕಾರ್ಮಿಕರು ಬೀದಿಪಾಲಾಗುತ್ತಿರುವ ಪ್ರಕರಣಗಳು ವಿಪರೀತವಾಗಿ ಹೆಚ್ಚಿವೆ.




■ ಸಂಯುಕ್ತ ರಂಗದ 'ಸಮಾನ ಕನಿಷ್ಠ ಕಾರ್ಯಕ್ರಮ' ರೋಗಗ್ರಸ್ಥತೆಯ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಹೊಸದೊಂದು ಕಾನೂನು ತರುವ ವಚನ ನೀಡಿತ್ತು. ಬಿ.ಐ.ಎಫ್.ಆರ್. (ಕೈಗಾರಿಕಾ ಹಣಕಾಸು ಮತ್ತು ಪುನರ್ರಚನಾ ಮಂಡಳಿ-ರೋಗಗ್ರಸ್ತ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸುವ ಬಗ್ಗೆ ಪರಿಶೀಲಿಸಲು ಇರುವ ಸಂಸ್ಥೆ)ವನ್ನು ಸಂಪೂರ್ಣವಾಗಿ ಮರು ಪರಿಷ್ಕರಣೆ ಮಾಡಲಾಗುವುದು, ರೋಗಗ್ರಸ್ತ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಲು, ಕಾರ್ಮಿಕರ ಹಿತಾಸಕ್ತಿ ಗಳನ್ನು ರಕ್ಷಿಸಲು ಪ್ರಯತ್ನಿಸಲಾಗುವುದು ಎಂದು ವಚನವಿತ್ತ ಸಂಯುಕ್ತ ರಂಗ ಸರಕಾರ ಕೈಗಾರಿಕೆಗಳನ್ನು ನಾಶಮಾಡುವ ನೀತಿಗಳನ್ನೇ ಮುಂದುವರಿಸುತ್ತಿದೆ.

■ ಸಾರ್ವಜನಿಕ ವಲಯದಲ್ಲಿ ಇತ್ತೀಚಿನ ವರೆಗೂ ಲಾಭಗಳಿಸುತ್ತಿದ್ದ ಐ.ಟಿ.ಐ., ಬಿ.ಇ.ಎಂ.ಎಲ್., ಗಳಂತಹ ಉದ್ದಿಮೆಗಳೂ ರೋಗಗ್ರಸ್ತವಾಗುವಂತೆ ಮಾಡಿರುವುದು 'ಹೊಸ ಆರ್ಥಿಕ ನೀತಿ' ಗಳು ಅಥವಾ 'ಸಂರಚನಾ ಹೊಂದಾಣಿಕೆ'ಯ ನೀತಿ ಗಳು. ಉದ್ದೇಶ ಪೂರ್ವಕವಾಗಿಯೇ ಇವುಗಳಿಗೆ ಆರ್ಡರ್ ಸಿಗದೆ ಬಹುರಾಷ್ಟ್ರೀಯ ಕಂಪನಿಗಳಿಗೆ ಆರ್ಡರುಗಳು ಸಿಗುವಂತೆ ಮಾಡುವ ನೀತಿಗಳಿಂದ ಇನ್ನೇನಾಗಲು ಸಾಧ್ಯ? ಆಮದು ಸುಂಕ ಗಳನ್ನು ವಿಪರೀತವಾಗಿ ಕಡಿತಗೊಳಿಸಿ ಇಲ್ಲಿ ಉತ್ಪಾದಿಸ ಬಹುದಾದ್ದನ್ನು ಆಮದು ಮಾಡಿಕೊಳ್ಳ ಲಾರಂಭಿಸಿದರೆ ಈ ಘಟಕಗಳು ತಮ್ಮ ಉತ್ಪಾದನೆ ಯನ್ನು ನಿಲ್ಲಿಸದೆ ಬೇರೇನಾಗಲು ಸಾಧ್ಯ? ಇದು ಸಾರ್ವಜನಿಕ ವಲಯದಲ್ಲಿ ರೋಗಗ್ರಸ್ತತೆಯು 'ಒಂದು ಆಯಾಮವಾದರೆ ಬಿ.ಐ. ಎಫ್.ಆರ್. ಪುನರುಜ್ಜೀವನಕ್ಕೆಂದು ಅನುಮೋದಿಸಿದ ಯೋಜನೆಗಳನ್ನು ಜಾರಿಗೆ ತರಲು ಸರಕಾರ ನಿರಾಕರಿಸುತ್ತದೆ. ಸದಾ ಬಂಡವಾಳವಿಲ್ಲವೆಂಬ ನೆಪ ಹೂಡುತ್ತದೆ. ಆದರೆ ಅತ್ತ ಆಮದು ಸುಂಕಗಳಲ್ಲಿ ಮತ್ತೆ-ಮತ್ತೆ ರಿಯಾಯ್ತಿ ನೀಡಿ ತನ್ನ ಆದಾಯವನ್ನು ಕಳಕೊಳ್ಳಲು ಅದು ಸದಾ ಸಿದ್ಧವಿರುತ್ತದೆ. ಕೆಲವು ಉದ್ದಿಮೆಗಳ ಆಧುನೀಕರಣದತ್ತ ಗಮನ ಹರಿಸ ದಿರುವುದು ರೋಗಗ್ರಸ್ತತೆಗೆ ಮತ್ತೊಂದು ಕಾರಣ.

■ ಖಾಸಗಿ ವಲಯದಲ್ಲಿ ರೋಗಗ್ರಸ್ತತೆ ಇನ್ನೂ ವೇಗವಾಗಿ ಹೆಚ್ಚುತ್ತಿದೆ. ಈ ವಲಯದಲ್ಲಿ ಉದ್ದಿಮೆಗಳು ಮುಚ್ಚಲು ಮುಖ್ಯ ಕಾರಣ ದುರಾಡಳಿತ ಹಾಗೂ ಹಣದ ದುರುಪಯೋಗ. ಮಾಲಕರು ಈ ಉದ್ದಿಮೆಯೊಳಗಿನ ಹಣವನ್ನು ಹೆಚ್ಚಿನ ಪ್ರಮಾಣದಲ್ಲಿ ಹಾಗೂ ಬೇಗನೇ ಲಾಭ ತರುವ ಇತರ ಪ್ರಯತ್ನಗಳಲ್ಲಿ ಕಾನೂನು ಬಾಹಿರ ವಾಗಿ ದುರುಪಯೋಗ ಪಡಿಸಿಕೊಳ್ಳುವುದು ಅಥವಾ ಸ್ವಂತ ಪ್ರಯೋಜನಕ್ಕಾಗಿ ನುಂಗಿ ಹಾಕುವುದರಿಂದಲೇ ಖಾಸಗಿ ವಲಯದಲ್ಲಿ ಬಹಳಷ್ಟು ಘಟಕಗಳು ಮುಚ್ಚಿ ಕಾರ್ಮಿಕರನ್ನು ಬೀದಿಪಾಲು ಮಾಡುತ್ತಿವೆ ಎಂಬುದು ಅಧಿಕೃತ ಅಂಕಿ- ಅಂಶಗಳಿಂದಲೇ ಸಾಬೀತಾಗಿರುವ ಸಂಗತಿ. ಕಾರ್ಖಾನೆಗಳು ರೋಗಗ್ರಸ್ತವಾದರೂ ಅವುಗಳ ಮಾಲಕರ ಸಂಪತ್ತು ಹೆಚ್ಚುತ್ತಾ ಹೋಗುವುದೇ ಇದಕ್ಕೆ ಪ್ರತ್ಯಕ್ಷ ಸಾಕ್ಷಿ. ಸಾರ್ವಜನಿಕ ವಲಯದ ರೋಗಗ್ರಸ್ತ ಉದ್ದಿಮೆಗಳ ಪುನರುಜ್ಜೀವನಕ್ಕೆ ಹಣವಿಲ್ಲವೆನ್ನುವ ಸರಕಾರ ಖಾಸಗಿ ವಲಯದಲ್ಲಿ ಉದ್ದಿಮೆಗಳಲ್ಲಿನ ಹಣನುಂಗಿ ಬ್ಯಾಂಕು ಮತ್ತಿತರ ಹಣಕಾಸು ಸಂಸ್ಥೆಗಳಿಗೆ ದೊಡ್ಡ ಬಂಡವಾಳಗಾರರ ಕಂಪನಿಗಳು ಕೊಡಬೇಕಾದ ಸುಮಾರು 30 ಸಾವಿರ ಕೋಟಿ ರೂ.ಗಳ ಸಾಲವನ್ನು ವಸೂಲಿ ಮಾಡಲು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ.

■ ರೋಗಗ್ರಸ್ತ ಕೈಗಾರಿಕೆಗಳನ್ನು ಉಳಿಸುವ ಬಗ್ಗೆ ಪರಿಶೀಲಿಸಲೆಂದು ಇರುವ ಮೇಲೆ ಹೇಳಿದ ಬಿಐಎಫ್‌ಆರ್ ಕೇವಲ ಕಾನೂನಿನ ಅಂಶಗಳ ಬಗ್ಗೆಯೇ ಗಮನ ಕೇಂದ್ರೀಕರಿಸುವ ಸಂಸ್ಥೆಯಾಗಿ ಬಿಟ್ಟಿದೆ. ಈ ಮಂಡಳಿಯ ಪರಿಶೀಲನೆಗೆ ಒಪ್ಪಿಸಲ್ಪಟ್ಟ ಸಾವಿರಾರು ಪ್ರಕರಣಗಳಲ್ಲಿ ಹೆಚ್ಚಿನವುಗಳು ಮುಚ್ಚಿ ಹೋಗಬೇಕಾಗುತ್ತಿದೆ. ಈ ಉದ್ದಿಮೆಗಳ ಕಾರ್ಮಿಕ ಸಂಘಗಳು ಈ ಮಂಡಳಿಯ ಮುಂದೆ ತಮ್ಮ ಪ್ರಸ್ತಾವಗಳನ್ನು, ಅಭಿಪ್ರಾಯಗಳನ್ನಿಡಲು ಸೂಕ್ತ ಅವಕಾಶ ಕಲ್ಪಿಸಲಾಗುತ್ತಿಲ್ಲ. ಮುಂಬೈ, ಚೆನ್ನೈ, ಕಲ್ಕತ್ತ ಮತ್ತಿತರ ಕಡೆಗಳಲ್ಲಿ ಬಿಐಎಫ್‌ಐಆರ್ ಪೀಠಗಳನ್ನು ಸ್ಥಾಪಿಸಬೇಕೆಂಬ ಕಾರ್ಮಿಕ ಸಂಘಗಳ ಬೇಡಿಕೆಯನ್ನು ನಿರ್ಲಕ್ಷಿಸಲಾಗಿದೆ.



3 ಒಟ್ಟಾರೆಯಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಗೊಳಿಸಬೇಕು. ಹಾಗೂ ಬಡತನದ ರೇಖೆಯ ಕೆಳಗಿರುವ ಜನರಿಗೆ ಸಹಾಯಧನದ ಬೆಲೆಗಳ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು.

ನರಸಿಂಹ ರಾಯರ ಸರಕಾರದ ಉದಾರೀಕರಣದ ಕಾರ್ಯಕ್ರಮ ದೇಶದ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಪೂರಾ ಹಾಳುಗೆಡವಿದವು. ಬಡವರಿಗೆ ಈ ಸಾರ್ವಜನಿಕ ವಿತರಣಾ ವ್ಯವಸ್ಥೆ ನಿಲುಕದಂತೆ ಅದು ಮಾಡಿತು. ಸಂಯುಕ್ತ ರಂಗ ಸರಕಾರ ಬಂದ ಮೇಲೆ ಸುಧಾರಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಜಾರಿಗೆ ತರುವ ಅರೆಬರೆ ಪ್ರಯತ್ನವನ್ನು ಮಾಡಿದೆ.

ಈ ಸುಧಾರಿತ ವಿತರಣಾ ಪದ್ಧತಿಯಲ್ಲಿ ಎರಡು ಅಂಶಗಳಿವೆ. ಮೊದಲನೇ ಅಂಶ ವೆಂದರೆ ಗೋಧಿಯ ಬೆಲೆಯನ್ನು ಶೇ 12 ರಷ್ಟು ಮತ್ತು ಉತ್ತಮ ಅಕ್ಕಿಯ ಬೆಲೆಯನ್ನು ಶೇ 5.3 ರಿಂದ ಶೇ 15.7 ರಷ್ಟು ಹೆಚ್ಚಿಸುವುದು. ಎರಡನೆ ಯದ್ದು ಪ್ರತಿ ಕುಟುಂಬಕ್ಕೆ ತಿಂಗಳಿಗೆ 10 ಕೆ.ಜಿ. ಆಹಾರ ಧಾನ್ಯವನ್ನು, ಗೋಧಿಯನ್ನು ಕೆ.ಜಿ.ಗೆ ಎರಡೂವರೆ ರೂಪಾಯಿಯಂತೆ ಅಕ್ಕಿಯನ್ನು ಕೆ.ಜಿ. ಗೆ ಮೂರುವರೆ ರೂಪಾಯಿಯಂತೆ ನೀಡುವುದು. ಎರಡನೆಯದು ಬಡತನದ ರೇಖೆಗಿಂತ ಕೆಳಗಿರುವವರಿಗೆ.

ಈ ಎರಡನೇ ಅಂಶ ದಿಂದಾಗಿ 32 ಕೋಟಿ ರೂಪಾಯಿಗಳಷ್ಟು ಸಹಾಯಧನವನ್ನು ಕೊಡಬೇಕಾಗುತ್ತದೆ. ಇದು ಸರಕಾರದ ಹಣಕಾಸು ಕೊರತೆಯನ್ನು ಹೆಚ್ಚಿಸುತ್ತದೆ ಎಂಬ ದೊಡ್ಡ ಪುಕಾರೇ ಇದೆ. ಬೇರೆ ದೇಶಗಳಿಗೆ ಹೋಲಿಸಿದರೆ ತೆರಿಗೆ/ ಒಟ್ಟುತ್ಪಾದನೆಯ ಅನುಪಾತ ನಮ್ಮ ದೇಶದಲ್ಲಿ ಕಡಿಮೆ ಇದೆ. ಈ ಹಣಕಾಸು ಕೊರತೆ ನೀಗಿಸಲು ಶ್ರೀಮಂತರ ಮೇಲೆ ಹೆಚ್ಚಿಗೆ ತೆರಿಗೆ ಹಾಕಬಹುದು.

ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಮೂರು ಉದ್ದೇಶಗಳಿವೆ. ಮೊದಲನೆಯದು ಬೆಲೆಗಳನ್ನು ಸ್ಥಿರಗೊಳಿಸುವುದು, ಎರಡನೆಯದು ಬಡವರಿಗೆ ಅತ್ಯವಶ್ಯ ಸಾಮಾಗ್ರಿಗಳು ದೊರೆಯುವಂತೆ ಮಾಡುವುದು ಮತ್ತು ಮೂರನೆಯದು ಕೃಷಿ ಉತ್ಪಾದನೆಗೆ ಬೆಂಬಲ ನೀಡುವುದು.


ಈಗ ಈ ಕಟು ವಾಸ್ತವವನ್ನು ನೋಡಿ.

■ ಒಬ್ಬ ಸಾಮಾನ್ಯ ಮನುಷ್ಯನಿಗೆ ದಿನವೊಂದಕ್ಕೆ 2400 ಕ್ಯಾಲರಿಗಳಷ್ಟು ಶಕ್ತಿ ಬೇಕು. ಅಂದರೆ ಇಷ್ಟು ಕಿಲೋ ಕ್ಯಾಲರಿ ಶಕ್ತಿ ನೀಡುವ ಆಹಾರವನ್ನು ಆತ ಸೇವಿಸಬೇಕು.

■ ಭಾರತದ ಶೇ 30 ರಷ್ಟು ಅತಿ ಬಡವರು ದಿನವೊಂದಕ್ಕೆ ಸೇವಿಸುವ ಆಹಾರ ಎಷ್ಟು ಗೊತ್ತೆ? ಬರೀ 1599 ಕಿಲೋ ಕ್ಯಾಲರಿಗಳನ್ನು ನೀಡುವಷ್ಟು. ದೇಶದ ಶೇ 60 ರಷ್ಟು ಮಕ್ಕಳು ಅಪೌಷ್ಟಿಕತೆಯಿಂದಾಗಿ ನರಳುತ್ತಾರೆ. ಬಹುತೇಕ ರಾಜ್ಯಗಳಲ್ಲಿ ಸರಕಾರ ನೀಡುವ ಸಹಾಯ ಧನ(ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ)ದ ಪ್ರಮಾಣ ತಿಂಗಳಿಗೆ ಒಬ್ಬರ ಎರಡು ಅಥವಾ ಮೂರು ದಿನಗಳ ಆದಾಯ ದಷ್ಟು. ಅಂದರೆ ಉಳಿದ ದಿನಗಳಲ್ಲಿ ಖಂಡಿತ ವಾಗಿ ಉಪವಾಸ. ಇದಲ್ಲದೆ ಸರಕಾರ ಖರ್ಚು ಮಾಡುವ ಪ್ರತಿ ಒಂದು ರೂಪಾಯಿಗೆ ಬರೀ 22 ಪೈಸೆಯಷ್ಟು ಮಾತ್ರ ಬಡವರಿಗೆ ಸೇರುವುದು.

ಆದ್ದರಿಂದಲೇ ಸಾರ್ವಜನಿಕ ವಿತರಣಾ ವ್ಯವಸ್ಥೆ ಇನ್ನೂ ಅಸಮರ್ಪಕ ಎನ್ನುವುದು. ಇದನ್ನು ಇನ್ನೂ ಬಲಪಡಿಸಬೇಕು. ಮತ್ತು ಹೆಚ್ಚು ಜನಸಮೂಹಗಳಿಗೆ ವಿಸ್ತರಿಸಬೇಕು. ಈ ವ್ಯವಸ್ಥೆ ಮೂರು ಉದ್ದೇಶಗಳಿಗೆ ಸರಿಯಾಗಿರುವಂತೆ ಮಾಡಬೇಕು. ಇದು ಕೂಡಲೇ ಮಾಡಬೇಕಾದಂತಹದ್ದು.

ಸಾರ್ವಜನಿಕ ವಿತರಣೆ ಹೆಚ್ಚು ಪರಿಣಾಮಕಾರಿಯಾಗಬೇಕು. ○



4 ವಿಮಾ ವಲಯವನ್ನು ತೆರೆಯುವುದನ್ನು ನಿಲ್ಲಿಸಬೇಕು ಹಾಗೂ ವಿಮಾ ನಿಯಂತ್ರಣ ಪ್ರಾಧಿಕಾರ ಮಸೂದೆಯನ್ನು ಹಿಂದಕ್ಕೆ ಪಡೆದುಕೊಳ್ಳಬೇಕು.



ಅದಕ್ಷತೆಯನ್ನು ಹೋಗಲಾಡಿಸಲು ವಿಮಾ ಉದ್ದಿಮೆಯನ್ನು ಖಾಸಗೀಕರಣಕ್ಕೆ ತೆರೆದು ಸ್ಪರ್ಧೆಗೆ ಅವಕಾಶ ಮಾಡಿಕೊಡಬೇಕೆಂದು ಸರಕಾರ ವಾದ ಮಾಡುತ್ತಿದೆ. ಈ ವಾದದಲ್ಲಿ ಎಷ್ಟು ಹುರುಳಿದೆ?

ಜೀವವಿಮಾ ಉದ್ದಿಮೆಯು 1956 ಕ್ಕೆ ಮುಂಚೆ ದೇಶಿ ಮತ್ತು ವಿದೇಶೀ ಖಾಸಗಿ ಒಡೆತನದಲ್ಲಿತ್ತು. ಈ ಖಾಸಗಿ ಕಂಪನಿಗಳು ಸಾಮಾನ್ಯ ಪಾಲಿಸಿದಾರರನ್ನು ದೋಚುತ್ತಿದ್ದವು. ಪಾಲಿಸಿದಾರರಿಗೆ ಸಲ್ಲಬೇಕಾದ ವಿಮಾ ಹಣವನ್ನು ಒಂದಲ್ಲಒಂದು ಕಾರಣ ನೀಡಿ ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದವು. ಈ ರೀತಿಯಲ್ಲಿ ಬಡ ವಿಧವೆಯರ ಹಣವನ್ನು ಸುಲಿಗೆ ಮಾಡುತ್ತಿದ್ದವು ಎಂಬ ಮಾತೇ ಆಗ ಜಾರಿಗೆ ಬಂದಿತ್ತು. ಖಾಸಗೀ ಕಂಪನಿಗಳ ಒಡೆಯರು ತಮ್ಮ ವೈಯಕ್ತಿಕ ಐಷಾರಾಮೀ ಜೀವನಕ್ಕಾಗಿ ಒಟ್ಟು ಪ್ರೀಮಿಯಂ ಆದಾಯದ ಶೇಕಡಾ 16 ರಷ್ಟನ್ನು ಖರ್ಚು ಮಾಡುತ್ತಿದ್ದರು. ಖಾಸಗೀ ವಿಮಾ ಕಂಪನಿಗಳ ಇಂತಹ ದುರ್ವ್ಯವಹಾರಗಳ ವಿರುದ್ಧ ವ್ಯಾಪಕ ಜನಾಭಿಪ್ರಾಯ ಹಾಗೂ ನೌಕರರ ಸಂಘಟನೆಯ ಒತ್ತಾಯದಿಂದ ಅಂತಿಮವಾಗಿ 1956 ರಲ್ಲಿ ಜೀವ ವಿಮೆಯನ್ನೂ, 1973 ರಲ್ಲಿ ಸಾಮಾನ್ಯ ವಿಮಾ ಉದ್ದಿಮೆಯನ್ನು ರಾಷ್ಟ್ರೀಕರಣ ಗೊಳಿಸಲಾಯಿತು.

ಈ ರಾಷ್ಟ್ರೀಕೃತ ವಿಮಾ ನಿಗಮಗಳು ತಮ್ಮ ಕರ್ತವ್ಯ ನಿರ್ವಹಿಸಿ ತಮ್ಮ ಸ್ಥಾಪನೆಯ ಉದ್ದೇಶವನ್ನು ಬಹಳಮಟ್ಟಿಗೆ ಈಡೇರಿಸಿವೆ.

1956 ರಲ್ಲಿ ಸರಕಾರ ಹೂಡಿದ್ದ ಕೇವಲ ಐದು ಕೋಟಿ ಬಂಡವಾಳಕ್ಕೆ ಈಗಾಗಲೇ 660 ಕೋಟಿಗೂ ಮೀರಿದ ಪ್ರತಿಫಲವನ್ನು ಸರಕಾರಕ್ಕೆ ಹಿಂತಿರುಗಿಸಲಾಗಿದೆ. 1996 ಮಾರ್ಚ್ ಹೊತ್ತಿಗೆ ಕೇವಲ ಒಂದು ವರ್ಷಕ್ಕೆ 160 ಕೋಟಿ ರೂಪಾಯಿಗಳ ಡಿವಿಡೆಂಡನ್ನು ಸರಕಾರಕ್ಕೆ ಕೊಡುವುದರೊಂದಿಗೆ 3200% ನಷ್ಟು ಲಾಭವನ್ನು ಗಳಿಸಿಕೊಟ್ಟಿದೆ. ಇವೆಲ್ಲಕ್ಕೂ ಮುಖ್ಯವಾದ ವಿಚಾರವೆಂದರೆ, ಈಗಾಗಲೇ ಮುಗಿದಿರುವ ಎಂಟು ಪಂಚವಾರ್ಷಿಕ ಯೋಜನೆಗಳ ಅನುಷ್ಠಾನಕ್ಕಾಗಿ 56000 ಕೋಟಿ ರೂಪಾಯಿಗಳ ಹಣವನ್ನು ಹೂಡಿದೆ. ಕೆರೆಯ ನೀರನ್ನು ಕೆರೆಗೆ ಚೆಲ್ಲಿದಂತೆ ಜನ ಸಾಮಾನ್ಯರಿಂದ ಸಂಗ್ರಹಿಸುವ ಅಪಾರ ಮೊತ್ತದ ಹಣವನ್ನು ಅವರ ಏಳಿಗೆಗಾಗಿಯೇ ವಿನಿಯೋಗಿಸಲಾಗುತ್ತಿದೆ. ವಿದ್ಯುಚ್ಛಕ್ತಿ ಉತ್ಪಾದನೆ, ನೀರು ಪೂರೈಕೆ, ನೀರಾವರಿ, ರಸ್ತೆ ನಿರ್ಮಾಣ, ರಸ್ತೆ ಸಾರಿಗೆ, ವಸತಿ ಸೌಲಭ್ಯ ಮುಂತಾದ ಜನೋಪಯೋಗಿ ಯೋಜನೆಗಳಲ್ಲಿ ಅತಿ ಕಡಿಮೆ ಬಡ್ಡಿ ದರದಲ್ಲಿ ಬಂಡವಾಳವನ್ನು ಒದಗಿಸಿದೆ. ಈ ಮೂಲಕ ದೇಶದ ಸ್ವಾವಲಂಬನೆ, ಸಾರ್ವಭೌಮತ್ವ ಮತ್ತು ಸ್ವಾತಂತ್ರ್ಯವನ್ನು ಕಾಪಾಡುವಲ್ಲಿ ಅತ್ಯುತ್ತಮ ಸೇವೆಯನ್ನು ಎರಡೂ ನಿಗಮಗಳು ಸಲ್ಲಿಸಿವೆ.

ಹೀಗಿದ್ದಾಗ್ಯೂ, ಕಾಮಧೇನುವಿನಂತೆ ಕಾರ್ಯನಿರ್ವಹಿಸುತ್ತಿರುವ ಜೀವ ವಿಮಾ ಉದ್ದಿಮೆಯನ್ನು ಸರಕಾರ ಖಾಸಗೀ ತೋಳಗಳ ತೆಕ್ಕೆಗೆ ತಳ್ಳಲು ಬಯಸುತ್ತಿರುವುದಾದರೂ ಏತಕ್ಕೆ?

ಮುಂದಿನ ಐದು ವರ್ಷಗಳಲ್ಲಿ ನಮ್ಮ ದೇಶಾದ್ಯಂತ ಅವಶ್ಯವಾದ ಮೂಲ ಸೌಕರ್ಯಗಳನ್ನು ಒದಗಿಸಲು ಸುಮಾರು 7,00,000 ಕೋಟಿ(ಏಳು ಲಕ್ಷ ಕೋಟಿ) ರೂಪಾಯಿಗಳ ಬಂಡವಾಳ ಬೇಕಾಗುತ್ತದೆ. ಅಷ್ಟು ದೊಡ್ಡ ಮೊತ್ತ ನಮ್ಮ ದೇಶದಲ್ಲಿ ದೊರಕುವುದಿಲ್ಲ. ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು ಅಷ್ಟು ದೊಡ್ಡ ಮೊತ್ತವನ್ನು ಪೂರೈಸಲು ಸಿದ್ದರಿದ್ದರಂತೆ. ಆದರೆ ಪ್ರತಿ ಯಾಗಿ ಈ ವಿದೇಶಿ ಕಂಪನಿಗಳಿಗೆ ಭಾರತದ ವಿಮಾ ಉದ್ದಿಮೆ ನಡೆಸಲು ಅವಕಾಶ ಕೊಡಬೇಕಂತೆ. ಹಾಗೆ ಮಾಡಿದರೆ ದೇಶ ಉದ್ಧಾರವಾಗುತ್ತದೆಂದು ಸರಕಾರ ಬೊಬ್ಬೆ ಇಡುತ್ತಿದೆ. ಆದರೆ ವಾಸ್ತವತೆ ಏನೆಂದರೆ ಈ ಎರಡು ಸಂಸ್ಥೆಗಳು ಇಂದು ಇರುವ ಪರಿಸ್ಥಿತಿಯಲ್ಲೇ ಮುಂದಿನ ಐದು ವರ್ಷಗಳ ಅವಧಿಯಲ್ಲಿ ಏನಿಲ್ಲೆಂದರೂ ಒಂದು ಲಕ್ಷ ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಿ ಕೊಡುವ ಸಾಮರ್ಥ್ಯ ಹೊಂದಿವೆ. ಸ್ವಾಯತ್ತತೆ ಯನ್ನು ನೀಡಿದ್ದೇ ಆದರೆ, ಇನ್ನೂ ಹೆಚ್ಚಿನ ಬಂಡವಾಳವನ್ನು ಒದಗಿಸಲು ಸಾಧ್ಯವಾಗುತ್ತದೆ. ನಿಜಸ್ಥಿತಿ ಹೀಗಿರುವಾಗ ಬಹುರಾಷ್ಟ್ರೀಯ ಕಂಪನಿ ಗಳು ಹಾಕುವ ದೇಶ ವಿರೋಧಿ ಶರತ್ತುಗಳನ್ನು ಒಪ್ಪಿಕೊಂಡು ಅವರ ಬಲೆ ಯಲ್ಲಿ ಬೀಳುವ ಅವಶ್ಯಕತೆ ಏನಿದೆ?

ಇನ್ನು ದಕ್ಷತೆಯ ಪ್ರಶ್ನೆ - ಖಾಸಗಿ ವಿದೇಶಿ ಮತ್ತು ದೇಶೀಯ ಬ್ಯಾಂಕುಗಳು ಇಂದು ನಮ್ಮ ದೇಶದ ಜನರ ಸಾವಿರಾರು ಕೋಟಿ ರೂಪಾಯಿಗಳನ್ನು ತಿಂದುಹಾಕಿ ವಂಚಿಸುತ್ತಿರುವ ಕಟು ಸತ್ಯದ ಸಂಗತಿ ಎಲ್ಲರಿಗೂ ತಿಳಿದದ್ದೇ. ಇತ್ತೀಚಿನ ಉದಾಹರಣೆ-ಸಿ.ಆರ್.ಭನ್ಸಾಲಿ ಬಂಡವಾಳ ಕಂಪನಿ. ಈ ಕಂಪನಿ 1200 ಕೋಟಿ ರೂಪಾಯಿಗಳಷ್ಟು ನಮ್ಮ ದೇಶದ ಜನ ಸಾಮಾನ್ಯರ ಮತ್ತು ಮಧ್ಯಮ ವರ್ಗದವರ ಹಣವನ್ನು ದೋಚಿ, ಇಂದು ಮುಚ್ಚಿಹೋಗಿದೆ. ವಿಮಾ ವಲಯವನ್ನು ಖಾಸಗಿಯವರಿಗೆ ತೆರೆದರೆ ತಾನೂ ಒಂದು ವಿಮಾ ಕಂಪನಿ ಆರಂಭಿಸಲು ಈ ಕಂಪನಿ ತಯಾರಿ ಮಾಡಿಕೊಂಡಿತ್ತಂತೆ. ವಿಮಾ ಉದ್ದಿಮೆಯನ್ನು ಖಾಸಗಿಯವರಿಗೆ ತೆರೆದರೆ ವಾಸ್ತವವಾಗಿ ಆಗುವುದೂ ಹೀಗೆಯೇ.

ವಿಮಾ ಉದ್ದಿಮೆಗಳಲ್ಲಿ ಖಾಸಗಿ ಯವರು ಅವ್ಯವಹಾರ ನಡೆಸದಂತೆ ಒಂದು ವಿಮಾ ನಿಯಂತ್ರಣ ಪ್ರಾಧಿಕಾರವನ್ನು ರಚಿಸುವುದಾಗಿ ಸರಕಾರ ಒಂದು ಮಸೂದೆ ಯನ್ನು ಸಂಸತ್ತಿನ ಮುಂದೆ ತಂದಿದೆ. ಆದರೆ ಇದೇ ರೀತಿ ನಿಯಂತ್ರಣ ಅಧಿಕಾರ ಹೊಂದಿ ರುವ ಸೆಬಿ(SEBI) ಮತ್ತು ಆರ್‌ಬಿಐ (RBI) ಇದ್ದರೂ ಖಾಸಗಿ ಬ್ಯಾಂಕು ಗಳು, ಈ ಭನ್ಸಾಲಿಗಳು ಜನರನ್ನು ವಂಚಿಸುತ್ತಿರುವಾಗ ಏನು ಮಾಡಿವೆ? ಮತ್ತು ಮಾಡುತ್ತವೆ?

ಈ ಎಲ್ಲಾ ಕಾರಣಗಳಿಂದ ವಿಮಾ ಉದ್ದಿಮೆಯನ್ನು ಖಾಸಗಿಯವರಿಗೆ ವಹಿಸುವ ಸರಕಾರದ ಯೋಚನೆ ದೇಶದ ಜನಕ್ಕೆ ಮತ್ತು ಸ್ವಾವಲಂಬನೆಗೆ ಮಾರಕವಾಗುತ್ತದೆ. ಸರ ಕಾರದ ಕ್ರಮವನ್ನು ಎಷ್ಟು ಬೆಲೆ ತೆತ್ತಾದರೂ ಸರಿ ನಾವು ವಿರೋಧಿಸಲೇಬೇಕು. ○

5 ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ತೆಗೆದಿರಿಸುವ ಹಣದ ಪ್ರಮಾಣವನ್ನು ಹೆಚ್ಚಿಸಬೇಕು. ಕೃಷಿ ಕಾರ್ಮಿಕ ಮಸೂದೆಯನ್ನು ಅಂಗೀಕರಿಸಬೇಕು.



ಭಾರತ ದೇಶದ ಬೆನ್ನೆಲುಬೇ ಕೃಷಿ. ಇಂದಿಗೂ ಶೇ 60 ಕ್ಕಿಂತ ಹೆಚ್ಚು ಜನ ಕೃಷಿಯನ್ನು ಅವಲಂಬಿಸಿದ್ದಾರೆ. ಆದ್ದರಿಂದ ದೇಶದ ಅಭಿವೃದ್ಧಿ ಸಾಧಿಸುವುದೆಂದರೆ ಈ ಕೃಷಿ ವಲಯವನ್ನು ಅಭಿವೃದ್ಧಿ ಪಡಿಸುವುದು. ಹೀಗಿರುವಾಗ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಹೆಚ್ಚಿನ ಹಣ ತೆಗೆದಿರಿಸುವ ಅವಶ್ಯಕತೆ ಇದೆ.

ಎಂಟನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಆಹಾರ ಧಾನ್ಯಗಳ ಮತ್ತು ಕೃಷಿ ಉತ್ಪಾದನಾ ದರ ಜನಸಂಖ್ಯೆ ಬೆಳವಣಿಗೆ ದರಕ್ಕಿಂತ ಕಡಿಮೆ ಯಾಯಿತು. ಈಗಿನ ಸರಕಾರ ಹಿಂದಿನ ಸರಕಾರದ ಹಣಕಾಸು ನೀತಿಗಳನ್ನೇ ಅನುಸರಿ ದ್ದರಿಂದ 'ಸಮಾನ ಕನಿಷ್ಠ ಕಾರ್ಯಕ್ರಮವನ್ನು' ಸರಿಯಾಗಿ ಜಾರಿಗೊಳಿಸುತ್ತಿಲ್ಲ. ಸಂಯುಕ್ತ ರಂಗ ಸರಕಾರ ಸಮಾನ ಕನಿಷ್ಠ ಕಾರ್ಯಕ್ರಮದ ಪ್ರಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಹೆಚ್ಚಿನ ಹಣ ತೆಗೆದಿರಿಸಬೇಕಾಗಿತ್ತು. ಇದಕ್ಕೆ ವಿರುದ್ಧವಾಗಿ ಸರಕಾರ ಈ ಹಣವನ್ನು ಇನ್ನೂ ಕಡಿಮೆ ಮಾಡಿತು. ಅದೇ ಸಮಯದಲ್ಲಿ ಶ್ರೀಮಂತರಿಗೆ ಅಪಾರ ತೆರಿಗೆ ಕಡಿತದ ರಸದೂಟ ನೀಡಲಾಯಿತು. ಈ ಕಡಿತಗಳು ಎಂತಹ ಪ್ರಮಾಣದ್ದೆಂದರೆ ಕನಿಷ್ಠ 12500 ಕೋಟಿ ರೂಪಾಯಿಗಳಷ್ಟು. ಸುಮಾರು 6000 ಕೋಟಿ ರೂಪಾಯಿಗಳ ಆದಾಯ ತೆರಿಗೆ ರಿಯಾಯಿತಿ 4000 ಕೋಟಿ ರೂಪಾಯಿಗಳ ಕಂಪನಿ ತೆರಿಗೆಗಳ ರಿಯಾಯಿತಿ ಮತ್ತು 2500 ಕೋಟಿ ರೂಪಾಯಿಗಳ ಆಮದು ಸುಂಕ ಕಡಿತ) ಒಟ್ಟು ಮೊತ್ತ ಇನ್ನೂ ಹೆಚ್ಚಾಗ ಬಹುದು. ಸರಕಾರ ಕೃಷಿ ಮೇಲೆ ಅವಲಂಬಿಸಿರುವ 65 ಕೋಟಿ ಜನರ ಮೇಲೆ ಒಟ್ಟಾಗಿ ಮಾಡುವ ಖರ್ಚಿಗಿಂತ ಇದು ಹೆಚ್ಚು.

ಇನ್ನು ರಚನಾತ್ಮಕ ಹೊಂದಾಣಿಕೆ ಕ್ರಮಗಳು. ಈ ರಚನಾತ್ಮಕ ಹೊಂದಾಣಿಕೆ ಕ್ರಮಗಳಿಂದಾಗಿ ರಫ್ತು ಅಭಿಮುಖ ಕೃಷಿಯನ್ನು ಪ್ರೋತ್ಸಾಹಿಸಲಾಗುತ್ತಿದೆ. ದೇಶದ ಜನಕ್ಕೆ ಬೇಕಾಗುವ ದವಸಧಾನ್ಯ ಬೆಳೆವ ಬದಲು ವಿದೇಶಗಳ ಶ್ರೀಮಂತರಿಗೆ ಬೇಕಾಗುವ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಶ್ರೀಮಂತರು ತೆರಿಗೆ ರಿಯಾಯಿತಿ ಪಡೆಯುತ್ತಾರೆ. ಅವರು ಹೆಚ್ಚೆಚ್ಚು ಆಮದು ಮಾಡಿಕೊಳ್ಳುತ್ತಾರೆ. ಇದರಿಂದ ವ್ಯಾಪಾರ ದಾಕಿ ಹೆಚ್ಚುತ್ತದೆ. ರೂಪಾಯಿಯ ಅಪಮೌಲ್ಯೀಕರಣವಾಗುತ್ತದೆ. ಇದು ಹಣದುಬ್ಬರ ಹೆಚ್ಚಿಸಿ ಜನಸಾಮಾನ್ಯರ ಜೀವನವನ್ನು ನರಕಮಯ ಮಾಡುತ್ತದೆ.

ಹೀಗೆ ರಚನಾತ್ಮಕ ಹೊಂದಾಣಿಕೆ ಕಾರ್ಯಕ್ರಮದಿಂದಾಗಿ ವಿದೇಶಗಳ ಶ್ರೀಮಂತರ ಅವಶ್ಯಕತೆಗಳಿಗೆ ತಕ್ಕಂತೆ ನಮ್ಮಲ್ಲಿ ಕೃಷಿಯನ್ನು ತಿರುಚಲಾಗುತ್ತಿದೆ. ನಾವು ಪ್ರಾಥಮಿಕ ವಸ್ತುಗಳನ್ನು ಪೂರೈಸುವ ದೇಶವಾಗುತ್ತಿದ್ದೇವೆ. ನಮ್ಮ ಸ್ವಾವಲಂಬನೆ ನಷ್ಟವಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಅಭಿವೃದ್ಧಿ ಹೊಂದಿದ ದೇಶಗಳು ನಮ್ಮ ದೌರ್ಬಲ್ಯದ ಲಾಭವನ್ನು ಪಡೆದು ಹೊರಡು ತ್ತವೆ. ಒಟ್ಟಾರೆಯಾಗಿ ಇದು ದೇಶದಲ್ಲಿ ಆಹಾರ ಭದ್ರತೆಯನ್ನು ಪೂರ್ತಿ ಹಾಳುಗೆಡವುದೇ ಅಲ್ಲದೆ ದೇಶದ ಕೃಷಿ ವ್ಯವಸ್ಥೆಯೇ ಹಾಳಾಗುವಂತೆ ಮಾಡುತ್ತದೆ.

ದೇಶದ ಶೇ 65 ರಷ್ಟು ಜನ ಕೃಷಿಯ ಮೇಲೆ ಅವಲಂಬಿಸಿದ್ದಾರೆ. ಇವರಲ್ಲಿ ಬಹುತೇಕರು ಕೃಷಿ ಕೂಲಿಕಾರರು. ಇವರಿಗೆ ಯಾವುದೇ ಸೌಲಭ್ಯಗಳ ಸೇವಾ ನಿಯಮಗಳಿಲ್ಲ. ಆದ್ದರಿಂದ ಇವರ ಹಿತರಕ್ಷಣೆಗೆ ಕೃಷಿ ಕಾರ್ಮಿಕರ ಮಸೂದೆಯನ್ನು ಜಾರಿಗೆ ತರುವ ಅವಶ್ಯಕತೆ ಇದೆ. ಇದು ಬಹಳ ದೀರ್ಘಕಾಲದ ಬೇಡಿಕೆ. ಆದರೆ ಯಾವ ಸರಕಾರವೂ ಇದನ್ನು ಈಡೇರಿಸುವತ್ತ ಗಮನ ಹರಿಸಲಿಲ್ಲ. ಈ ಬಗ್ಗೆ ವಚನ ನೀಡಿರುವ ಸಂಯುಕ್ತ ರಂಗವೂ ಕಾಲೆಳೆಯುತ್ತಿದೆ.

ಆದ್ದರಿಂದ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಹೆಚ್ಚಿನ ಹಣ ತೆಗೆದಿರಿಸಬೇಕು ಮತ್ತು ಕೃಷಿಕಾರ್ಮಿಕ ಮಸೂದೆಯನ್ನು ಅಂಗೀಕರಿಸಬೇಕೆಂದು ಒತ್ತಾಯಿಸುತ್ತೇವೆ. ○

6 ಸಂಸತ್ತಿನ ಮುಂದಿರುವ ಮಹಿಳಾ ಮೀಸಲಾತಿ ಮಸೂದೆಯನ್ನು ಅಂಗೀಕರಿಸಬೇಕು

ಮೇ 16 ರಂದು ಭಾರತದ ಸಂಸತ್ತಿನಲ್ಲಿ ಒಂದು ಅತ್ಯಂತ ನಾಚಿಕೆಗೇಡಿನ ದೃಶ್ಯ ಕಂಡು ಬಂತು. ಪ್ರಧಾನ ಮಂತ್ರಿಗಳು ವಿಧಾನ ಸಭೆ ಹಾಗೂ ಲೋಕಸಭೆಯಲ್ಲಿ ಮಹಿಳೆಯರಿಗೆ ಮೂರನೇ ಒಂದು ಮೀಸಲಾತಿ ಕುರಿತಂತೆ 81 ನೇ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಮಂಡಿಸದಂತೆ ತಡೆದು ಅವರದೇ ಪಕ್ಷದ ಕಾರ್ಯಾಧ್ಯಕ್ಷರ ನೇತೃತ್ವದಲ್ಲಿ ಜನತಾದಳ, ಬಿಜೆಪಿ, ಸಮತಾಪಾರ್ಟಿ, ಮತ್ತಿತರ ಪಕ್ಷಗಳ ಸದಸ್ಯರು ದೊಡ್ಡ ರಂಪವನ್ನೇ ಎಬ್ಬಿಸಿದರು.

50 ವರ್ಷಗಳ ಸ್ವಾತಂತ್ರ್ಯದ ನಂತರವೂ ಮಹಿಳೆಯರ ಪರಿಸ್ಥಿತಿಯಲ್ಲಿ ತೀವ್ರ ಬದಲಾವಣೆಯೇನೂ ಆಗಿಲ್ಲ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಜನಸಂಖ್ಯೆಯಲ್ಲಿ ಅರ್ಧದಷ್ಟಿದ್ದು ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿ, ಕುಟುಂಬದ ಆದಾಯಕ್ಕೆ ಗಮನಾರ್ಹ ಕಾಣಿಕೆ ಸಲ್ಲಿಸುತ್ತಿದ್ದರೂ ಅವರು ಸಾಮಾಜಿಕ, ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿಲ್ಲ. ಮೇ 16 ರಂದು ಸಂಸತ್ತಿನಲ್ಲಿ ಕಂಡು ಬಂದದ್ದು ಇದೇ ಪ್ರತಿಗಾಮಿ ನಿಲುವಿನ ನಾಚಿಕೆಗೇಡಿನ ಪ್ರದರ್ಶನ.

ಕಳೆದ ಎರಡು-ಮೂರು ದಶಕಗಳಲ್ಲಿ ಮಹಿಳೆಯರ ಸಮಸ್ಯೆಗಳ ಮೇಲೆ ಗಮನ ಕೇಂದ್ರೀಕರಿಸುವ ಆಂದೋಲನಗಳು ಬೆಳೆದು ಬಂದಿವೆ. ಇದರಿಂದ ಸಮಾಜದಲ್ಲಿ ತಮ್ಮ ಪಾತ್ರ ಹಾಗೂ ಸಮಾನತೆಯ ಬಗ್ಗೆ ಮಹಿಳೆಯರಲ್ಲಿ ಅರಿವು ಉಂಟಾಗಿದೆ. ಆದರೆ ಅವರ ಸ್ಥಿತಿ-ಗತಿಗಳಲ್ಲಿ ಗಮನಾರ್ಹ ಬದಲಾವಣೆಗಳೇನೂ ಆಗಲಿಲ್ಲ. ಯಾವುದೇ ಜಾತಿಯಾಗಲೀ, ಕೋಮಿರಲಿ ಮಹಿಳೆಯರು ಈಗಲೂ ನಮ್ಮ ಸಮಾಜದ ಒಂದು ಶೋಷಿತ ವಿಭಾಗವೆಂದೇ ಹೇಳಬಹುದು.



ವಿವಿಧ ರಾಜಕೀಯ ಸಂಸ್ಥೆಗಳಲ್ಲಿ ಅಂದರೆ ಲೋಕಸಭೆ, ವಿಧಾನ ಸಭೆಗಳಲ್ಲಿ ಮಹಿಳೆಯರ ಸಂಖ್ಯೆ ನಾಮ ಮಾತ್ರಕ್ಕೆ ಲೋಕಸಭೆಯ 545 ಸದಸ್ಯರಲ್ಲಿ ಮಹಿಳೆಯ ಸಂಖ್ಯೆ ಕೇವಲ 39. ಕರ್ನಾಟಕ ವಿಧಾನ ಸಭೆಯ ಸದಸ್ಯರಲ್ಲಿ ಮಹಿಳೆಯರ ಸಂಖ್ಯೆ ಕೇವಲ 7. ಮಹಿಳಾ ಆಂದೋಲನ ಬಲಿಷ್ಟವಾಗಿರುವ ಪಶ್ಚಿಮ ಬಂಗಾಲದ ಎಡರಂಗದ ಮುತುವರ್ಜಿಯಿಂದ ಪಂಚಾಯತು, ನಗರಸಭೆಗಳಲ್ಲಿ ಮೂರನೇ ಒಂದು ಮೀಸಲಾತಿ ಬರುವ ಮೊದಲು ಎಲ್ಲೆಡೆ ಪಂಚಾಯತು, ನಗರಸಭೆಗಳಲ್ಲಿಯೂ ಪರಿಸ್ಥಿತಿ ಇದೇ ಇತ್ತು.

■ ನಗರ ಸಭೆ, ಪಂಚಾಯತುಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕೆಲವಲ್ಲಿ ಇದ್ದ ಕೆಲವು ಶಂಕೆಗಳನ್ನು ನಿವಾರಿಸಿ ಮಹಿಳೆಯರೂ ಸಾಮಾಜಿಕ, ರಾಜಕೀಯ ವ್ಯವಹಾರಗಳನ್ನು ಸಮರ್ಥವಾಗಿ ನಿರ್ವಹಿಸಬಲ್ಲರು ಎಂದು ಸಾಬೀತಾಗಿದೆ.

■ ಈ ಹಿನ್ನೆಲೆಯಲ್ಲಿ ಕಳೆದ ಸಾರ್ವತ್ರಿಕ ಚುನಾವಣೆಗಳ ವೇಳೆಗೆ ಎಲ್ಲಾ ರಾಷ್ಟ್ರೀಯ ರಾಜಕೀಯ ಪಕ್ಷಗಳು ತಮ್ಮ ಪ್ರಣಾಳಿಕೆಗಳಲ್ಲಿ ಮೂರನೇ ಒಂದು ಮೀಸಲಾತಿಯ ವಚನ ನೀಡಿದವು.

■ ಸಂಯುಕ್ತ ರಂಗದ 'ಸಮಾನ ಕನಿಷ್ಠ ಕಾರ್ಯಕ್ರಮ'ವೂ ಈ ಬಗ್ಗೆ ಭರವಸೆ ನೀಡಿತು.

■ ಈ ಪ್ರಕಾರ ಸೆಪ್ಟೆಂಬರ್ 12, 1996 ರಂದು ಸಂವಿಧಾನದ 81 ನೇ ತಿದ್ದುಪಡಿ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಲಾಯಿತು. ಆದರೆ ಕಾಂಗ್ರೆಸ್, ಜನತಾದಳ ಹಾಗೂ ಬಿಜೆಪಿ ಪಕ್ಷಗಳ ನಿರ್ಲಕ್ಷ್ಯದಿಂದಾಗಿ ಇದು ಅಂಗೀಕಾರವಾಗಲಿಲ್ಲ. ಸಂವಿಧಾನ ತಿದ್ದುಪಡಿ ಮಸೂದೆಗೆ ಮೂರನೇ ಎರಡು ಬಹುಮತ ಅಗತ್ಯ ಎಂದು ಗೊತ್ತಿದ್ದರೂ ಈ ಪಕ್ಷಗಳು ತಮ್ಮ ಸದಸ್ಯರು ಸದನದಲ್ಲಿ ಹಾಜರಿರುವಂತೆ ಗಮನ ಹರಿಸಲಿಲ್ಲ. ಕೇವಲ ಎಡಪಕ್ಷಗಳ ಸದಸ್ಯರಷ್ಟೇ ಪೂರ್ಣ ಸಂಖ್ಯೆಯಲ್ಲಿ ಹಾಜರಿದ್ದರು.

■ ಈ ವಚನಭಂಗ, ವಿಶ್ವಾಸದ್ರೋಹ ಉದ್ದೇಶಪೂರ್ವಕ ವಾಗಿತ್ತು. ದಾರಿ ತಪ್ಪಿಸುವ ತಂತ್ರಗಳನ್ನು ಬಳಸಲಾಯಿತು. ಬಿಜೆಪಿ ಸದಸ್ಯೆಯೊಬ್ಬರು ಒ.ಬಿ.ಸಿ. ಕೋಟಾದ ಪ್ರಶ್ನೆಯೆತ್ತಿದರು. ಮಸೂದೆಯನ್ನು ಜಂಟಿ ಸಲಹಾ ಸಮಿತಿಗೆ ಒಪ್ಪಿಸಲಾಯಿತು.

■ ಹಿರಿಯ ಸಂಸತ್ ಸದಸ್ಯೆ ಗೀತಾ ಮುಖರ್ಜಿಯವರ ನೇತೃತ್ವದಲ್ಲಿ ಈ ಸಮಿತಿ ದೇಶದಲೆಲ್ಲಾ ಸಂಚರಿಸಿ ಸಿದ್ಧ ಪಡಿಸಿದ ಶಿಫಾರಸುಗಳೊಡನೆ ಕಳೆದ ಬಜೆಟ್ ಅಧಿವೇಶನದ ಕೊನೆಯ ದಿನ ಅದನ್ನು ಲೋಕ ಸಭೆಯಲ್ಲಿ ಮತ್ತೆ ಮಂಡಿಸಲಾಯಿತು. ಆಗಲೇ ಮೇಲೆ ಹೇಳಿದಂತೆ ಜನತಾದಳ, ಬಿಜೆಪಿ, ಸಮತಾ ಪಾರ್ಟಿ, ಮತ್ತಿತರ ಪಕ್ಷಗಳ ಸದಸ್ಯರು ರಂಪ ಎಬ್ಬಿಸಿದರು.

ಮಹಿಳೆಯರಿಗೆ ಲೋಕಸಭೆ, ವಿಧಾನ ಸಭೆಗಳಲ್ಲಿ ಮೀಸಲಾತಿ ಈಗಲೂ ಈಡೇರದ ವಚನವಾಗಿಯೇ ಉಳಿದಿದೆ. ವಿಶ್ವಾಸದ್ರೋಹ, ಸಂಕುಚಿತ ಅಧಿಕಾರ ರಾಜಕೀಯದ ಸಂಕೇತವಾಗಿ ಉಳಿದಿದೆ.

ವಾಸ್ತವವಾಗಿ ಒ.ಬಿ.ಸಿ. ತರ್ಕ ರಾಜಕೀಯದಲ್ಲಿ ಪುರುಷ ಪ್ರಾಬಲ್ಯವನ್ನು ಉಳಿಸಿಕೊಳ್ಳುವ ಹತಾಶ ಪ್ರಯತ್ನ. ಏಕೆಂದರೆ ಈಗ ಸಂಸತ್ತಿನಲ್ಲಿರುವ 160 ಒಬಿಸಿ ಸದಸ್ಯರಲ್ಲಿ ಮಹಿಳೆಯರ ಸಂಖ್ಯೆ ಕೇವಲ 4. ಒಬಿಸಿ ಕೋಟಾದ ಬಗ್ಗೆ ಮಾತನಾಡುವ ಪಕ್ಷಗಳ ಪ್ರಾಬಲ್ಯವಿರುವ ಉತ್ತರ ಪ್ರದೇಶ, ಬಿಹಾರಗಳಲ್ಲೂ ಇದೇ ಕಥೆ. ಆದ್ದರಿಂದ ಈ ತಂತ್ರವನ್ನು ಬಯಲಿಗೆಳೆಯಲೇಬೇಕಾಗಿದೆ. ಮಹಿಳಾ ಸಮಾನತೆಯೆಂಬುದು ಸಾಮಾಜಿಕ ನ್ಯಾಯದ ಒಂದು ಪ್ರಮುಖ ಅಂಶವೆನ್ನುವುದನ್ನು ಮನವರಿಕೆ ಮಾಡಬೇಕಾಗಿದೆ. ○

7 ಗುಪ್ತ ಮತದಾನದ ಮೂಲಕ ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡುವ ಶಾಸನವನ್ನು ತರಬೇಕು.

ಗುಪ್ತ ಮತದಾನದ ಮೂಲಕ ಆಯ್ಕೆಯ ಹಕ್ಕು ಒಂದು ಮೂಲಭೂತ ಪ್ರಜಾಸತ್ತಾತ್ಮಕ ಹಕ್ಕು ಎಂದು ಎಲ್ಲರಿಗೂ ಗೊತ್ತು. ಆದರೆ ನಮ್ಮ ಪ್ರಜಾಪ್ರಭುತ್ವ ಸರಕಾರ ಕಾರ್ಮಿಕರಿಗೆ ಈ ಹಕ್ಕನ್ನು ನೀಡಲು ಈಗಲೂ ಹಿಂದೆ-ಮುಂದೆ ನೋಡುತ್ತದೆ ಎಂಬುದನ್ನು ಬಹಳ ಮಂದಿ ಗಮನಿಸಿರಲಿಕ್ಕಿಲ್ಲ.

ಕೈಗಾರಿಕಾ ಸಂಬಂಧಗಳು ಹಾಗೂ ಚೌಕಾಸಿಗೆ ಸಂಬಂಧ ಪಟ್ಟಂತೆ ವಿವಿಧ ವೇದಿಕೆಗಳಲ್ಲಿ ತಮ್ಮನ್ನು ಯಾರು ಪ್ರತಿನಿಧಿಸಬೇಕು ಎಂಬುದನ್ನು ಸಂಬಂಧಪಟ್ಟ ಕಾರ್ಮಿಕರೇ ನಿರ್ಧರಿಸುವಂತಾಗಬೇಕು. ಇದನ್ನು ಗುಪ್ತ ಮತದಾನದ ಮೂಲಕ ಮಾತ್ರವೇ ನಿರ್ಧರಿಸಲು ಸಾಧ್ಯ ಎಂಬುದು ಸ್ವಯಂವೇದ್ಯ. ಆದ್ದರಿಂದಲೇ ಗುಪ್ತ ಮತದಾನದ ಮೂಲಕ ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡಬೇಕು ಎಂಬ ಬೇಡಿಕೆಯನ್ನು ಬಹಳ ಕಾಲದಿಂದ ಎತ್ತಲಾಗುತ್ತಿದೆ. ಆದರೆ ಅದನ್ನು ಸತತವಾಗಿ ನಿರಾಕರಿಸಿಕೊಂಡು ಬರಲಾಗಿದೆ.

ಕಾರ್ಮಿಕರಿಗೆ ಈ ಹಕ್ಕನ್ನು ನಿರಾಕರಿಸುವುದೆಂದರೆ ಕಾರ್ಮಿಕರನ್ನು ಗುಲಾಮರನ್ನಾಗಿ ಕಾಣುವ ಪ್ರವೃತ್ತಿಯೇ ಸರಿ. ಇದೊಂದು ಅನಾರೋಗ್ಯಕರ, ಪ್ರಜಾಪ್ರಭುತ್ವ ವಿರೋಧಿ ಹಾಗೂ ವಿನಾಶಕಾರಿ ಪ್ರವೃತ್ತಿ. ವಾಸ್ತವವಾಗಿ ಇದು ಮಾಲಕರ, ಅವರ ಪರವಾಗಿರುವ ಸರಕಾರಗಳ ಒಂದು ಪಿತೂರಿ. ಕಾರ್ಮಿಕರ ಮೇಲೆ ಅವರಿಗಿಷ್ಟವಿಲ್ಲದ ಮುಖಂಡರನ್ನು ಹೇರಿ ಅವರು ಕಾರ್ಮಿಕ ಆಂದೋಲನದಿಂದ ದೂರ ವಾಗುವಂತೆ ಮಾಡುವ ಪಿತೂರಿ ಯಿದು. ಇದು ಮಾಲಕರ ಹಿತಾ ಸಕ್ತಿಗಳನ್ನು ಈಡೇರಿಸುವ, ಇಡೀ ಕಾರ್ಮಿಕ ವರ್ಗಕ್ಕೆ ಅನಿಷ್ಟಕಾರಿಯಾದ ಪಿತೂರಿ. ಆದರೆ ಇದು ಕ್ರಮೇಣ ಉತ್ಪಾದನೆ ಮತ್ತು ಉತ್ಪಾದಕತೆಯನ್ನೂ ತಟ್ಟುತ್ತದೆ.

ಸಂಯುಕ್ತ ರಂಗ ಸರಕಾರ ಈ ಬಗ್ಗೆ ಒಂದು ಕಾನೂನು ರೂಪಿಸುವ ಸ್ಪಷ್ಟ ಭರವಸೆ ನೀಡಿತ್ತು. ಆದರೆ ಇದನ್ನು ಈಡೇರಿಸುವಲ್ಲಿ ವಿಫಲವಾಗಿದೆ.

ಈಗ ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡಲು ಅನುಸರಿಸುವ ವಿಧಾನವೆಂದರೆ ಸರಕಾರಿ ಅಧಿಕಾರಿಗಳು ಕಾಗದ ಪತ್ರಗಳ ಪರಿಶೀಲನೆ ಮಾಡಿ ನಿರ್ಧರಿಸುವುದು. ಇದರಲ್ಲಿ ಪ್ರಜಾಪ್ರಭುತ್ವ-ವಿರೋಧಿ ಕಸರತ್ತುಗಳಿಗೆ ಸಂಪೂರ್ಣ ಅವಕಾಶವಿದೆ, ಮಾಲಕರಿಗೆ, ಸರಕಾರಕ್ಕೆ ಪ್ರಯೋಜನಕಾರಿ ಯೆನಿಸುವ ಸಂಘಗಳನ್ನು ಕಾರ್ಮಿಕರ ಇಚ್ಛೆಗೆ ವಿರುದ್ಧವಾಗಿ ಅವರ ಮೇಲೆ ಹೇರಲು ಇದರಲ್ಲಿ ಬಹಳ ಅವಕಾಶಗಳಿವೆ. ಆದ್ದರಿಂದಲೇ ಗುಪ್ತ ಮತದಾನದ ಮೂಲಕ ಮಾನ್ಯತೆಯ ಈ ಬೇಡಿಕೆಯನ್ನು ಎತ್ತಲಾಗುತ್ತಿದೆ.

ಇತ್ತೀಚಿಗೆ ನಡೆದ ಭಾರತೀಯ ಕಾರ್ಮಿಕ ಸಮ್ಮೇಳನ(ಐಎಲ್‌ಸಿ)ದಲ್ಲಿ ಇಂಟಕ್ ಬಿಟ್ಟು ಬೇರೆಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ಗುಪ್ತ ಮತದಾನದ ವಿಧಾನವನ್ನು ಬಳಸಬೇಕೆಂದು ಲಿಖಿತವಾಗಿ ಹೇಳಿದ್ದವು. ಆದರೂ ಕೇಂದ್ರ ಕಾರ್ಮಿಕ ಸಚಿವಾಲಯದ ಹಿಂಜರಿಕೆ ಹಾಗೂ ಮಾಲಕರ ಸಂಘಟನೆಗಳ ಹಸ್ತಕ್ಷೇಪದಿಂದಾಗಿ ಈ ವಿಷಯವನ್ನು ದ್ವಿಪಕ್ಷೀಯ ಸಮಿತಿಗೆ ಒಪ್ಪಿಸಲಾಗಿದೆ. ಇದನ್ನೇ ನೆವ ಮಾಡಿಕೊಂಡು ಸಂಯುಕ್ತ ರಂಗ ಸರಕಾರ ಕಾಲ ಕಳೆಯುತ್ತಿದೆ. ಇದು ಸ್ಪಷ್ಟವಾದ ವಚನಭಂಗ ಮತ್ತು ವಿಶ್ವಾಸದ್ರೋಹ. ಸಂಯುಕ್ತ ರಂಗ ಸರಕಾರ ತನ್ನ ಈ ವಚನವನ್ನು ಈಡೇರಿಸಲೇ ಬೇಕು. ಪುಟ 6 ನೋಡಿ



ಹಣಕಾಸು ಒಕ್ಕೂಟ ವ್ಯವಸ್ಥೆಯತ್ತ

ಜೂನ್ 17 ರಂದು ಸಭೆ ಸೇರಿದ ಅಂತರ-ರಾಜ್ಯ ಮಂಡಳಿ ಕೇಂದ್ರ ಸರಕಾರ ತೆರಿಗೆಯಲ್ಲಿ 29% ರಷ್ಟನ್ನು ರಾಜ್ಯ ಸರಕಾರಗಳಿಗೆ ನೀಡಬೇಕೆಂದು ನಿರ್ಧರಿಸಿತು. ಈ ವರ್ಷದ ಬಜೆಟ್ ಮಂಡಿಸುವಾಗ ಹಣಕಾಸು ಮಂತ್ರಿಗಳು 'ಕೇಂದ್ರ ಹಾಗೂ ರಾಜ್ಯ ಸರಕಾರಗಳು ಹಂಚಿಕೊಳ್ಳುವ ಒಂದು ವಿಭಜಿಸ ಬಹುದಾದ ಏಕೈಕ ತೆರಿಗೆ ಸಂಗ್ರಹವನ್ನು ರಚಿಸ ಬೇಕೆಂಬ ಹತ್ತನೇ ಹಣಕಾಸು ಆಯೋಗದ ಶಿಫಾರಸ್ಸನ್ನು ಸ್ವೀಕರಿಸುವ ಪ್ರಸ್ತಾಪವನ್ನು ಮುಂದಿಡುತ್ತಿದ್ದೇನೆ' ಎಂದಿದ್ದರು. ಈ ಬಗ್ಗೆ ಅಗತ್ಯ ಸಂವಿಧಾನ ತಿದ್ದುಪಡಿ ಯೊಂದಿಗೆ ಇದು ಜಾರಿಗೆ ಬಂದರೆ ಭಾರತದಲ್ಲಿ ಹಣಕಾಸು ಒಕ್ಕೂಟದತ್ತ ಮೊದಲ ಹೆಜ್ಜೆ ಇಟ್ಟಂತಾಗುತ್ತದೆ ಎಂದು ಪರಿಣತರ ಅಭಿಪ್ರಾಯ.

ಈಗಿರುವ ಕೇಂದ್ರ-ರಾಜ್ಯ ಹಣಕಾಸು ವ್ಯವಸ್ಥೆ ಒಂದು ಶತಮಾನದಷ್ಟು ಹಳೆಯದು. ಬ್ರಿಟಿಷರ ಕಾಲದಲ್ಲಿ ಸಂಪನ್ಮೂಲ ಸಂಗ್ರಹ ಹಾಗೂ ಖರ್ಚು ವಿಪರೀತ ಕೇಂದ್ರೀಕರಣ ಗೊಂಡಿತ್ತು. ನಂತರ ಕ್ರಮೇಣ ಇದನ್ನು ಬ್ರಿಟಿಷರ ಕಾಲದಲ್ಲೇ ಆಡಳಿತ ದೃಷ್ಟಿಯಿಂದಾಗಿ ಸಡಿಲಗೊಳಿಸಿಕೊಂಡು ಬರಬೇಕಾಯಿತು. 1919ರ ಭಾರತ ಸರಕಾರದ ಕಾನೂನು ಈ ನಿಟ್ಟಿನಲ್ಲಿ ಒಂದು ಪ್ರಮುಖ ಹೆಜ್ಜೆಯಿಟ್ಟಿತು. ನಂತರ 1935 ರ ಭಾರತ ಸರಕಾರ ಕಾನೂನು ಇನ್ನೂ ಕೆಲವು ಹೆಜ್ಜೆಗಳನ್ನಿಟ್ಟಿತು. ಆದರೂ ಕೇಂದ್ರ ಹಾಗೂ ರಾಜ್ಯ ಸರಕಾರಗಳ ನಡುವಿನ ಹಣಕಾಸು ಅಧಿಕಾರದಲ್ಲಿ ಹಂಚಿಕೆ ಸಮಾನವಾಗಿರಲಿಲ್ಲ.

ಸ್ವಾತಂತ್ರ್ಯಾ ನಂತರ ಸಂವಿಧಾನ ಸಭೆ ಪರಿಣತರ ಸಮಿತಿಗಳ, ಅಧ್ಯಯನಗಳ ಅಭಿಪ್ರಾಯ ಕೇಳಿದರೂ 1935 ರ ಕಾನೂನಿನ ಅಂಶಗಳನ್ನು ಇನ್ನಷ್ಟು ಬದಲಿಸದೆ ಈ ಅಸಮಾನತೆಯನ್ನು ಹಾಗೆಯೇ ಉಳಿಸಿ ಕೊಳ್ಳಲು ನಿರ್ಧರಿಸಿತು. ದೇಶಾದ್ಯಂತ ಸಮಾನ ತೆರಿಗೆ ದರವಿರುವಂತೆ ನೋಡಿಕೊಳ್ಳಲು ಹಾಗೂ ಎಲ್ಲಾ ಪ್ರದೇಶಗಳ ಸಮತೋಲನದ ಬೆಳವಣಿಗೆಗೆ ಕೇಂದ್ರ ಸರಕಾರದಲ್ಲಿ ಉತ್ಪಾದಕ ಸಂಪನ್ಮೂಲಗಳ ಕೇಂದ್ರೀಕರಣ ಅಗತ್ಯ, ರಾಜ್ಯಗಳಿಗೆ ಸೂಕ್ತ ರೀತಿಯಲ್ಲಿ ಹಣಕಾಸನ್ನು ಒಪಗಿಸುವಂತಹ ವ್ಯವಸ್ಥೆ ಮಾಡ ಬಹುದು ಎಂದು ಆಗ ಭಾವಿಸಲಾಯಿತು. ನಂತರ ಕಾಲಕಳೆದಂತೆ ಇವುಗಳ ವಿಕೇಂದ್ರೀ ಕರಣ ಆಗುವ ಬದಲು ರಾಜ್ಯಗಳ ಅಧಿಕಾರ ವ್ಯಾಪ್ತಿಯಲ್ಲೂ ಕೇಂದ್ರ ಅತಿಕ್ರಮಣ ನಡೆಸಲು ಅವಕಾಶ ನೀಡುವ ತಿದ್ದುಪಡಿಗಳನ್ನು ತರಲಾಯಿತು.

ರಾಜ್ಯ ಸರಕಾರಗಳು ಶಿಕ್ಷಣ, ಆರೋಗ್ಯ, ಗ್ರಾಮೀಣ ಅಭಿವೃದ್ಧಿ, ಪೋಲೀಸ್ ಮುಂತಾದ ಮೂಲಭೂತ ಸೇವೆಗಳ ಮೇಲೆ ಖರ್ಚು ಮಾಡಬೇಕು. ಆದರೆ ಇವು ಯಾವುದೇ ನೇರ ಪ್ರತಿಫಲ ನೀಡುವಂತದ್ದಲ್ಲ. ಇದರಿಂದಾಗಿ ರಾಜ್ಯಗಳ ಹಣಕಾಸಿನ ಮೇಲೆ ತೀವ್ರ ಪರಿಣಾಮ ಉಂಟಾಗಲಾರಂಭಿಸಿತು.

ಕೇಂದ್ರ ಸರಕಾರ ಸಂಗ್ರಹಿಸುವ ತೆರಿಗೆಗಳಲ್ಲಿ ಹಂಚಿಕೊಳ್ಳಲಾಗದ ಕೇವಲ ಕೇಂದ್ರಕ್ಕೆ ಸೇರಿದ ಮತ್ತು ರಾಜ್ಯಗಳಿಂದ ಹಂಚಿಕೊಳ್ಳಬಹುದಾದ ಎರಡು ವಿಧಗಳಿವೆ. ಸಂವಿಧಾನ ಕನಿಷ್ಟ 5 ವರ್ಷಗಳಿಗೊಮ್ಮೆ ಯಾವುದಾದರೂ ಹಣಕಾಸು ಆಯೋಗವನ್ನು ರಚಿಸಿ, ಹಂಚಿಕೊಳ್ಳಬಹುದಾದ ತೆರಿಗೆಗಳಲ್ಲಿ ಕೇಂದ್ರ, ರಾಜ್ಯ ಸರಕಾರಗಳ ಪಾಲನ್ನು ನಿರ್ಧರಿಸ ಬೇಕೆಂದು ವಿಧಿಸಿದೆ. ಕೇಂದ್ರ ಪಟ್ಟಿ ಯಲ್ಲಿದ್ದರೂ ರಾಜ್ಯಗಳೊಡನೆ ಹಂಚಿಕೊಳ್ಳ ಬೇಕಾದ ತೆರಿಗೆಗಳ ಬಗ್ಗೆ ಸಂವಿಧಾನದ 268ನೇ ಹಾಗೂ 274 ನೇ ಕಲಮುಗಳಲ್ಲಿ ಹೇಳಲಾಗಿದೆ.

ಇದುವರೆಗೆ ಹತ್ತು ಹಣಕಾಸು ಆಯೋಗ ಗಳು ನೇಮಕಗೊಂಡಿವೆ. ಸುಮಾರಾಗಿ ಎಲ್ಲಾ ಹಣಕಾಸು ಆಯೋಗಗಳು ಹಂಚಿಕೊಳ್ಳಬಹು ದಾದ ತೆರಿಗೆ ಸಂಗ್ರಹದ ವ್ಯಾಪ್ತಿಯನ್ನು ಹೆಚ್ಚಿ ಸುವ ಅಗತ್ಯವನ್ನು ಒಪ್ಪಿಕೊಂಡಿದ್ದವು. ಸರ್ಕಾರಿಯಾ ಆಯೋಗ ಕೂಡಾ ಇದೇ ರೀತಿ ಅಭಿಪ್ರಾಯ ಪಟ್ಟಿತ್ತು. ಆದಾಯ ತೆರಿಗೆಗಳಲ್ಲಿ ವೈಯಕ್ತಿಕ ಆದಾಯ ತೆರಿಗೆ ಹಾಗೂ ಕಂಪನಿ ತೆರಿಗೆ ಎಂದು ವಿಭಜಿಸಿ ಕಂಪನಿ ತೆರಿಗೆಯನ್ನು ಹಂಚಿಕೊಳ್ಳಬೇಕಾಗಿಲ್ಲ ಎಂಬ ಅಂಶ ಸರಿಯಲ್ಲ ಎಂದೂ ಹೇಳಲಾಗಿತ್ತು. ಆದರೆ ಇತ್ತೀಚಿನವರೆಗೆ ಭಾರತ ಸರಕಾರ ಈ ಹಂಚಿಕೊಳ್ಳಬಲ್ಲ ತೆರಿಗೆ ಸಂಗ್ರಹದ ವ್ಯಾಪ್ತಿಯನ್ನು ಯಾವುದೇ ರೀತಿಯಲ್ಲಿ ವಿಸ್ತರಿಸಲು ನಿರಾಕರಿಸುತ್ತಾ ಬಂದಿತ್ತು.

ಈ ಹಿನ್ನೆಲೆಯಲ್ಲಿ ಹತ್ತನೇ ಹಣಕಾಸು ಆಯೋಗ ಕೇಂದ್ರ ಮತ್ತು ರಾಜ್ಯಗಳ ನಡುವೆ ಸಂಪನ್ಮೂಲ ಹಂಚಿಕೊಳ್ಳುವ ಪರ್ಯಾಯ ವ್ಯವಸ್ಥೆಯನ್ನು ಸೂಚಿಸಿತ್ತು. ಅದು ಹೀಗಿದೆ

1. ಕೆಲವು ನಿರ್ದಿಷ್ಟ ತೆರಿಗೆಗಳು ಹಾಗೂ ಅಧಿಕ ತೆರಿಗೆಗಳನ್ನು ಬಿಟ್ಟು ಬೇರೆಲ್ಲಾ ಕೇಂದ್ರ ತೆರಿಗೆಗಳ ಸಂಗ್ರಹದ 26% ಅನ್ನು ರಾಜ್ಯಗಳಿಗೆ ಈಗ ಆದಾಯ ತೆರಿಗೆಯಲ್ಲಿ ಮತ್ತು ಮೂಲ ಹಾಗೂ ವಿಶೇಷ ಅಬಕಾರಿ ಸುಂಕದಲ್ಲಿ ಪಡೆಯುತ್ತಿರುವ ಭಾಗದ ಬದಲಾಗಿ ಮತ್ತು ರೈಲ್ವೇ ಪ್ರಯಾಣದರಗಳ ಮೇಲಿನ ತೆರಿಗೆಯ ಬದಲಾಗಿ ಪಡೆಯುವ ಗ್ರಾಂಟ್‌ಗಳ ಬದಲಾಗಿ ವಹಿಸಿಕೊಡುವುದು.
2. ತಂಬಾಕು, ಹತ್ತಿ, ಸಕ್ಕರೆಯ ಮೇಲಿನ ಹೆಚ್ಚಿನ ಮಾರಾಟ ತೆರಿಗೆ ಮತ್ತು ಅಬಕಾರಿ ಸುಂಕದ ಬದಲು ಒಟ್ಟು ಕೇಂದ್ರೀಯ ತೆರಿಗೆ ಸಂಗ್ರಹದ 3% ವನ್ನು ಕೊಡುವುದು.
3. ರಾಜ್ಯಗಳ ಈ ಪಾಲನ್ನು ಸಂವಿಧಾನದಲ್ಲಿ ಅಳವಡಿಸುವುದು ಹಾಗೂ ಪ್ರತಿ 15 ವರ್ಷಗಳಿಗೊಮ್ಮೆ ಇವನ್ನು ವಿಮರ್ಶಿಸುವುದು.

ಇದರಿಂದ ಕೇಂದ್ರದ ತೆರಿಗೆ ಸಂಗ್ರಹದಲ್ಲಿ ಹೆಚ್ಚಳವಾಗುತ್ತಿರುವುದರ ಪ್ರಯೋಜನ ರಾಜ್ಯಗಳಿಗೂ ಸಿಗುತ್ತದೆ. ಅಲ್ಲದೆ ಎಷ್ಟು ಪ್ರಮಾಣದಲ್ಲಿ ಹಣಕಾಸು ಕೇಂದ್ರದಿಂದ ದೊರೆಯುತ್ತದೆ ಎಂಬ ಬಗ್ಗೆ ಈಗಿರುವ ಅನಿಶ್ಚಿತತೆ ಹೋಗುತ್ತದೆ.

ಈ ಪರ್ಯಾಯ ವ್ಯವಸ್ಥೆಯಲ್ಲಿಯೂ ನ್ಯೂನತೆಗಳಿವೆ. ಈ ಒಟ್ಟು 29% ರಾಜ್ಯಗಳಿಗೆ ಸಾಲದಂತಾಗುತ್ತದೆ. ಅಲ್ಲದೆ ಪುನರ್ವಿಮರ್ಶೆಗೆ ವಿಧಿಸಿದ 15 ವರ್ಷಗಳು ಸಾಕಷ್ಟು ದೀರ್ಘ ಅವಧಿಯೇ. ಅದನ್ನು ಕಮ್ಮಿ ಮಾಡಬಹುದಿತ್ತು. ಆದರೂ ನಮ್ಮ ದೇಶದ ಹಣಕಾಸು ಒಕ್ಕೂಟ ವ್ಯವಸ್ಥೆಯಲ್ಲಿನ ಅಸಮತೋಲನಗಳನ್ನು ನಿವಾರಿಸುವತ್ತ ಇದೊಂದು ಹೆಜ್ಜೆ ಎಂದು ಪರಿಣತರು ಅಭಿಪ್ರಾಯ ಪಟ್ಟಿದ್ದಾರೆ.

ಮಧ್ಯಪ್ರದೇಶದ ಹಿರಿಯ ದೇಶಪ್ರೇಮಿ ಕಾಂ|| ಯಮುನಾ ಪ್ರಸಾದ್ ಶಾಸ್ತ್ರಿ ನಿಧನ

ಮಧ್ಯಪ್ರದೇಶದ ಎಡ ಮತ್ತು ಪ್ರಜಾ ಪ್ರಭುತ್ವವಾದಿ ಆಂದೋಲನದ ಒಬ್ಬ ಹಿರಿಯ ಮುಖಂಡರೂ ಹಾಗೂ ಸಿಪಿಐ(ಎಂ) ಮಧ್ಯಪ್ರದೇಶ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆದ ಕಾಂ|| ಯಮುನಾ ಪ್ರಸಾದ್ ಶಾಸ್ತ್ರಿಯವರು ಜೂನ್ 20 ರಂದು ಹಠಾತ್ತಾಗಿ ಹೃದಯಾಘಾತಕ್ಕೊಳಗಾಗಿ ನಿಧನರಾದರು. ಅವರಿಗೆ 70 ವರ್ಷ ವಯಸ್ಸಾಗಿತ್ತು.

ಕಾಂ|| ಯಮುನಾ ಪ್ರಸಾದ್ ಶಾಸ್ತ್ರಿಯವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಾ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಅವರು ಜನಸಾಮಾನ್ಯರ ಹಿತಗಳಿಗಾಗಿ ಅವಿರತ ಹೋರಾಟ ನಡೆಸಿದರು ಎಂದಿದೆ. ಪ್ರಖರ ದೇಶಪ್ರೇಮಿಯಾದ ಅವರು ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. 1955 ರಲ್ಲಿ ಗೋವಾ ವಿಮೋಚನಾ ಹೋರಾಟದಲ್ಲಿ ಪೋರ್ಚುಗೀಸ್ ಪೋಲೀಸರ ಲಾಟಿಗಳಿಂದಾಗಿ ಅವರ ಒಂದು ಕಣ್ಣಿನ ದೃಷ್ಟಿ ಹೋಗಿತ್ತು. ನಂತರ ತುರ್ತು ಪರಿಸ್ಥಿತಿಯ ಕಾಲದಲ್ಲಿ ಜೈಲಿನಲ್ಲಿದ್ದಾಗ ಇನ್ನೊಂದು ಕಣ್ಣೂ ಕುರುಡಾಯಿತು.

ಒಬ್ಬ ಸಮಾಜವಾದೀ ಮುಖಂಡರಾಗಿ ಆರಂಭಿಸಿದ ಶಾಸ್ತ್ರಿಯವರು ಕ್ಷಿಪ್ರವಾಗಿ ಕಾರ್ಮಿಕ ವರ್ಗ ಹಾಗೂ ರೈತಾಪಿ ವರ್ಗಗಳ ಪ್ರತಿಪಾದಕರಾಗಿ ಮೂಡಿ ಬಂದರು. ಅರವತ್ತರ ದಶಕದಲ್ಲಿ ಎರಡು ಬಾರಿ ಅವರು ವಿಧಾನ ಸಭೆಗೆ ಆರಿಸಿ ಬಂದರು. ತುರ್ತು ಪರಿಸ್ಥಿತಿಯ ನಂತರ ಅವರು ಜನತಾಪಾರ್ಟಿಯ ನಂತರ, ಜನತಾದಳದ ಮುಖಂಡರಾದರು. 1977 ಹಾಗೂ 1989 ರಲ್ಲಿ ಅವರು ರೇವಾದಿಂದ ಲೋಕಸಭೆಗೆ ಆರಿಸಿ ಹೋದರು. 1993 ರಲ್ಲಿ ಸಿಪಿಐ(ಎಂ) ಸೇರಿದ ಅವರು ಪಕ್ಷದ ಒಬ್ಬ ಸಕ್ರಿಯ ಮುಖಂಡರಾದರು.

ತನ್ನ ಜೀವನವನ್ನೇ ಜನಗಳಿಗಾಗಿ ಮುಡಿಪಿಟ್ಟು ಅವಿರತವಾಗಿ ಶ್ರಮಿಸಿರುವ ಒಬ್ಬ ಮುಖಂಡರನ್ನು ಈಗ ಮಧ್ಯ ಪ್ರದೇಶ ಎಡ ಮತ್ತು ಪ್ರಜಾಪ್ರಭುತ್ವವಾದಿ ಆಂದೋಲನ ಕಳಕೊಂಡಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಅವರ ದುಃಖತಪ್ತ ಕುಟುಂಬದ ಸದಸ್ಯರಿಗೆ ಹಾರ್ದಿಕ ಸಂತಾಪವನ್ನು ವ್ಯಕ್ತಪಡಿಸಿದೆ.

.... ಬ್ಯಾಂಕ್ ನೌಕರರ ಮುಷ್ಕರ

ಪುಟ ಒಂದರಿಂದ

ವಾಣಿಜ್ಯ ಬ್ಯಾಂಕುಗಳ ನೌಕರರು 'ನಾವೂ ನಿಮ್ಮೊಂದಿಗಿದ್ದೇವೆ' ಎಂಬ ಭರವಸೆಯನ್ನು ಮುಷ್ಕರದ ಮೂಲಕ ಎತ್ತಿ ಹಿಡಿದರು.

ಕೇಂದ್ರ ಸರಕಾರದ ಉದಾರೀಕರಣದ ನೀತಿಯ ಲಾಭ ಪಡೆದು ನಾಯಿಕೊಡೆಗಳಂತೆ ಅಡ್ಡಾದಿಡ್ಡಿಯಾಗಿ ಹುಟ್ಟಿಕೊಂಡಿರುವ ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಗೆ(ಎನ್.ಬಿ.ಎಫ್.ಸಿ) ಸಾರ್ವ ಜನಿಕರಿಂದ ಠೇವಣಿಯನ್ನು ಸಂಗ್ರಹಿಸಲು ಅವಕಾಶ ನೀಡಬಾರದೆಂದು ಒತ್ತಾಯಿಸಿದ ಬ್ಯಾಂಕ್‌ನೌಕರರು ಸಾರ್ವಜನಿಕರ ಹಿತವನ್ನು ತಮ್ಮ ಹಿತವೆಂದೇ ಬಗೆದು ಮುಷ್ಕರ ನಡೆಸಿರುತ್ತಾರೆ.

ಹೆಚ್ಚಿನ ಬಡ್ಡಿಯ ಆಸೆ ತೋರಿಸಿ ಸಾರ್ವಜನಿಕ ರಿಂದ ಕೋಟಿಗಟ್ಟಲೆ ಹಣವನ್ನು ಠೇವಣಿರೂಪದಲ್ಲಿ ಸಂಗ್ರಹ ಮಾಡುತ್ತಿರುವ ಬ್ಯಾಂಕೇತರ ಹಣಕಾಸು ಸಂಸ್ಥೆಗಳು ರಾತ್ರೋರಾತ್ರಿ ಅವುಗಳನ್ನು ಮುಚ್ಚಿ ಕಷ್ಟಪಟ್ಟು ದುಡಿವ ಜನರ ಗಳಿಕೆಯನ್ನು ಗುಳುಂ ಮಾಡುತ್ತಿವೆ. ಇತ್ತೀಚಿಗೆ ಸುಮಾರು 1200ಕೋಟಿ ರೂ.ಗಳನ್ನು ಸಾರ್ವಜನಿಕರಿಗೆ ವಂಚಿಸಿದ ಸಿ.ಆರ್.ಬಿ. ಕ್ಯಾಪಿಟಲ್ ಮಾರ್ಕೆಟಿಂಗ್ ಕಂಪನಿ ಇದಕ್ಕೊಂದು ಸ್ಪಷ್ಟ ಉದಾಹರಣೆ.

ಕಳೆದ ಏಪ್ರಿಲ್ 4 ರಂದೇ ನಡೆಯಬೇಕಾಗಿದ್ದ ಮುಷ್ಕರವನ್ನು ಅಂದಿನ ರಾಜಕೀಯ ಏರುಪೇರು ಗಳಿಂದಾಗಿ ಹಿಂತೆಗೆದುಕೊಂಡಿದ್ದು ಇದೀಗ ತಮ್ಮ ಹೋರಾಟವನ್ನು ಬ್ಯಾಂಕು ನೌಕರರು ಮುಂದುವರಿಸಿದ್ದಾರೆ.

ಬ್ಯಾಂಕಿಂಗ್ ಉದ್ದಿಮೆಯಲ್ಲಿ ಹೊಸ ನೇಮಕಾತಿ, ಕೆಲಸದಲ್ಲಿರುವಾಗಲೇ ನಿಧನ ಹೊಂದಿದ ನೌಕರರ ಕುಟುಂಬದಲ್ಲೊಬ್ಬರಿಗೆ ಬ್ಯಾಂಕಿನಲ್ಲಿ ಉದ್ಯೋಗ, ಬೋನಸ್ ಮಿತಿ ರದ್ದು, ಖಾಸಗಿ ಬ್ಯಾಂಕ್‌ಗಳಲ್ಲಿ ಪೆನ್ಶನ್ ಒಪ್ಪಂದ ಜಾರಿ ಇತ್ಯಾದಿ ನೌಕರರ ಇತರ ಬೇಡಿಕೆಗಳು.

ಬೆಂಗಳೂರಿನಲ್ಲಿ 5000 ಕ್ಕೂ ಮಿಕ್ಕಿ ಬೃಹತ್ ಬ್ಯಾಂಕ್ ನೌಕರರ ರ್‍ಯಾಲಿಯನ್ನು ಉದ್ದೇಶಿಸಿ 9 ಸಂಘಟನೆಗಳ ಮುಖಂಡರು ಮಾತನಾಡಿದ್ದು ಬಿಇಎಫ್ಐ ನ ರಾಜ್ಯ ಕಾರ್ಯದರ್ಶಿ ಎಸ್. ರೇವಣ್ಣ, ಏಐಬಿಇಎ ನ ರಾಜ್ಯ ಕಾರ್ಯದರ್ಶಿ ವಸಂತರೈ, ಐಬೋಕ್‌ನ ಗೌರವ ಅಧ್ಯಕ್ಷರಾದ ಗೋಡ್‌ಬೋಳೆ ಮೊದಲಾದವರು ಕೇಂದ್ರ ಸರಕಾರದ ಆರ್ಥಿಕ ಧೋರಣೆಯ ವಿರುದ್ಧ ಮತ್ತು ನೌಕರರ, ಅಧಿಕಾರಿಗಳ ಹಕ್ಕುಗಳನ್ನು ಉಳಿಸಿಕೊಳ್ಳಲು ಹೋರಾಟವನ್ನು ತೀವ್ರಗೊಳಿಸ ಬೇಕೆಂದು ಕರೆ ಇತ್ತರು.

ಜೂನ್ 20 ರಂದು ಪಶ್ಚಿಮ ಬಂಗಾಳದ ಎಡರಂಗ ಸರಕಾರದ ಇಪ್ಪತ್ತನೇ ವಾರ್ಷಿಕೋತ್ಸವ ಕಲ್ಕತ್ತೆಯಲ್ಲಿ ನಡೆದಾಗ ವೇದಿಕೆಯ ದೃಶ್ಯ. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್‌ಸಿಂಗ್ ಸುರ್ಜಿತ್, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿಬಸು ಹಾಗೂ ಎಡರಂಗದ ಇತರ ಪಕ್ಷಗಳ ಮುಖಂಡರು ಇದರಲ್ಲಿ ಭಾಗವಹಿಸಿದರು. ಒಂದೆಡೆ ಪಶ್ಚಿಮ ಬಂಗಾಳದಲ್ಲಿ ಎಡರಂಗ ಚುನಾವಣೆಯ ಮೇಲೆ ಚುನಾವಣೆಗಳಲ್ಲಿ ವಿಜಯಗಳಿಸುತ್ತಾ ಬಂದಂತೆ ರಾಷ್ಟ್ರಮಟ್ಟದ ರಾಜಕೀಯದಲ್ಲಿ ಎಡಪಕ್ಷಗಳ ಪಾತ್ರದ ಮಹತ್ವವೂ ಬೆಳೆಯುತ್ತಾ ಬಂತು. ಈ ಎರಡೂ ರಂಗಗಳಲ್ಲಿ ಬಂಗಾಳದ ಪ್ರೀತಿಯ ಮುಖಂಡ ಜ್ಯೋತಿಬಸುರವರ ನಿರ್ಣಾಯಕ ಪಾತ್ರದ ಬಗ್ಗೆ ಸಿಪಿಐ(ಎಂ)ಗೆ ಹೆಮ್ಮೆಯಿದೆ ಎಂದು ಸುರ್ಜಿತ್ ಹೇಳಿದರು. ಭಾರತದ ಶ್ರಮಜೀವಿಗಳು ಪಶ್ಚಿಮಬಂಗಾಳದ ಎಡರಂಗದತ್ತ ಗೌರವ, ಆಶ್ಚರ್ಯದ ಭಾವನೆಗಳಿಂದ ನೋಡುತ್ತಿದ್ದಾರೆ ಎಂದು ಅವರು ಹೇಳಿದರು. '20 ವರ್ಷಗಳನ್ನು ನಾವು ಬಂದಿರುವಾಗ ಈಗ ನಮ್ಮ ಮೇಲಿನ ಹೊಣೆ ಇನ್ನೂ ಹೆಚ್ಚಾಗಿದೆ. ಆತ್ಮವಿಮರ್ಶೆಯ ಮೂಲಕ ನಮ್ಮ ನಡುವೆ ಲವಲೇಶವಾದರೂ ಭ್ರಷ್ಟಾಚಾರ ಕಂಡರೆ ಅದನ್ನು ನಿರ್ಮೂಲ ಮಾಡಬೇಕು" ಎಂದು ಜ್ಯೋತಿ ಬಸು ಹೇಳಿದರು.



8 ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ನಿಗ್ರಹಿಸಲು ಪರಿಷ್ಕೃತ ಲೋಕಪಾಲ್ ಮಸೂದೆಯನ್ನು ಅಂಗೀಕರಿಸಬೇಕು.

ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರ, ಇದರಲ್ಲಿ ರಾಜಕಾರಣಿ- ಅಧಿಕಾರಶಾಹಿ- ಉದ್ಯಮಿಗಳು-ಕ್ರಿಮಿನಲ್‌ಗಳ ಕೂಟದ ಬಿಗಿ ಹಿಡಿತ ನಮ್ಮ ಸಮಾಜವನ್ನು ಆವರಿಸುತ್ತಿದೆ. ಮಾಜಿ ಪ್ರಧಾನಿಯೊಬ್ಬರು ಹಲವು ಬಾರಿ ಭ್ರಷ್ಟಾಚಾರದ ವಿವಿಧ ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಹಾಜರಾಗಬೇಕಾಗಿ ಬಂದದ್ದು, ಮಾಜಿ ಮುಖ್ಯಮಂತ್ರಿಗಳಿಗೂ ಅದೇ ಪರಿಸ್ಥಿತಿ ಬಂದಿರುವುದು ಇಡೀ ನಮ್ಮ ಸಮಾಜದಲ್ಲಿ ಆಂತಕ ಉಂಟುಮಾಡಿದೆ. ಈ ಹಿಡುಗನ್ನು ತಡೆಯಲು ಒಂದು ವ್ಯವಸ್ಥೆ ಅಗತ್ಯ ಎಂದು ಎಲ್ಲರಿಗೂ ಅನಿಸುತ್ತಿದೆ. 'ಲೋಕಪಾಲ್' ವ್ಯವಸ್ಥೆಯ ಪರಿಕಲ್ಪನೆ ಈ ಹಿನ್ನೆಲೆಯಲ್ಲಿ ಮಹತ್ವಪೂರ್ಣವಾಗಿದೆ.

ವಾಸ್ತವವಾಗಿ ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರ ತಡೆಗೆ ಇಂತಹ ಒಂದು ವ್ಯವಸ್ಥೆಯ ಅವಶ್ಯಕತೆ ಮೂರು ದಶಕಗಳ ಹಿಂದೆಯೇ ಅನಿಸಿತ್ತು. ಲೋಕಪಾಲ್ ಮಸೂದೆಯನ್ನು 1968 ರಿಂದ ಐದು ಬಾರಿ ಸಂಸತ್ತಿನಲ್ಲಿ ಇದನ್ನು ಮಂಡಿಸಲಾಯಿತು. ಆದರೆ ಇನ್ನೂ ಅದು ಪಾಸಾಗಿಲ್ಲ.

'ಸಂಯುಕ್ತ ರಂಗ' ದ 'ಸಮಾನ ಕನಿಷ್ಟ ಕಾರ್ಯಕ್ರಮ' ಮೊದಲ ಬಜೆಟ್ ಅಧಿವೇಶ ನದಲ್ಲೇ ಈ ಲೋಕಪಾಲ್ ಮಸೂದೆಯನ್ನು ಮಂಡಿಸುವುದಾಗಿ ವಚನ ನೀಡಿತ್ತು. ಕಳೆದ ಚಳಿಗಾಲದ ಅಧಿವೇಶನದಲ್ಲಿ ಅದನ್ನು ಅಂಗೀಕರಿಸುವ ನಿರೀಕ್ಷೆಯೂ ಇತ್ತು. ಆದರೆ ಅದು ಮಂಡಿಸಿದ ಮಸೂದೆಯಲ್ಲಿ ಹಲವು ದೌರ್ಬಲ್ಯಗಳಿದ್ದವು. ಅದು ಭ್ರಷ್ಟಾಚಾರವನ್ನು ತಡೆಯುವ ಬದಲು ಸಾರ್ವಜನಿಕ ಹುದ್ದೆಯಲ್ಲಿರುವಾಗ ಭ್ರಷ್ಟಾಚಾರ ನಡೆಸಿದ ವ್ಯಕ್ತಿಯನ್ನು ರಕ್ಷಿಸುವ ಅಂಶಗಳೇ ಅದರಲ್ಲಿ ಇವೆ. ಈ ಮಸೂದೆಯಲ್ಲಿ ಬಹಳಷ್ಟು ಆಕ್ಷೇಪಾರ್ಹ ಅಂಶಗಳಿರುವುದರಿಂದ ಅದನ್ನೀಗ ಸೆಲೆಕ್ಟ್ ಕಮಿಟಿಗೆ ಒಪ್ಪಿಸಲಾಗಿದೆ. ಈ ಬಗ್ಗೆ ಸೂಕ್ತ ಚರ್ಚೆಯ ನಂತರ ಮತ್ತೆ ಹೊಸ ಕರಡನ್ನು ತಯಾರಿಸಿ ಸಂಸತ್ತಿನ ಮುಂದೆ ಇಡಬೇಕು ಎಂಬುದು ಸಿಪಿಐ(ಎಂ)ನ ಒತ್ತಾಯ.

ಏಕೆಂದರೆ ಇಂತಹ ಭ್ರಷ್ಟಾಚಾರ ನಿರೋಧಕ ವ್ಯವಸ್ಥೆ ವಿಶ್ವಾಸಾರ್ಹವಾಗಿರಬೇಕು, ಪರಿಣಾಮಕಾರಿ ಯಾಗಿ ಕ್ಷಿಪ್ರವಾಗಿ ಕೆಲಸ ಮಾಡುವಂತಿರ ಬೇಕು. ಲೋಕಪಾಲ ವ್ಯವಸ್ಥೆ ಭ್ರಷ್ಟಾಚಾರದ ಪ್ರಕರಣಗಳನ್ನು ಮಾತ್ರವಲ್ಲ ಉನ್ನತ ಅಧಿಕಾರದ ದುರುಪಯೋಗ, ಸ್ವಜನ ಪಕ್ಷ ಪಾತ, ದುರ್ವರ್ತನೆ, ನಾಗರೀಕರಿಗೆ ತೊಂದ ರೆಯುಂಟುಮಾಡುವ ದುರಾಡಳಿತ ಇವನ್ನೆಲ್ಲಾ ಒಳಗೊಳ್ಳಬೇಕು ಎಂಬುದೂ ಪ್ರಜಾಪ್ರಭುತ್ವವಾದಿಗಳ ಬಹುದಿನಗಳ ಆಗ್ರಹ. ಅಲ್ಲದೆ ಪ್ರಧಾನ ಮಂತ್ರಿಗಳಿಂದ ಹಿಡಿದು ಎಲ್ಲಾ ಮಂತ್ರಿಗಳು, ಸಂಸತ್ ಸದಸ್ಯರು, ಅಧಿಕಾರಶಾಹಿಗಳು ಹಾಗೂ ಸಾರ್ವಜನಿಕ ಸಂಸ್ಥೆಗಳ ಮುಖಂಡರು ಈ ಲೋಕಪಾಲ್ ಕಾನೂನಿನ ವ್ಯಾಪ್ತಿಗೆ ಬರ ಬೇಕು. ದೇಶದಲ್ಲಿ ರಾಜಕೀಯ ನೈತಿಕತೆ ತ್ವರಿತವಾಗಿ ಹದಗೆಡುತ್ತಿರುವ ಹಿನ್ನೆಲೆಯಲ್ಲಿ ವಿಶ್ವಾಸಾರ್ಹವಾದ, ಪರಿಣಾಮಕಾರಿಯಾದ ಒಂದು ವ್ಯವಸ್ಥೆಯನ್ನು ನಿರ್ಮಿಸುವ ಲೋಕಪಾಲ್ ಮಸೂದೆ ವಿಳಂಬವಿಲ್ಲದೆ ಪಾಸಾಗಬೇಕು.

ಲೋಕಪಾಲ್ ಮಸೂದೆಯಲ್ಲಿನ ಈ ವಿಳಂಬದ ಜೊತೆಗೆ ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಟಗಳಲ್ಲಿ ಸಡಿಲಿಕೆ ಉಂಟಾಗಿರುವ ಲಕ್ಷಣಗಳು ಬಹಳಷ್ಟು ಕಾಣುತ್ತಿವೆ. ಹವಾಲಾ ಕೇಸಿನಲ್ಲಿ ಬಹಳಷ್ಟು ಆಪಾದಿತರನ್ನು ಖುಲಾಸೆ ಮಾಡಿದ ದಿಲ್ಲಿ ಹೈಕೋರ್ಟ್‌ನ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿ ಸಲು ಸಿಬಿಐಗೆ ಅನುಮತಿ ನೀಡಲು ಸಂಯುಕ್ತ ರಂಗ ಸರಕಾರ ವಾರಗಟ್ಟಲೆ ವಿಳಂಬ ಮಾಡಿತು. ಮೇವು ಹಗರಣದಲ್ಲಿ ಆಪಾದಿತರಾದ ರಾಜಕೀಯ ಮುಖಂಡರ ವಿಚಾರಣೆಗೆ ಅನುಮತಿ ನೀಡಲೂ 40 ದಿನಗಳನ್ನು ತೆಗೆದು ಕೊಂಡಿತು. ಈ ವಾರ ಹಲವಾರು ಉನ್ನತ ಸ್ಥಾನ ಗಳಲ್ಲಿನ ಭ್ರಷ್ಟಾಚಾರದ ತನಿಖೆ ನಿರ್ಣಾಯಕ ಘಟ್ಟದಲ್ಲಿರುವಾಗ ಸಿಬಿಐ ನಿರ್ದೇಶಕರನ್ನು ವರ್ಗ ಮಾಡಲಾಗಿದೆ. ಭ್ರಷ್ಟಾಚಾರದ ಹೋರಾಟದಲ್ಲಿ ಮುಂಚೂಣಿ ಯಲ್ಲಿರಬೇಕಾದ ಸಂಯುಕ್ತ ರಂಗ ಸರಕಾರದ ಬಗ್ಗೆ ಜನಗಳಲ್ಲಿ ವಿಶ್ವಾಸ ಉಳಿಯಬೇಕಾದರೆ ಅದು ಲೋಕಪಾಲ್ ಮಸೂದೆಯ ಕುರಿತಂತೆ ತನ್ನ ಪ್ರಾಮಾಣಿಕತೆಯನ್ನು ಸಾಬೀತು ಪಡಿಸಬೇಕಾಗಿದೆ.



ನಿರಾಶಾದಾಯಕ ಹಿನ್ನಡೆ 'ಸಾಧಿಸಿದ' 'ಭೂ ಪರಿಸರ ಶೃಂಗಸಭೆ-2'

ಲೋಕಸಂಚಾರ

ಶರತ್‌ಚಂದ್ರ

"ಅವರೆಲ್ಲ ಬಂದರು, ಮಾತಾಡಿದರು (ಮಾತಾಡಿದರು, ಮಾತಾಡಿದರು........) ಆಮೇಲೆ ನಡೆದರು-ಏನೂ ಮಾಡದೆ"

- ಹೀಗೆಂದು ಬಣ್ಣಿಸಿದ್ದು ಅಮೆರಿಕದ ABC ಟೆಲಿವಿಷನ್ ಪತ್ರಕರ್ತ. ಆತ ಬಣ್ಣಿಸಿದ್ದು ವಿಶ್ವಸಂಸ್ಥೆಯಲ್ಲಿ ಇತ್ತೀಚೆಗೆ ಒಂದು ವಾರ ಕಾಲ ನಡೆದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ವಿಶೇಷ ಅಧಿವೇಶನವನ್ನು. ಈ ವಿಶೇಷ ಅಧಿವೇಶನವನ್ನು 'ಭೂ ಪರಿಸರ ಶೃಂಗಸಭೆ-2' ಎಂದು ಕರೆಯಲಾಗಿದೆ. 1992 ರಲ್ಲಿ ದಕ್ಷಿಣ ಅಮೆರಿಕದ ರಿಯೋದಲ್ಲಿ ನಡೆದ ಮೊದಲ ಭೂಲೋಕ...ಶೃಂಗಸಭೆ' ಯಲ್ಲಿ ಅಂಗೀಕರಿಸಲಾದ 'ಅಜೆಂಡಾ-21' ಎಂಬ ಪರಿಸರ ರಕ್ಷಣೆಯ ಬಗೆಗಿನ ಅಂತರ್‍ರಾಷ್ಟ್ರೀಯ ಒಪ್ಪಂದದ ಜಾರಿಯ ಬಗ್ಗೆ ವಿಮರ್ಶಿಸಲು ಈ ವಿಶೇಷ ಅಧಿವೇಶನ ಕರೆಯಲಾಗಿತ್ತು. ಮೇಲೆ ಹೇಳಿರುವ ಈ ಅಧಿವೇಶನದ 'ಸಾಧನೆ' ಬಗ್ಗೆ ABC ಪತ್ರಕರ್ತನ ಟೀಕೆ.

ಆ ಪತ್ರಕರ್ತ ಮಾತ್ರವಲ್ಲ ಟೀಕಿಸಿದ್ದು, ಜಗತ್ತಿನಾದ್ಯಂತ ಪರಿಸರ ವಾದಿಗಳು, ಜನಪರ ಹೋರಾಟಗಾರರು, ಜಗತ್ತಿನ ಭವಿಷ್ಯದ ಬಗ್ಗೆ ಕಾಳಜಿ ಹೊಂದಿರುವವರು, ವಿಜ್ಞಾನಿಗಳು-ಇವರಿಗೆಲ್ಲಾ ನಿರಾಸೆ ತಂದ ಶೃಂಗಸಭೆ ಇದು. ಭೂ ಪರಿಸರ ಜೀವ ಸಂಕುಲಕ್ಕೆ ಬದುಕಲು ಲಾಯಕ್ಕು ಆಗಿಲ್ಲದಂತೆ ಕೆಡುತ್ತಿರುವ ಪರಿಸ್ಥಿತಿ ತಡೆಗಟ್ಟುವ ಹೋರಾಟದಲ್ಲಿ ತೀವ್ರ ಹಿನ್ನಡೆಯಾದ ಸಭೆ ಇದು. ಭೂಪರಿಸರ ಹದಗೆಡುತ್ತ, ಜಾರುತ್ತಾ ಜೀವಸಂಕುಲಕ್ಕೆ ಜೀವನಯೋಗ್ಯವಾಗಿರುವ 'ಲಕ್ಷ್ಮಣರೇಖೆ' ದಾಟಿ ಮತ್ತೆ ಹಿಂದಿರುಗುವಂತಹ ಪರಿಸ್ಥಿತಿ ತಡೆಯಲಾರವೇನೋ ಎಂಬ ತೀವ್ರ ಆತಂಕ ಒಡ್ಡಿದ ಸಮ್ಮೇಳನ.

ಈ ಶೃಂಗಸಭೆಯ ಸ್ವಲ್ಪ ಮೊದಲಷ್ಟೇ ನಡೆದ G-7(+1) (ಏಳು ಸಾಮ್ರಾಜ್ಯ ಶಾಹಿ ದೇಶಗಳು + ರಶ್ಯಾ) ಶೃಂಗಸಭೆಯಲ್ಲೇ ಈ ನಿರಾಶಾದಾಯಕ 'ಟ್ರೇಲರ್' ಕಂಡಿತ್ತು. ರಿಯೋ ಸಮ್ಮೇಳನದಲ್ಲಿ ಭೂಪರಿಸರದ ಬಗ್ಗೆ ಅಭಿವೃದ್ಧಿ ದೇಶಗಳು ಕೊಟ್ಟಿದ್ದ ಎಲ್ಲಾ ಭರವಸೆಗಳನ್ನು ಜಾರಿ ಗೊಳಿಸದಿರುವ ಬಗ್ಗೆ ಗಂಭೀರ ವಿಮರ್ಶೆ, ದಿಟ್ಟ ನಿರ್ಧಾರದ ಬದಲು, ಜಾರಿಕೊಳ್ಳುವ ಧೋರಣೆ ಕಂಡು ಬಂತು. ಇದೇ ಧೋರಣೆಯನ್ನು ಅಮೆರಿಕದ ನಾಯಕತ್ವದಲ್ಲಿ ಎಲ್ಲಾ ಅಭಿವೃದ್ಧಿ ದೇಶಗಳು ತೋರಿಸಿದವು.

ಶೃಂಗಸಭೆಯಲ್ಲಿ ಈ ಧೋರಣೆ ಹಾಗೂ ಇದಕ್ಕೆ ಅಮೆರಿಕ ನಾಯಕತ್ವವನ್ನು ವಿಕಾಸಶೀಲ ದೇಶಗಳು ತೀವ್ರವಾಗಿ ಟೀಕಿಸಿದವು. ಅಭಿವೃದ್ಧ ಬಂಡವಾಳಶಾಹಿ ದೇಶಗಳ ಪರಿಸರದ ಚಳುವಳಿಗಳು, ಬಳಕೆದಾರರ ಚಳುವಳಿಗಳು, ಎಲ್ಲಾ ದೇಶಗಳ ಸ್ವಯಂ-ಸೇವಾ ಸಂಘಟನೆಗಳೂ ಈ ನೀತಿಗಳನ್ನು ಟೀಕಿಸಿವೆ.

ಶೃಂಗಸಭೆ ಮುಖ್ಯವಾಗಿ 1992 ರ ಮೊದಲ ಶೃಂಗಸಭೆಯಿಂದ ಇಂದಿಗೆ(5 ವರ್ಷದಲ್ಲಿ) ಮುನ್ನಡೆ ಬದಲು ತೀವ್ರ ಹಿನ್ನಡೆಯಾಗಿದೆ ಎಂದು ಗಮನಿಸಿವೆ. ರಿಯೋ ಶೃಂಗಸಭೆ ತೆಗೆದುಕೊಂಡ ನಿರ್ಣಯಗಳಲ್ಲಿ ಹೆಚ್ಚಿನವು(ಇಲ್ಲವೇ ಎನ್ನುವಷ್ಟು) ಜಾರಿಯಾಗಿಲ್ಲ ಎಂದು ಗಮನಿಸಿತು.

ಪರಿಸರ ರಕ್ಷಣೆ ಸಂಬಂಧಿ ತಂತ್ರಜ್ಞಾನ ನೆರವು ರೂಪದಲ್ಲಿ ಕೊಡುತ್ತೇವೆಂದು ಅಭಿವೃದ್ಧಿ ದೇಶಗಳು ಭರವಸೆ ನೀಡಿದ್ದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾ ನೆರವು ಇಮ್ಮಡಿಯಾಗುವ ಬದಲು(ಶೇಕಡಾ 0.35 ರಿಂದ ಶೇಕಡಾ 0.70 ಕ್ಕೇರುವ ಬದಲು) ಮೂರನೇ ಒಂದರಷ್ಟು (ಶೇಕಡಾ 0.22 ಕ್ಕೆ) ಇಳಿದಿದೆ.

ಭೂ ಪರಿಸರದ ಉಷ್ಣ ಹೆಚ್ಚಿಸುವ ಅನಿಲಗಳನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಯಾವುದೇ ಪ್ರಗತಿ ಆಗಿಲ್ಲ. 2000 ದಷ್ಟು ಹೊತ್ತಿಗೆ 1990 ರ ಮಟ್ಟಕ್ಕೆ ಇಂತಹ ಅನಿಲಗಳನ್ನು ತಗ್ಗಿಸುವ ನಿರ್ಣಯ ರಿಯೋದಲ್ಲಿ ಕೈಗೊಳ್ಳಲಾಗಿತ್ತು. ಜಪಾನ್ ಒಂದೇ 1995 ರಲ್ಲಿ 1990 ಕ್ಕಿಂತ ಶೇಕಡಾ 8.5 ಹೆಚ್ಚು ಇಂಗಾಲ ಡೈಆಕ್ಸೈಡ್ ಉತ್ಪಾದಿಸಿತು!

ಇದೇ ರೀತಿ ಭೂಪರಿಸರದ ಜೀವರಕ್ಷಕ ಕವಚ ಓಜೋನ್‌ನಲ್ಲಿ ತೂತು ಕೊರೆಯುವ ರಾಸಾಯನಿಕಗಳ ಉತ್ಪಾದನೆಯನ್ನು 1995 ರ ಹೊತ್ತಿಗೆ ಪೂರ್ಣ ನಿಲ್ಲಿಸಬೇಕಾಗಿತ್ತು ಹಾಗೂ ವಿಕಾಸಶೀಲ ದೇಶಗಳಿಗೆ ಈ ರಾಸಾಯನಿಕಗಳ ಉತ್ಪಾದನೆ ನಿಲ್ಲಿಸಲು ಬದಲಿ ತಂತ್ರಜ್ಞಾನ, ಆರ್ಥಿಕ ನೆರವು ನೀಡಬೇಕಾಗಿತ್ತು. ಇದು ಯಾವುದೂ ಜಾರಿಯಾಗಿಲ್ಲ.

ಶೃಂಗಸಭೆಯಲ್ಲಿ ತೀವ್ರ ವಿವಾದದ ನಂತರ ಅಂಗೀಕೃತವಾದ 'ಅಜೆಂಡಾ-21 ಜಾರಿಗೆ ಮುಂದಿನ ಕಾರ್ಯಕ್ರಮ' ಎಂಬ ದಸ್ತಾವೇಜು ರಿಯೋದಲ್ಲಿ ತೆಗೆದುಕೊಂಡ ಎಲ್ಲಾ ನಿರ್ಣಯಗಳನ್ನು ಸಡಿಲಗೊಳಿಸಿದೆ ಇಲ್ಲವೇ ಮೂಲೆಗೆ ಹಾಕಿದೆ.

ಹಾಂಗ್‌ಕಾಂಗ್‌ಗೆ ತವರಿಗೆ ಮರಳಿದ ಸಂಭ್ರಮ

ಹಾಂಗ್‌ಕಾಂಗ್ ಕೊನೆಗೂ ಸಾಮ್ರಾಜ್ಯ ಶಾಹಿ ಕಹಳೆಗಳ ಅಬ್ಬರದ ಅಪಪ್ರಚಾರ ಧಿಕ್ಕರಿಸಿ, ಶಾಂತಿಯುತವಾಗಿ ಸರಾಗವಾಗಿ ತನ್ನ ತವರು ಚೀನಾಕ್ಕೆ ಜುಲೈ 1 ರಂದು ಮರಳಿತು. ಜೂನ್ 30 ರ ಮಧ್ಯರಾತ್ರಿ ಏರ್ಪಡಿಸಲಾಗಿದ್ದ ಸಮಾರಂಭದಲ್ಲಿ ಬ್ರಿಟನ್ ರಾಜಕುಮಾರನ ಸನ್ನಿಧಿಯಲ್ಲಿ ಬ್ರಿಟಿಷ್ ಧ್ವಜ 'ಯೂನಿಯನ್ ಜಾಕ್' ಧ್ವಜ ಇಳಿಸಿ ಚೀನಾ ಹಾಗೂ ಹಾಂಕಾಂಗ್ ವಿಶೇಷ ಆಡಳಿತ ಪ್ರದೇಶದ ಹೊಸ ಧ್ವಜ ಹಾರಿಸಲಾಯಿತು. ಈ ಸಂದರ್ಭದಲ್ಲಿ ಚೀನಾದ ಅಧ್ಯಕ್ಷ ಜಿಯಾಂಗ್ ಜೆಮಿನ್ ಹಾಗೂ ಪ್ರಧಾನಿ ಲಿ ಪೆಂಗ್ ಹಾಜರಿದ್ದರು. ಚೀನಾ ಹಾಗೂ ಹಾಂಗ್‌ಕಾಂಗ್‌ಗಳಲ್ಲಿ ರಾಷ್ಟ್ರೀಯ ರಜಾ ದಿನವಾಗಿ ಆಚರಿಸಲಾದ ಅಂದು, ಕೋಟಿಗಟ್ಟಲೆ ಚೀನಿಯರು, ಲಕ್ಷಾಂತರ ಹಾಂಗ್‌ಕಾಂಗ್ನರು ಸಂಭ್ರಮದಿಂದ ಈ ದಿನ ಕಳೆದರು. ಆ ರಾತ್ರಿ ಹಾಂಗ್‌ಕಾಂಗ್ ಮಲಗಲಿಲ್ಲ. ರಾತ್ರಿ ತುಂಬಾ ಪಾರ್ಟಿಗಳೂ, ಪಾರ್ಟಿಗಳೂ-ಹಗಲವರೆಗೆ. ಹಾಂಗ್ ಕಾಂಗ್‌ನ ಬಂದರು, ಬೀದಿಗಳು, ಗಗನ ಚುಂಬಿ ಕಟ್ಟಡಗಳು ದೀಪಾಲಂಕಾರದಿಂದ ಕಣ್ಣು ಕೋರೈಸುಸುತ್ತಿದ್ದವು. ಬ್ರಿಟಿಷರು ನಿರ್ಗಮಿಸುತ್ತಿದ್ದಂತೆ ಭಾರಿ ಪಟಾಕಿಗಳು, ಆಕಾಶ ಬಾಣಗಳು ಆಕಾಶ ಬೆಳಗಿದವು.

ಹೆಚ್ಚಿನ ದೇಶಗಳು ವಿದೇಶ ಮಂತ್ರಿ ಅಥವಾ ಇತರ ಹಿರಿಯ ನಾಯಕರ ಮಟ್ಟದಲ್ಲಿ ಭಾಗವಹಿಸಿದ್ದರು. ಚೀನಾ 'ನೇಮಿಸಿದ' ತಾತ್ಕಾಲಿಕ ವಿಧಾನಸಭೆಗೆ ನಾವು ಮಾನ್ಯತೆ ನೀಡುವುದಿಲ್ಲ ಎನ್ನುವ ಅಮೆರಿಕಾ, ಬ್ರಿಟನ್ ಧೋರಣೆಗೆ ಯಾವುದೇ ಬೆಂಬಲ ಸಿಗಲಿಲ್ಲ. ಆದ್ದರಿಂದ ಆ ಸಮಾರಂಭ ಬಹಿಷ್ಕರಿಸುವ ಧೈರ್ಯಸಾಲದೆ ರಾಯಭಾರಿಗಳ ಮಟ್ಟದಲ್ಲಿ ಭಾಗವಹಿಸಿದವು.

ಜಗತ್ತಿನ ಎಲ್ಲೆಡೆ ಹಾಂಗ್‌ಕಾಂಗ್‌ನ ಶಾಂತಿಯುತ 'ಹಸ್ತಾಂತರ'ವನ್ನು ಶ್ಲಾಘಿಸಲಾಗಿದೆ. ಜಗತ್ತಿನಾದ್ಯಂತ ಈ ವಿಶಿಷ್ಟ ಘಟನೆ ಎಷ್ಟು ಉಲ್ಲಾಸ ತಂದಿತೆಂದರೆ, 20 ಕ್ಕೂ ಹೆಚ್ಚು ದೇಶಗಳು ಈ ಸಂದರ್ಭದಲ್ಲಿ ವಿಶೇಷ ಸ್ಮಾರಕ ಸ್ಟಾಂಪುಗಳನ್ನು ಹೊರತಂದವು.

ಬೀಜಿಂಗ್‌ನ ತಿಯಾನನ್ಮನ್ ಚೌಕದಲ್ಲಿ ನಡೆದ ಸಮಾರಂಭದಲ್ಲಿ ಚೀನಿಯರ ಹರ್ಷೋಲ್ಲಾಸ ಮೇರೆ ಮೀರಿ ಹರಿಯಿತು. ಲಕ್ಷಗಟ್ಟಲೆ ಜನ ವೀಕ್ಷಿಸಿದ ಭಾರಿ ದೀಪಾಲಂಕಾರ, ಪಟಾಕಿಯ ಅಬ್ಬರ, ಬಾರಿ ಸಾಂಸ್ಕೃತಿಕ ಪ್ರದರ್ಶನ ಚಾರಿತ್ರಿಕವಾಗಿತ್ತು. ಅಕ್ಟೋಬರ್ 1, 1949 ರ ಚೀನಾದ ಜನತಾ ಪ್ರಜಾಸತ್ತಾತ್ಮಕ ಕ್ರಾಂತಿಯ ನಂತರ ಇಂತಹ ಸಾರ್ವಜನಿಕ ಹರ್ಷೋಲ್ಲಾಸ ಎಂದೂ ಕಂಡುಬಂದಿರಲಿಲ್ಲವಂತೆ.

ಮಧ್ಯರಾತ್ರಿಯ ನಂತರ ಚೀನಾದ ಅಧ್ಯಕ್ಷ ಹಾಗೂ ಪ್ರಧಾನ ಮಂತ್ರಿಗಳ ಸಮಕ್ಷಮದಲ್ಲಿ ಹಾಂಗ್‌ಕಾಂಗ್‌ನ ಮುಖ್ಯ ಆಡಳಿತಾಧಿಕಾರಿ, ಕಾರ್ಯಕಾರಿ ಸಮಿತಿ, ತಾತ್ಕಾಲಿಕ ವಿಧಾನ ಸಭೆಯ ಸದಸ್ಯರು ಪ್ರಮಾಣ ವಚನ ಸ್ವೀಕರಿಸಿದರು - ಜಗತ್ತಿನ ಹೆಚ್ಚು ಕಡಿಮೆ ಎಲ್ಲಾ ದೇಶಗಳ ಹಿರಿಯ ನಾಯಕರ ಕರ ತಾಡನಗಳ ಮಧ್ಯೆ.



ನಾಟೋದ ಪೂರ್ವಾಭಿಮುಖ ವಿಸ್ತಾರದ ವಿರುದ್ಧ ಎಚ್ಚರಿಕೆ

ಅಮೆರಿಕದ ನಾಲ್ವತ್ತು ವಿದೇಶಿ ನೀತಿ ತಜ್ಞರು ಅಸ್ತ್ರ ನಿಯಂತ್ರಣ ತಜ್ಞರು ಹಾಗೂ ಇತರ ನೀತಿ ವಿಶ್ಲೇಷಕರು, ನಿರ್ಧಾರಕರು ಸಹಿಹಾಕಿದ ಎಚ್ಚರಿಕೆ ಪತ್ರದಲ್ಲಿ ನಾಟೋವನ್ನು ಪೂರ್ವಾಭಿಮುಖವಾಗಿ ವಿಸ್ತರಿಸುವ ಅಮೆರಿಕದ ನೀತಿಯನ್ನು ಬಲವಾಗಿ ವಿರೋಧಿಸಿದ್ದಾರೆ.

ನಾಟೋಕ್ಕೆ ಪೂರ್ವ ಯುರೋಪಿನ ಹಂಗೇರಿ, ಪೋಲೆಂಡ್ ಹಾಗೂ ಚೆಕ್ ಗಣರಾಜ್ಯಗಳನ್ನು ಸೇರಿಸುವ(ಅದರಲ್ಲೂ ಪಶ್ಚಿಮ ಯುರೋಪ್‌ನ ಪ್ರಮುಖ ದೇಶಗಳಾದ ಫ್ರಾನ್ಸ್ ಮುಂತಾದವರ ತೀವ್ರ ವಿರೋಧವಿದ್ದಾಗ್ಯೂ) ಕ್ಲಿಂಟನ್‌ರ ವಿದೇಶಿ ನೀತಿ ಇದೇ ನೀತಿ ಮುಂದುವರೆದರೆ ಇದೊಂದು ಚಾರಿತ್ರಿಕ ಪ್ರಮಾದವಾದೀತು. ಈ ನೀತಿ ಅಮೆರಿಕ ಹಾಗೂ ಯುರೋಪಿನ 'ಮಿತ್ರದೇಶ'ಗಳ ಭದ್ರತೆಗೆ ಧಕ್ಕೆ ತರುತ್ತದೆ ಎಂದು ಅವರು ಎಚ್ಚರಿಸಿದ್ದಾರೆ. ಯುರೋಪಿನಲ್ಲಿ ಹೊಸ ಭದ್ರತಾ ಸಮಸ್ಯೆಗಳನ್ನು ಹುಟ್ಟಿಸುವುದರಲ್ಲಿದೆ. ಯುರೋಪನ್ನು ಇಬ್ಭಾಗ ಮಾಡುವ ಹೊಸ ರೇಖೆಯನ್ನು ಈ ನೀತಿ ಸೃಷ್ಟಿಸುವುದು ಎಂದಿದೆ.

ಜುಲೈ 7 ರಂದು ನಡೆಯುವ ನಾಟೋ ಶೃಂಗಸಭೆಯಲ್ಲಿ ಪೂರ್ವ ಯುರೋಪಿನ ಮೂರು ದೇಶಗಳಿಗೆ ನಾಟೋ ಮೊದಲು ಆಹ್ವಾನ ಕೊಡಬೇಕು ಎಂದು ಅಮೆರಿಕ ಒತ್ತಾಯಿಸುತ್ತಿದೆ. ಆದರೆ ಅದಕ್ಕೆ ಬೇಕಾದ ಸೆನೆಟ್‌ನ ಮೂರನೇ ಎರಡು ಬಹುಮತದ ಮಂಜೂರಿ ಈ ತಜ್ಞರ ಬಹಿರಂಗ ವಿರೋಧದಿಂದ ಕಷ್ಟವಾಗಬಹುದು.

ಕ್ಯೂಬಾದ ವಿರುದ್ಧ ಅಮೆರಿಕದ ಜೈವಿಕ ಅಸ್ತ್ರಬಳಕೆ

ಕ್ಯೂಬಾದ ವಿರುದ್ಧ ಅಮೆರಿಕ ಜೈವಿಕ (ಜೀವ ತಂತ್ರಜ್ಞಾನ ಬಳಸುವ) ಅಸ್ತ್ರಗಳನ್ನು ಬಳಸಿದ ಎರಡನೇ ಪ್ರಕರಣ ಬೆಳಕಿಗೆ ಬಂದಿದೆ. ಹಿಂದೆ ಅಮೆರಿಕ ಜೈವಿಕ ಅಸ್ತ್ರಗಳನ್ನು ಬಳಸಿ, ಸಾಕು ಪ್ರಾಣಿಗಳನ್ನು ರೋಗಗ್ರಸ್ತಗೊಳಿಸಲು ಪ್ರಯತ್ನ ನಡೆಸಿತು. ಈ ಬಾರಿ ಕ್ಯೂಬಾದ ಆಹಾರ ಬೆಳೆಗಳನ್ನು ವಿಷಪೂರಿತ ಗೊಳಿಸಲು ಪ್ರಯತ್ನಿಸಲಾಯಿತು.

ಕಳೆದ ವರ್ಷ ಅಕ್ಟೋಬರ್‌ನಲ್ಲಿ ನಡೆದ ಈ ಪ್ರಕರಣದ ಬಗ್ಗೆ ಪುರಾವೆಗಳನ್ನು ಒದಗಿಸಿ ಕ್ಯೂಬಾ ವಿಶ್ವಸಂಸ್ಥೆಗೆ ದೂರಿತ್ತಿದೆ. ಕ್ಯೂಬಾದ ವಿಮಾನದ ಚಾಲಕನೊಬ್ಬ ಒಂದು ಇಂಜಿನಿನ ಕೃಷಿ ಬಳಕೆಗೆ ಬಳಸುವ ವಿಮಾನವೊಂದು 300 ಅಡಿ ಎತ್ತರದಲ್ಲಿ ಹಾರುತ್ತಾ, ಆಗಾಗ ಕಂದು-ಬಿಳಿ ಬಣ್ಣದ ಮಂಜು ಪಸರಿಸುವುದನ್ನು ಕಂಡ. ಕ್ಯೂಬಾದ ಕಂಟ್ರೋಲ್ ಟವರ್ ಹಾಗೂ ಇತರ ತನಿಖೆಗಳ ನಂತರ ಅದು ಅಮೆರಿಕದ ವಿದೇಶಾಂಗ ಖಾತೆಯ ವಿಮಾನ ಎಂದು ತಿಳಿಯಿತು. ಅಮೆರಿಕಾದ ವಾಯುಸೇನಾ ನೆಲೆಯಿಂದ ಹಾರಿ ಅದು ಬಂದಿತ್ತು. ಆ ಪ್ರದೇಶದ ರಾಸಾಯನಿಕ ಪರೀಕ್ಷೆ ಮಾಡಲಾಗಿ ಬಟಾಟೆ ಬೆಳೆಯ ಮೇಲೆ ಕ್ಯೂಬಾದಲ್ಲಿ ಸಿಗದ ವಿಶಿಷ್ಟ ರಾಸಾಯನಿಕ ಬಳಸಿದ್ದು ಕಂಡುಬಂತು. ಆಮೇಲೆ ಆ ವಿಮಾನಯಾನ ನಡೆಸಿದ ಪ್ರದೇಶದಲೆಲ್ಲಾ ಇದು ಕಂಡು ಬಂತು. ಸಿಂಪಡಿಸುವ ರಾಸಾಯನಿಕ ಜೈವಿಕ ಅಸ್ತ್ರದಲ್ಲಿ ಬಳಸುವ ರಾಸಾಯನಿಕ ಎಂದು ತಿಳಿದು ಬಂದಿದೆ. ಬಳಿಕ ವಿಮಾನ ದಕ್ಷಿಣ ಅಮೆರಿಕದ ಮಾದಕ ದ್ರವ್ಯಗಳ ಬೆಳೆ ನಾಶ ಮಾಡಲು ಬಳಸುವ ವಿಮಾನ ಎಂದೂ ಕ್ಯೂಬಾ ವಿಶ್ಲೇಷಿಸಿದೆ.

ಸಹಕಾರಿ ಚಳುವಳಿಗೆ ಕಾಯಕಲ್ಪದ ಅವಶ್ಯಕತೆ


ಪುಟ 2 ರಿಂದ

ರುವ ಸಹಕಾರಿ ಸಂಘಗಳನ್ನು ರದ್ದುಗೊಳಿಸಲಾಗುವುದೆಂದೂ ಹೇಳಿದ್ದಾರೆ. ನಿಷ್ಕ್ರಿಯ ಸಹಕಾರಿ ಸಂಘಗಳನ್ನು ರದ್ದುಗೊಳಿಸುತ್ತೇನೆಂದು ಹೇಳುವುದರಲ್ಲಿ ಮಾತ್ರ ಅರ್ಥವಿಲ್ಲೆಂದು ನಾವು ಹೇಳಬೇಕಾಗುತ್ತದೆ. ಯಾಕೆಂದರೆ ಸಹಕಾರಿ ಸಂಘಗಳನ್ನು ರಿಜಿಸ್ಟರ್ ಮಾಡಿಕೊಡುವಲ್ಲಿಂದ ಪ್ರಾರಂಭವಾಗಿ, ಅವುಗಳ ಕೆಲಸ, ವಾರ್ಷಿಕ ಆಡಿಟ್, ಅವುಗಳ ಚುನಾವಣೆಗಳಂಥ ಎಲ್ಲ ಮೇಲ್ವಿಚಾರಣೆಗಳನ್ನು ಮಾಡುವವರು ಮಂತ್ರಿಗಳಿಗೆ ಕೆಳಗಿರುವ ಸಹಕಾರಿ ಖಾತೆ, ಸಹಕಾರಿ ಸಂಘಗಳ ಡೈರೆಕ್ಟರ್‌ರಿಂದ ಪ್ರಾರಂಭವಾಗಿ ಸಹಕಾರಿ ಸಂಘಗಳ ಇನ್‌ಸ್ಪೆಕ್ಟರ್‌ಗಳವರೆಗಿನ ಅಧಿಕಾರಿಯ ವೈಖರಿ ಈ ಸಹಕಾರಿ ಸಂಘಗಳ ಕಾರ್ಯವಿಧಾನವನ್ನು ನಿರ್ಧರಿಸುತ್ತದೆ. ಕೆಳಗಿನಿಂದ ಮೇಲಿನವರೆಗಿನ ಸರಪಳಿಯ ಕಾರ್ಯ ವಿಧಾನದ ಮೇಲೆ ಸಹಕಾರಿ ಸಂಘಗಳು ನಿಂತಿವೆ. ಸಹಕಾರಿ ಸಂಘಗಳನ್ನು ಹುಟ್ಟು ಹಾಕಿ, ನಿರ್ವಹಿಸುವವರ ಮೇಲೆ ಗುರುತರವಾದ ಜವಾಬ್ದಾರಿ ಇದೇನೋ ನಿಜ. ಆದರೆ ಹುಟ್ಟು ಹಾಕಿದವರೇ ಸ್ವಹಿತ ಸಾಧನೆಗಾಗಿ ಜನರಿಗೆ ಮೋಸ ಮಾಡುವ, ಸಹಕಾರ ಚಳುವಳಿಗೆ ಅವಹೇಳನ ಮಾಡುವ ಪ್ರವೃತ್ತಿಗಿಳಿದಾಗ ಆ ಪ್ರವೃತ್ತಿಯನ್ನು ಮೊಳಕೆಯಲ್ಲೇ ಕತ್ತರಿಸಿ, ಹೊಸ ಮೊಳಕೆ ಚಿಗುರುವಂತೆ ಮಾಡುವ ಹೊಣೆ ಸಹಕಾರಿ ಖಾತೆಯದ್ದಲ್ಲವೇ? ಮಂತ್ರಿಗಳೂ ನಿಷ್ಕ್ರಿಯ ಸಹಕಾರಿ ಸಂಘಗಳನ್ನು ವಿಸರ್ಜಿಸಲು ಆದೇಶ ನೀಡಬಹುದು. ಆದರೆ 'ಸಹಕಾರಿ ಸಂಘಗಳು ನಿಷ್ಕ್ರಿಯಗೊಳ್ಳಲಿಕ್ಕೆ ಸಹಕಾರ ನೀಡಿದವರ ಮೇಲೆ ಯಾವ ಕ್ರಮ ಕೈಗೊಳ್ಳುತ್ತೇನೆ, ಆ ರೀತಿಯ ಸಹಕಾರ ನೀಡುವುದನ್ನು ತಪ್ಪಿಸಲಿಕ್ಕೆ ಏನು ಮಾಡುತ್ತೇನೆ, ತನ್ನ ಖಾತೆಯನ್ನು ಯಾವ ರೀತಿ ಬಿಗಿಗೊಳಿಸಿ ಸಹಕಾರಿ ಚಳುವಳಿ ನಿಜವಾಗಿಯೂ ಫಲ ನೀಡುವಂತೆ ಏನೇನು ಕ್ರಮ ಕೈಗೊಳ್ಳುತ್ತೇನೆ' ಎಂಬ ಹಲವಾರು ಮಹತ್ವದ ವಿಷಯಗಳ ಕುರಿತು ಮಂತ್ರಿಗಳು ಅಭಿಪ್ರಾಯ ವ್ಯಕ್ತ ಮಾಡಲಿಲ್ಲ. ಸಹಕಾರಿ ಸಂಘಗಳಿಗೆ ಚುನಾವಣೆಯ ನಂತರ ಸದಸ್ಯರನ್ನು ನಾಮಕರಣ ಮಾಡುವುದನ್ನು ರದ್ದುಪಡಿಸುತ್ತೇನೆಂದು ಮಾತ್ರ ಹೇಳಿರುವುದಲ್ಲದೆ ಸಹಕಾರಿ ಸಂಘಗಳನ್ನು ಬಲಗೊಳಿಸುವ ಕುರಿತು, ಅವು ಸರಿಯಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವ ಕುರಿತು, ಮೇಲ್ವಿಚಾರಣೆ ಮಾಡುವ ಕುರಿತು ತಪ್ಪಿತಸ್ಥರ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳುವ ಕುರಿತು ಮಂತ್ರಿಗಳು ಚಕಾರ ಎತ್ತಿಲ್ಲ.

ಸಹಕಾರಿ ಸಂಘಗಳು ಬೇರೆ ಬೇರೆ ಕ್ಷೇತ್ರಗಳನ್ನು ಆವರಿಸಿವೆ. ಅದರಲ್ಲಿ ಮುಖ್ಯವಾಗಿರುವುದು ಹಣದ ವ್ಯವಹಾರ ನಡೆಸುತ್ತಿರುವ ಸಹಕಾರಿ ಬ್ಯಾಂಕುಗಳು. ಇಂಥ ಸಹಕಾರಿ ಸಂಘಗಳಿಗೆ ಹಲವಾರು ಮುಖಗಳಿವೆ. ಬೇರೆ ಬೇರೆ ಹಂತದ ಜನ ಸಾಲ ಬೇಡಿ ಬರುತ್ತಾರೆ. ಸಾಲ ತೆಗೆದು ಕೊಳ್ಳುತ್ತಾರೆ. ಸಾಲ ತೆಗೆದುಕೊಂಡವ ಸಾಲ ಹಿಂತಿರುಗಿಸಬೇಕಾಗುತ್ತದೆ. ಹಾಗಾದರೆ ಮಾತ್ರ ಸಂಘ ನಡೆಯಲು ಸಾಧ್ಯ. ಮತ್ತೊಬ್ಬನಿಗೆ ಸಾಲ ಒದಗಿಸಲು ಸಾಧ್ಯ. ಹೆಚ್ಚಿನ ಸಾಲಗಾರರು ಪ್ರಭಾವ ಬೀರಿಯೇ ಸಾಲ ಪಡೆಯುತ್ತಾರೆ. ಅಲ್ಲಿಂದಲೇ ಸಹಕಾರಿ ಸಂಘದ ನಿಯಮಗಳ ಉಲ್ಲಂಘನೆ ಪ್ರಾರಂಭವಾಗುತ್ತದೆ. ಸಾಲ ವಾಪಸ್ ಕೊಡುವ ಹಂತಕ್ಕೆ ಬಂದಾಗ ಸಾಲ ವಾಪಸ್ ಕೊಡಲು ಕಾಲಾವಕಾಶ ಬೇಡಿಕೆ, ಆ ಕಾಲಾವಕಾಶಕ್ಕೆ ಮಿತಿ ಇಲ್ಲ. ಕೊನೆಗೆ ಅದು ವಸೂಲಾಗಲಿದೆಯೋ ಮುಳುಗಲಿದೆಯೋ ಎಂಬ ಹಂತಕ್ಕೆ ಬರುತ್ತದೆ. ಇಂದಿನ ಸಮಾಜದ ವ್ಯವಸ್ಥೆಯಲ್ಲಿ ಹಂತ ಹಂತದಲ್ಲಿ ರಾಜಕೀಯ ಕೈವಾಡ ನಡೆಯುತ್ತದೆ. ಅಧಿಕಾರಿಗಳೆಲ್ಲ ನಿಷ್ಕ್ರಿಯರಾಗುತ್ತಾರೆ. ಸಹಕಾರಿ ಸಂಘ ಮುಚ್ಚಿ ಹೋಗುತ್ತದೆ. ಸಹಕಾರಿ ಸಂಘಗಳ ನಿರ್ವಹಣೆ ಪ್ರಜಾಪ್ರಭುತ್ವ ರೀತಿಯಲ್ಲಿ ನಡೆಯುವಂತಾಗಬೇಕು, ಭ್ರಷ್ಟಾಚಾರ, ಸ್ವಜನ ಪಕ್ಷಪಾತ ನಿಲ್ಲಬೇಕು. ಮೇಲ್ವಿಚಾರಣೆ ಸರಿಯಾಗಬೇಕು. ರಾಜಕೀಯ ಕೈವಾಡ ಕೊನೆಗೊಳ್ಳಬೇಕು. ಅದೆಲ್ಲಕ್ಕಿಂತ ಮಿಕ್ಕಿ ಜನರಲ್ಲಿ ರಾಜಕೀಯ ಪ್ರಜ್ಞೆ ಬೆಳೆದು ಬರಬೇಕು. ಹಾಗಾದರೆ ಮಾತ್ರ ರಾಜ್ಯದಲ್ಲಿ ಸಹಕಾರಿ ಚಳುವಳಿ ಯಶಸ್ವಿಯಾಗಲು ಸಾಧ್ಯ, ಸಹಕಾರಿ ಸಂಘಗಳು ಜನಪ್ರಿಯವಾಗಲು ಸಾಧ್ಯ.

ರಾಜಕೀಯ ಪಕ್ಷಗಳಲ್ಲಿ ವೈಯಕ್ತಿಕ ನಾಯಕತ್ವ ಮತ್ತು ಸಾಮೂಹಿಕ ನಾಯಕತ್ವ

– ಇ.ಎಂ.ಎಸ್



ರಾಜಕೀಯ ಪಕ್ಷಗಳ ಆಂತರಿಕ ವಿಷಯಗಳಲ್ಲಿ ನ್ಯಾಯಾಲಯ ಮಧ್ಯ ಪ್ರವೇಶ ಮಾಡುತ್ತಿದೆ ಎಂದು ಲಾಲೂಪ್ರಸಾದ್ ಆಕ್ಷೇಪ ಮಾಡಿದರು. ಹಾಗೆಯೇ ಕಾಂಗ್ರೆಸ್ ಮತ್ತು ಜನತಾದಳದ ಹಾಲಿ ಹಾಗೂ ಮಾಜಿ ಅಧ್ಯಕ್ಷರು ಗಳು ತಮ್ಮ ವಿರುದ್ಧ ಮಾತನಾಡುವ ಅಧಿಕಾರ ಹಾಗೂ ಹಕ್ಕು ಪಕ್ಷದ ಸದಸ್ಯರುಗಳಿಗಿಲ್ಲ ಎಂಬ ಭಾವನೆಯಲ್ಲಿ ಕೆಲಸ ಮಾಡುತ್ತಾರೆ. ಇದರರ್ಥ ಈ ಬೂರ್ಝ್ವಾ ಪಕ್ಷಗಳೊಳಗೆ ಏಕಾಧಿಪತ್ಯವಿದೆ ಎಂದೇ ಆಗುತ್ತದೆ.

ಇದಕ್ಕೆ ಸಂಪೂರ್ಣ ಭಿನ್ನವಾದ ರೀತಿಯಲ್ಲಿ, ಆಸ್ಸಿನಿಂದ ಪ್ರಾರಂಭವಾಗುವ ಸಿಪಿಐ(ಎಂ)ನ ಕೆಳಮಟ್ಟದ ಶಾಖೆಗಳಿಂದ ಮೇಲ್ಸಮಿತಿಗಳವರೆಗೆ ಮತ್ತು ಮುಖಂಡತ್ವದ ಸ್ಥಾನಗಳಿಗೆ ನಡೆಯುವ ಚುನಾವಣೆ. ಬೂರ್ಝ್ವಾ ಪಕ್ಷಗಳಿಗಿಂತ ಭಿನ್ನವಾಗಿ ಕಾರ್ಮಿಕ ವರ್ಗದ ಪಕ್ಷಗಳಲ್ಲಿ ಇರುವುದು ಸಾಮೂಹಿಕ ನಾಯಕತ್ವವಾಗಿದೆ. ಬೂರ್ಝ್ವಾ ಪಕ್ಷಗಳಂತೆ ಅಧ್ಯಕ್ಷರ ತೀರ್ಮಾನವೇ ಅಂತಿಮ ಎಂಬುವುದು ಸಿಪಿಐ(ಎಂ) ಪಕ್ಷದಲ್ಲಾಗಲೀ ಅಥವಾ ಇತರೆ ಮಾರ್ಕ್ಸ್‌ವಾದಿ ಪಕ್ಷಗಳಲ್ಲಿಯೂ ಇಲ್ಲ. ಪಕ್ಷದ ಸದಸ್ಯರಿಗೆ ತಾನು ಸದಸ್ಯರಾಗಿರುವ ಘಟಕದ ಸಮ್ಮೇಳನದಲ್ಲಿ ನಡೆಯುವ ಚುನಾವಣೆಯಲ್ಲಿ ಅಭ್ಯರ್ಥಿಯಾಗುವ ಹಕ್ಕಿದೆ. ಹಾಗೇಯೇ ತಳಮಟ್ಟದ ಘಟಕಗಳ ಸಮ್ಮೇಳನದಿಂದ ಪ್ರಾರಂಭವಾಗಿ ಅಖಿಲ ಭಾರತ ಸಮ್ಮೇಳನದ ವರೆಗೆ ಹಂತಹಂತವಾಗಿ ನಡೆಯುವ ಸಮ್ಮೇಳನಗಳಲ್ಲಿ ಪಕ್ಷದ ರಾಜಕೀಯ ಧೋರಣೆ, ಅದನ್ನು ಜಾರಿ ಮಾಡಿದಾಗ ಆಗುವ ಅನುಭವ, ಅದನ್ನು ಜಾರಿಗೊಳಿಸಲು ಒಬ್ಬೊಬ್ಬ ಸಂಗಾತಿಯೂ ವಹಿಸಿದ ಪಾತ್ರ ಇತ್ಯಾದಿಗಳ ಬಗ್ಗೆ ಮುಕ್ತ ವಿಮರ್ಶೆ ಮತ್ತು ಸ್ವಯಂ ವಿಮರ್ಶೆ ಮಾಡಿ ಅದರ ಆಧಾರದಲ್ಲಿ ತಯಾರು ಮಾಡುವಂತಹ ಪಟ್ಟಿಗೆ ಪರ-ವಿರೋಧ ಪ್ರತಿನಿಧಿಗಳು ಮತ ಚಲಾಯಿಸ ಬಹುದು. ಪಟ್ಟಿ ಮಂಡಿಸಿದ ನಂತರ ಅದರಲ್ಲಿರುವ ಪ್ರತಿಯೊಬ್ಬ ಸದಸ್ಯರ ಬಗ್ಗೆ ವಿಮರ್ಶೆ ಮಾಡಲು, ಬದಲಾಯಿಸ ಬೇಕೆಂದು ಕೇಳಲು ಸಮ್ಮೇಳನದಲ್ಲಿ ಭಾಗವಹಿಸಿದ ಪ್ರತಿಯೊಬ್ಬ ಪ್ರತಿನಿಧಿಗೂ ಕೂಡ ಹಕ್ಕಿದೆ. ಈ ಆಧಾರದಲ್ಲಿ ನಡೆಯುವ ವಿಶಾಲವಾದ ಚರ್ಚೆಯ ನಂತರ ಗುಪ್ತ ಮತದಾನದಿಂದ ಸಮಿತಿ ಚುನಾಯಿಸಲ್ಪಡುತ್ತದೆ. ಚುನಾಯಿಸಲ್ಪಟ್ಟ ಸಮಿತಿ ಸೇರಿ ಕಾರ್ಯದರ್ಶಿ ಸೇರಿದಂತೆ ಇತರ ಪದಾಧಿಕಾರಿಗಳನ್ನು ಚುನಾಯಿಸುತ್ತದೆ. ಒಮ್ಮೆ ಚುನಾಯಿಸಲ್ಪಟ್ಟ ಪದಾಧಿಕಾರಿಗಳನ್ನು ಬದಲಾಯಿ ಸುವ ಅಧಿಕಾರ ಚುನಾಯಿಸಲ್ಪಟ್ಟ ಸಮಿತಿಗಿದೆ. ಇದರರ್ಥ ಕಾಂಗ್ರೆಸ್, ಜನತಾದಳ ಇತರೆ ಬೂರ್ಝ್ವಾ ಪಕ್ಷಗಳ ಅಧ್ಯಕ್ಷರುಗಳ ರೀತಿಯಲ್ಲಿ ಪ್ರಧಾನ ಕಾರ್ಯದರ್ಶಿಯೂ ಒಳಗೊಂಡಂತೆ ಸಿಪಿಐ(ಎಂ) ಮುಖಂಡರಿಗೆ ಈ ರೀತಿಯ ಅಧಿಕಾರವಿಲ್ಲ.

ಕಾಂಗ್ರೆಸ್, ಜನತಾದಳ ಸೇರಿದಂತೆ ಬೂರ್ಝ್ವಾ ಪಕ್ಷಗಳ ಅಧ್ಯಕ್ಷ ಸ್ಥಾನದ ರೀತಿ

ಕಾಂಗ್ರೆಸ್(ಐ) ನ ಅಧ್ಯಕ್ಷ ಪದದ ಅಭ್ಯರ್ಥಿಯಾಗಿದ್ದ ಸೀತಾರಾಂಕೇಸರಿ ಬಹುಮತದಿಂದ ಚುನಾಯಿಸ ಲ್ಪಟ್ಟಿದ್ದಾರೆ. ಜನತಾ ಅಧ್ಯಕ್ಷಗಾದಿಗಾಗಿ ಲಾಲೂ ಪ್ರಸಾದ್ ಹಾಗೂ ಶರದ್ ಯಾದವ್ ನಡುವೆ ತೀವ್ರ ಸ್ಪರ್ಧೆ ಏರ್ಪಟ್ಟಿದ್ದು, ಈ ಇಬ್ಬರಲ್ಲಿ ಯಾರು ಹಿತವರು ಎಂಬುವುದು ತೀರ್ಮಾನವಾಗಬೇಕಾಗಿದೆ. ಈ ಸದುದ್ದೇಶದ ಚುನಾವಣೆಯಲ್ಲಿ ಲೋಕಸಭಾ ಮತ್ತು ವಿಧಾನ ಸಭಾ ಚುನಾವಣೆಗಳ ರೀತಿಯಲ್ಲೇ ಒಬ್ಬ ವ್ಯಕ್ತಿ ಸ್ಪರ್ಧಿಸಿ ಮತ ಪಡೆದು ಪ್ರತಿಸ್ಪರ್ಧಿಯನ್ನು ಪರಾಜಯಗೊಳಿಸುತ್ತಾನೆ. ಇದರ ಅರ್ಥ ಇಬ್ಬರ ನಡುವೆ ಪೈಪೋಟಿ ನಡೆಯುತ್ತದೆ ಎಂಬುವುದೇ ಆಗಿದೆ.

ಇಂತಹ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆಲ್ಲುವ ಅಭ್ಯರ್ಥಿಗೆ ಪಕ್ಷದಲ್ಲಿ ವಿಶಾಲವಾದ ಅಧಿಕಾರವಿರುವ ಪದವಿ ಲಭ್ಯವಾಗುತ್ತದೆ. ಕಾಂಗ್ರೆಸ್ ಸಂವಿಧಾನದ ಪ್ರಕಾರ ಆ ಸಂಘಟನೆಯ ಕಾರ್ಯಕಾರಿ ಸಮಿತಿ ಸದಸ್ಯರಲ್ಲಿ ಒಂದು ವಿಭಾಗ ಮಾತ್ರವೇ ಚುನಾಯಿಸಲ್ಪಡುವುದು. ಮತ್ತೊಂದು ವಿಭಾಗವನ್ನು ಅಧ್ಯಕ್ಷರು ನಾಮಕರಣ ಮಾಡುತ್ತಾರೆ. ಕಳೆದ ಚುನಾವಣೆಯಲ್ಲಿ ಆಗಿನ ಅಧ್ಯಕ್ಷರಾದ ಪಿ.ವಿ.ನರಸಿಂಹರಾವ್ ಶರದ್ ಪವಾರ್‌ರನ್ನು ಕಾರ್ಯಕಾರಿ ಸಮಿತಿ ಸ್ಥಾನದಿಂದ ಬದಲಾಯಿಸಿ, ಬದಲಿಗೆ ಬೇರೆಯವರನ್ನು ನಾಮಕರಣ ಮಾಡಿದ್ದರು. ಪ್ರದೇಶ ಸಮಿತಿಯ ಅಧ್ಯಕ್ಷರುಗಳನ್ನು ಅಖಿಲ ಭಾರತ ಅಧ್ಯಕ್ಷರು ನಾಮಕರಣ ಮಾಡುತ್ತಾರೆ. ಹೀಗೆ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಸ್ಥಾನ ವೈಯಕ್ತಿಕ ಹಾಗೂ ವಿಶಾಲವಾದ ಅಧಿಕಾರವಿರುವ ಪದವಿ. ಇಂಥ ಅಧಿಕಾರವಿರುವುದರಿಂದಲೇ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಚರ್ಚಿಸದೆ ಸೀತಾರಾಂ ಕೇಸರಿ ಸಂಯುಕ್ತ ರಂಗ ಸರಕಾರಕ್ಕೆ ನೀಡಿದ ಬೆಂಬಲ ವಾಪಸ್ಸು ಪಡೆದದ್ದು.

ಜನಾತದಳ ಕೂಡ ಇದರಿಂದ ಹೊರತಾಗಿಲ್ಲ. ಈಗಿರುವ ಅಧ್ಯಕ್ಷರಾದ ಲಾಲೂ ಪ್ರಸಾದ್ ಯಾದವ್ ಸ್ವತಃ ಅಭ್ಯರ್ಥಿಯಾಗಿರುವ, ಹೊಸ ಅಧ್ಯಕ್ಷರ ಚುನಾವಣೆ ಹೇಗೆ ಎಲ್ಲಿ ನಡೆಯಬೇಕೆಂದು ಚುನಾವಣೆ ನಡೆಸಲು ನೇಮಿಸಲ್ಪಟ್ಟ ಅಧಿಕಾರಿಗಳಿಗೆದುರಾಗಿ ಯಾವ ಕ್ರಮ ಕೈಗೊಳ್ಳಬೇಕೆಂದು ತೀರ್ಮಾನಿಸಲು ಅಧ್ಯಕ್ಷನಾಗಿರುವುದರಿಂದ ತನಗೆ ಅಧಿಕಾರವಿದೆ ಎಂಬ ವಾದ ಮುಂದಿಟ್ಟಿದ್ದಾರೆ. ತಾನೂ ಅಭ್ಯರ್ಥಿ ಯಾಗಿರುವ ಚುನಾವಣೆಯಲ್ಲಿ ನ್ಯಾಯಾಲಯ ಮಧ್ಯ ಪ್ರವೇಶ ಮಾಡಿದಾಗ

ಸಿಪಿಐ(ಎಂ)ನಲ್ಲಿ ನಾಮಪತ್ರ ಸಲ್ಲಿಸುವ, ಸೂಕ್ಷ್ಮ ಪರಿಶೀಲನೆ ನಂತರ ಚುನಾವಣೆ ನಡೆಸುವುದರ ಬದಲಿಗೆ, ಧೋರಣೆ ರೂಪಿಸುವ ಕೆಲಸದ ಅವಲೋಕನೆಗಾಗಿ ಸೇರುವಂತಹ ಸಮ್ಮೇಳನದಲ್ಲೇ ಚುನಾವಣೆ ನಡೆಯುವುದು. ಲೋಕಸಭಾ, ವಿಧಾನಸಭಾ ಚುನಾವಣೆಗಳಂತೆ ಇಲ್ಲಿ ಚುನಾವಣೆ ನಡೆಯುವುದಿಲ್ಲ. ಪಕ್ಷದೊಳಗೆ ನಡೆಯುವ ಸಾಮೂಹಿಕ ಚರ್ಚೆಯ ಪರಿಣಾಮದ ಹಿನ್ನೆಲೆಯಲ್ಲಿ ಸಿಪಿಐ(ಎಂ)ನಲ್ಲಿ ಚುನಾವಣೆ ನಡೆಯುತ್ತದೆ.

ಇಂತಹ ಚುನಾವಣೆಯಲ್ಲಿ ಯಾವುದೇ ಒಂದು ಹಂತದಲ್ಲಿ ಸ್ವಲ್ಪ ವ್ಯತ್ಯಾಸವಾದರೆ ಸಮಸ್ಯೆ ಉದ್ಭವಿಸಿದರೆ ಆ ಬಗ್ಗೆ ಇರುವ ಆಕ್ಷೇಪಗಳನ್ನು ಬೂರ್ಝ್ವಾ ಪಕ್ಷಗಳು ಮಾಡುವ ರೀತಿಯಲ್ಲಿ ಚುನಾವಣಾ ಆಯೋಗದ ಮುಂದೆ, ನ್ಯಾಯಾಲಯಗಳ ಮುಂದೆಯಾಗಲಿ ಹೋಗುವಂತಹ ಪ್ರಶ್ನೆ ಸಿಪಿಐ(ಎಂ) ಒಳಗೆ ಉದ್ಭವಿಸುವುದಿಲ್ಲ. ಉದಾ: ಕಳೆದ ಸಮ್ಮೇಳನದ ಅವಧಿಯಲ್ಲಿ ನಡೆದ ಕೆಲವು ರಾಜ್ಯ ಸಮ್ಮೇಳನಗಳಲ್ಲಿ ಚುನಾವಣೆ ಬಗ್ಗೆ ಕೆಲವು ಆಕ್ಷೇಪಗಳು ಬಂದಾಗ ಚುನಾವಣಾ ಆಯೋಗದ, ನ್ಯಾಯಾಲಯಗಳ ಬಳಿ ಹೋಗದೆ, ಅದರ ಮೇಲ್ಸಮಿತಿಯ ಬಳಿ ದೂರು ಕೊಂಡೊಯ್ದು, ಆ ದೂರಿನ ಬಗ್ಗೆ ಮೇಲ್ಸಮಿತಿ ಚರ್ಚಿಸಿ ಆ ಮೂಲಕ ಸಮಸ್ಯೆಗೆ ಪರಿಹಾರ ಕಾಣಲಾಯಿತು.

ಪ್ರಜಾಪ್ರಭುತ್ವದ ಕೇಂದ್ರೀಕರಣದ ಆಧಾರ ದಲ್ಲಿ ದಿನನಿತ್ಯದ ಕೆಲಸ ಕಾರ್ಯಗಳನ್ನು ಮಾಡುವುದು ಪಕ್ಷದ ಸಾಧಾರಣ ರಾಜಕೀಯ ಕಾರಣಗಳ ಭಾಗವಾಗಿದೆ. ಸ್ಥಳೀಯ ಘಟಕಗಳಿಂದ ಪ್ರಾರಂಭವಾಗಿ ಕೇಂದ್ರ ಸಮಿತಿಯವರೆಗೆ ಹಂತಹಂತವಾಗಿ ಸಾಮೂಹಿಕ ನಾಯಕತ್ವವನ್ನು ವಿಮರ್ಶೆ - ಸ್ವಯಂ ವಿಮರ್ಶೆಗಳ ಆಧಾರದಲ್ಲಿ ರೂಪಿಸುವ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಸಂಘಟನೆಯ ರೀತಿ ಆ ಸಂಘಟನೆಯ ನೀತಿ ಅನುಸರಿಸಿ ಕೆಲಸ ಮಾಡುವಂತಹ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪಕ್ಷಗಳ ಚುನಾವಣೆ ವಿಷಯದಲ್ಲಿ ಚುನಾವಣಾ ಆಯುಕ್ತರಾಗಲಿ, ನ್ಯಾಯಾಲಯಗಳಾಗಲಿ ಮಧ್ಯೆ ಪ್ರವೇಶಿಸುವ ಪ್ರಶ್ನೆಯೇ ಇಲ್ಲ.

ರಾಜಕೀಯ ಸಂಘಟನೆ ಹಾಗೂ ಇತರ ಪ್ರಶ್ನೆಗಳ ರೀತಿಯಲ್ಲೇ ಪಕ್ಷದ ಆಂತರಿಕ ಚುನಾವಣೆ ಪ್ರಜಾಪ್ರಭುತ್ವ ಕೇಂದ್ರೀಕರಣದ ಆಧಾರದಲ್ಲೇ ಘಟಕಗಳಿಂದ ಆರಂಭಿಸಿ ಕೇಂದ್ರ ಸಮಿತಿಯವರೆಗೆ ತೀರ್ಮಾನ ಕೈಗೊಳ್ಳುತ್ತದೆ.

ಪಕ್ಷದ ಆಂತರಿಕ ವಿಷಯವಾದ ಚುನಾವಣೆಯಲ್ಲಿ ಚುನಾವಣ ಆಯುಕ್ತರಾಗಲಿ, ನ್ಯಾಯಾಲಯ ಗಳಾಗಲೀ ಮಧ್ಯ ಪ್ರವೇಶ ಮಾಡಬಾರದೆಂಬ ಲಾಲೂ ಪ್ರಸಾದ್ ಯಾದವ್‌ರ ವಾದವು ಸರಿಯಾಗಿದೆ. ಆದರೆ ಅದು ಕಾರ್ಯರೂಪಕ್ಕೆ ಬರಬೇಕಾದರೆ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪಕ್ಷಗಳ ರೀತಿಯಲ್ಲೇ ಬೂರ್ಝ್ವಾ ಪಕ್ಷಗಳಲ್ಲಿಯೂ, ಪ್ರಜಾ ಸತ್ತಾತ್ಮಕ ಕೇಂದ್ರೀಕರಣದ ತತ್ವವನ್ನು ಕಾರ್ಯರೂಪಕ್ಕೆ ತರಬೇಕಾಗಿದೆ. ಇಲ್ಲವಾದರೆ ಚುನಾವಣೆಗಳನ್ನು ಅನಿಶ್ಚಿತವಾಗಿ ಮುಂದಕ್ಕೆ ಹಾಕಿಕೊಂಡು ಹೋಗುವುದು ಚುನಾವಣಾ ಆಯೋಗದ ಒತ್ತಾಯದಿಂದಾಗಿ ಚುನಾವಣೆ ನಡೆಯುವಾಗ ಅದರಲ್ಲಿ ಮೋಸ, ಮತಪೆಟ್ಟಿಗೆ ಕಸಿಯುವುದು, ಅದರಿಂದ ಚುನಾವಣಾ ಆಯೋಗದ ಮುಂದೆ, ನ್ಯಾಯಾಲಯದ ಬಳಿಗೆ ಕೊಂಡೊಯ್ಯಲು ಅವಕಾಶವಾಗುತ್ತದೆ. ಈ ತರಹದ ಚುನಾವಣೆಗಳು ಕೊನೆಗೊಳ್ಳಬೇಕಾಗಿದೆ.

ಸಂಗ್ರಹ - ಇ.ಕೆ.ಎನ್.ರಾಜನ್
ಜಯರಾಮು

ಅಣಕ – ಶರತ್ ಚಂದ್ರ

ಕಾಪಿ ಹೊಡೆದರೇನು ಶಿವ ....!

ಒಂದು ದಿನ, 1997

ಮಾನ್ಯರೆ,

ನಿಮ್ಮ ಘನ ಪತ್ರಿಕೆಯಲ್ಲಿ ನಮ್ಮ ರಾಜ್ಯದ ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಕಾಪಿ ಹೊಡೆದು ಡಿಗ್ರಿ ಪಡೆದಿದ್ದು ಎಂಬ ಆಪಾದನೆ ಬಂದಿರುವುದರಿಂದ ರಾಜೀನಾಮೆ ಕೊಡಬೇಕೆಂದು ಪ್ರಕಟವಾಗಿದೆ. ವಿಧಾನ ಸಭೆಯಲ್ಲಿ ಈ ಬಗ್ಗೆ ಗುಲ್ಲೆದ್ದಿದ್ದು ವರದಿಯಾಗಿದೆ.

ಆ ಆಪಾದನೆಯನ್ನು ವಿಶೇಷ ತನಿಖಾ ಸಮಿತಿ ಅಲ್ಲಗಳೆದಿದ್ದು ಬಿಟ್ಟು ಬಿಡಿ. ನನ್ನ ಅಭಿಪ್ರಾಯದ ಪ್ರಕಾರ ಆ ಆಪಾದನೆ ನಿಜವಾದರೂ ಉನ್ನತ ಶಿಕ್ಷಣ ಮಂತ್ರಿಗಳು ರಾಜೀನಾಮೆ ಕೊಡಬಾರದು ಅಂತ.

ಯಾಕಂತೀರಾ? ನಮಗೆ ಒಬ್ಬ ಮೇಸ್ಟರು ಇದ್ದರು, ಹೈಸ್ಕೂಲಿನಲ್ಲಿ ಕಾಪಿ ಹೊಡೆಯುವವರನ್ನು, ಹಿಂದಿನ ಸಾಲಿನಿಂದ ಗಲಾಟೆ ಮಾಡುವ ಹುಡುಗರನ್ನು ಹಿಡಿಯುವುದರಲ್ಲಿ ನಿಸ್ಸೀಮರು. ಅವರ ಯಶಸ್ಸಿನ ಗುಟ್ಟು ಕೇಳಲಾಗಿ ಅವರ ಉತ್ತರ -- ನಾನು ಇದನ್ನೆಲ್ಲಾ ಮಾಡಿ ಬಂದವ, ಬರಿ ನೋಡಿ ಬಂದವನಲ್ಲ ಅಂತ. ಅವರು ಭಾರಿ ಯಶಸ್ವಿ ಮೇಸ್ಟರರಾಗಿದ್ದರು ಎಂದು ಬೇರೆ ಹೇಳಬೇಕಾಗಿಲ್ಲವಲ್ಲ..

ಕಾಪಿ ಹೊಡೆದು ಅನುಭವ ಇರುವವರು ಉನ್ನತ ಶಿಕ್ಷಣವನ್ನು ಉತ್ತಮ ರೀತಿಯಲ್ಲಿ ನಡೆಸುವರು ಎಂದು ನನ್ನ ನಂಬಿಕೆ.

ನಿಮ್ಮ ಘನ ಪತ್ರಿಕೆಯಲ್ಲಿ ಈ ಪತ್ರ ಪ್ರಕಟಿಸುವ ಧೈರ್ಯ ತೋರುವಿರಾ?

ಇತಿ
ಕಾಪಿರೈಟರ್ ಸೋಮಣ್ಣ

ಮರುದಿನ 1997

ಮಾನ್ಯರೇ,

ಕಾಪಿರೈಟರ್ ಸೋಮಣ್ಣನವರ ಪತ್ರಕ್ಕೆ ಇದು ಪ್ರತಿಕ್ರಿಯೆ. ಎಂತಹ ಘನವಾದ ಐಡಿಯಾ! ಇದೇ ಐಡಿಯಾವನ್ನೇ ನಾನು ಇನ್ನೂ ಬೆಳೆಸಿದ್ದೇನೆ.

ವೀರಪ್ಪನ್ ಗ್ಯಾಂಗ್‌ನ ಸದಸ್ಯ ರೊಬ್ಬರನ್ನು ಗೃಹಮಂತ್ರಿಯಾಗಿಯೂ, ಜೈಲಿನಲ್ಲಿದ್ದ ಅನುಭವಿಯಾಗಿರುವವರನ್ನು ಜೈಲು ಮಂತ್ರಿಯಾಗಿ, ಕೋ-ಆಪರೇಟಿವ್ ಬ್ಯಾಂಕ್ ಹಗರಣದ ಅನುಭವವಿರುವವರನ್ನು ಅರ್ಥಮಂತ್ರಿಯಾಗಿಯೂ ನೇಮಿಸಬೇಕೆಂದು ನನ್ನ ನಮ್ರ ವಿನಂತಿ.

ವಿದೇಶಕ್ಕೆ ಹೋಗಿ ಬಂದವರನ್ನೆಲ್ಲಾ ವಿದೇಶ ಮಂತ್ರಿಯಾಗಿ ನೇಮಿಸಬೇಕೆಂದು ಸೂಚಿಸುವವನಿದ್ದೆ. ಆದರೆ ನಮ್ಮ ರಾಜ್ಯದಲ್ಲಿ ಏಳೆಂಟು ಮಂತ್ರಿಗಳು ವಿದೇಶಕ್ಕೆ ಹೋಗಿರುವುದರಿಂದ ಇದು 'ಪ್ರಾಕ್ಟಿಕಲ್' ಆಗಲಿಕ್ಕಿಲ್ಲ ಎಂದಿರಾ? ಅದಕ್ಕೊಂದು ಭಾರೀ ಐಡಿಯಾ ಇದೆ. ವಿದೇಶ ಮುಖ್ಯ ಮಂತ್ರಿ, ವಿದೇಶಿ ಪವರ್ ಮಂತ್ರಿ, ವಿದೇಶಿ ಅರ್ಥಮಂತ್ರಿ ಇತ್ಯಾದಿ ನೇಮಿಸಿದರೆ ಹೇಗೆ?

ಈ ಪತ್ರವನ್ನೂ ಪ್ರಕಟಿಸುವ ಧೈರ್ಯ ತೋರುವಿರಾ?

ಇತಿ
ಸರ್ವರ್ ಸೋಮಣ್ಣ



ಸೈಕಲ್: "ಸ್ವಚ್ಛನಾದ, ಹಚ್ಚನಾದ, ಪ್ರಶಾಂತ ಸವಾರಿ"

ಸೈಕಲ್ಲು ಭೂಮಿಯ ಮೇಲಿನ ಅತ್ಯಂತ ದಕ್ಷ ಸವಾರಿ ಎಂದಿದೆ ಬ್ರಿಟನ್ನಿನ ಒಂದು ಪ್ರಮುಖ ಗ್ರೀನ್ ಗುಂಪು ಅಂದರೆ ಪರಿಸರ ಪ್ರೇಮಿ ಗುಂಪು. ಸೈಕಲ್ ಸ್ವಚ್ಛವಾದ, ಹಚ್ಚನಾದ ಪ್ರಶಾಂತ ಸವಾರಿ. ಆದರೆ ಇಂಧನ ಉಳಿಸಬೇಕೆನ್ನುವ ಈ ಕಾಲದಲ್ಲೂ ಅದಕ್ಕೆ ಮಾನ್ಯತೆಯಿಲ್ಲ. ನಡಿಗೆ ಹಾಗೂ ಸೈಕಲ್ ಸವಾರಿಗೆ ಈಗಲೂ ಅತೀ ಕೆಳಗಿನ ಸ್ಥಾನ ಎಂದು ಈ ಹಚ್ಚನೆಯ ಗುಂಪು ಖೇದ ವ್ಯಕ್ತಪಡಿಸಿದೆ. ಆದರೆ ನಡಿಗೆಯಂತೆ ಸೈಕಲ್ ಸವಾರಿಯೂ ಕೆಲವು ಉತ್ತಮ ಅಂಶಗಳನ್ನೊಳಗೊಂಡಿದ್ದು 21 ನೇ ಶತಮಾನದಲ್ಲಿ ಬಹಳ ಮಹತ್ವದ್ದಾಗಬೇಕು ಎಂದು ಈ ಸಂಸ್ಥೆಯ ಪತ್ರಿಕೆ 'ಅರ್ಥ್ ಮ್ಯಾಟರ್ಸ್' (ಪೃಥ್ವಿಯ ಸಂಗತಿಗಳು) ಹೇಳಿದೆ. ಈ ಕೆಲವು ಲೆಕ್ಕಾಚಾರಗಳನ್ನು ನೋಡಿ.

- 1 ಗ್ಯಾಲನ್ ಪೆಟ್ರೋಲಿನ ಸಮನಾದ ಆಹಾರಶಕ್ತಿಯಿಂದ 1500 ಮೈಲಿಗಳಷ್ಟು ಮಾಲಿನ್ಯ ರಹಿತ ಪ್ರಯಾಣ ಸೈಕಲಿನಲ್ಲಿ ಸಾಧ್ಯ.
- ರಸ್ತೆಗಳ ಜನಗಳನ್ನು ಸಾಗಿಸುವ ಸಾಮರ್ಥ್ಯವನ್ನು 6 ಪಟ್ಟು ಹೆಚ್ಚಿಸಲು ಸೈಕಲ್ ನೆರವಾಗುತ್ತದೆ. ಏಕೆಂದರೆ ಕಾರು ಇತ್ಯಾದಿಗಳನ್ನು ಹೋಲಿಸಿದರೆ ಇದು ಆಕ್ರಮಿಸುವ ಜಾಗ ಬಹಳಷ್ಟು ಕಮ್ಮಿ. ಇದರಿಂದ ದೊಡ್ಡ ನಗರಗಳಲ್ಲಿನ ವಾಹನ ನಿಲುಗಡೆ(ಪಾರ್ಕಿಂಗ್) ಸಮಸ್ಯೆಯೂ ಅಷ್ಟೇ ಕಮ್ಮಿಯಾಗುತ್ತದೆ.
- ವಾಹನ ಸಂಚಾರದಲ್ಲಿ 1% ಕಮ್ಮಿಮಾಡಿ ಸೈಕಲ್‌ಗಳನ್ನು ಬಳಿಸಿದರೆ 2% ರಷ್ಟು ಮಾಲಿನ್ಯ ಕಡಿಮೆಯಾಗುತ್ತದೆ. ಪ್ರತಿಯೊಂದು ಹೊಸಕಾರು ಪ್ರತಿವರ್ಷ ನೂರು ಪೌಂಡ್ ಮಾಲಿನ್ಯ ವಸ್ತುಗಳನ್ನು ಕಾರುತ್ತದೆ. ಕಾರಿನ ಬದಲು ಸೈಕಲ್ ಬಳಸಿದರೆ ಪ್ರತಿ ಮೈಲಿಗೆ ಗಾಳಿಯಲ್ಲಿ ಹೈಡ್ರೋಕಾರ್ಬನ್ ಮಟ್ಟ 2.6 ಗ್ರಾಂನಷ್ಟು, ಕಾರ್ಬನ್ ಮೊನೋಕ್ಸೈಡ್ 20 ಗ್ರಾಂ ನಷ್ಟು ಹಾಗೂ ನೈಟ್ರೋಜನ್ ಆಕ್ಸೈಡ್‌ಗಳ ಮಟ್ಟ 1.6 ಗ್ರಾಂ ನಷ್ಟು ಕಮ್ಮಿಯಾಗುತ್ತದೆ.
- ಅರ್ಧ ಗಂಟೆ ಸೈಕಲ್ ಸವಾರಿ ಅರ್ಧಗಂಟೆಯಿಂದ ಒಂದು ಗಂಟೆಯವರೆಗೆ ಹೆಲ್ತ್‌ಕ್ಲಬ್‌ಗಳಲ್ಲಿ ಕಳೆಯುವುದಕ್ಕಿಂತ ಉತ್ತಮ.
- ಐದು ಮೈಲಿ ಅಥವಾ ಅದಕ್ಕಿಂತ ಕಮ್ಮಿ ದೂರ ಚಲಿಸಬೇಕೆಂದಿದ್ದರೆ ದೊಡ್ಡ ನಗರಗಳಲ್ಲಿ ಸೈಕಲ್ ಅತ್ಯಂತ ವೇಗದ ವಾಹನ !

ಈ ಪತ್ರಿಕೆ ಇನ್ನೂ ಒಂದು ಅಂಶವನ್ನು ಹೇಳಿದೆ. 'ಕಾರ್ ಅವಲಂಬಿತ ಸಂಸ್ಕೃತಿ' ಹಾಗೂ ಅದು ನೀಡುವ 'ಚಲನೆ' ನಿಜವಾಗಿ ನೆರೆಕರೆ ಗುಂಪನ್ನು ನಾಶ ಮಾಡುವ, ನಾವು ಬದುಕುವ ಪರಿಸರ ಹಾಗೂ ಅದರಲ್ಲಿ ಬದುಕುವ ಜನಗಳಿಂದ ದೂರಗೊಳಿಸುವ ಮಾನಸಿಕ ಮತ್ತು ದೈಹಿಕ ಅಡೆತಡೆಗಳನ್ನು ನಿರ್ಮಿಸುವ 'ಚಲನೆ' ಎಂದಿದೆ.

ಬಂಡವಾಳ ಶಾಹಿ ಪದ್ಧತಿ, ಉದಾರೀಕರಣ ಬೆಳೆಸುವ 'ಸಂಸ್ಕೃತಿ' ಇದೇತಾನೆ?

KRNM/BGS-405 MAG (2) PRB DECR 319-79/79.

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು – 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು